
ಪ್ರಚೋದನೆ


ಲಂಕೇಶ್

ಸಂಘ ಪರಿವಾರದ ಹೊಸ ಉಪಟಳಗಳು

ಮಾರ್ಚ್ 14, 2012 ಪುಟ 20 ರೂ. 14/-



ಕಾಡು ಮಂತ್ರಿಗೆ ಕಾದಿದೆ ಜೈಲು




ಉಡುಪಿ-ಚಿಕ್ಕಮಗಳೂರು ಉಪಚುನಾವಣೆ

ಭಜರಂಗಿ ಭೂತ V/s ಜನಪರ ಜೆಪಿ

ತುಲ್ಯ : ಬಕಾಸುರನ ಬಾಯಿಗೆ ಬೊಕ್ಕಸದ ಹಣ

ರಾಧಿಕಾಳ 'ಲಕ್ಕಿ'ಲಾಗಾ




ಕೊಟ್ಲಲಪ್ಪೋ ಕೈ

ಡರ್ಟಿ ಪಿಕ್ಚರ್ ಸುತ್ತ ಕಿತ್ತಾಟ



ಲಂಕೇಶ್ 77



ದಿನಾಂಕ: 11-3-2012 ರ ಭಾನುವಾರ

ಸಮಯ ಬೆಳಗ್ಗೆ 10-30 ರಿಂದ ಸಂಜೆ 8 ರವರೆಗೆ
ಸ್ಥಳ ಸಂತ ಅಲೋಶಿಯಸ್ ಪದವಿ ಕಾಲೇಜು ಸಭಾಂಗಣ, ಮಂಗಳೂರು.

10.30ಕ್ಕೆ ಉದ್ಘಾಟನಾ ಸಮಾರಂಭ

ಉದ್ಘಾಟನೆ : ದೇವನೂರು ಮಹಾದೇವ
'ಪಾಂಚಾಲಿ' ಪುಸ್ತಕ ಬಿಡುಗಡೆ : ಸುರೇಶ್ ಭಟ್ ಬಾಕ್ರಬೈಲು
ಅಧ್ಯಕ್ಷತೆ : ಗೌರಿ ಲಂಕೇಶ್
ನಿರ್ವಹಣೆ : ದಿನಕರ್ ಎಸ್. ಬೇಂಗ್ರೆ

ಗೋಷ್ಠಿ-1

ಕರಾವಳಿ ಎದುರಿಸುತ್ತಿರುವ ಬಿಕ್ಕಟ್ಟುಗಳು

ವಿಷಯ ಮಂಡಣೆ : ಜಿ. ರಾಜಶೇಖರ
ಮುಖ್ಯ ಭಾಷಣಕಾರರು : ವಿಠಲ್ ಹೆಗ್ಡೆ ಮತ್ತು ಭೂಮಿಗೌಡ
ಪ್ರತಿಸ್ಪಂದನೆ : ಡಾ. ಎಚ್.ಎಸ್.ಅನುಪಮ, ಹಯವದನ ಉಪಾಧ್ಯಾಯ, ಪಿ.ವಿ.ಮೋಹನ್, ವಾಸುದೇವ್ ಬೆಳ್ಳೆ
ಅಧ್ಯಕ್ಷತೆ : ಸಾರಾ ಅಬೂಬಕ್ಕರ್
ನಿರ್ವಹಣೆ : ಇಸ್ಮತ್ ಫಜೀರ್

ಗೋಷ್ಠಿ-2


ಕರ್ನಾಟಕದ ತಲ್ಲಣಗಳು

ವಿಚಾರ ಮಂಡಣೆ : ಕೆ. ಫಣಿರಾಜ್
ಮುಖ್ಯ ಭಾಷಣಕಾರರು : ಡಾ. ಎಚ್. ವಾಸು ಮತ್ತು ಬಿ.ಎಂ.ಬಷೀರ್
ಪ್ರತಿಸ್ಪಂದನೆ : ಅರವಿಂದ್ ಚೊಕ್ಕಾಡಿ, ವಸಂತ್ ಬನ್ನಾಡಿ, ವಿವೇಕಾನಂದ ತಾಂಡೇಲ
ಅಧ್ಯಕ್ಷತೆ : ರಾಜರಾಮ್ ತೊಲ್ಪಾಡಿ
ನಿರ್ವಹಣೆ : ಶಶಿಧರ್ ಹೆಮ್ಮಾಡಿ

ಸಂಜೆ 4.30ಕ್ಕೆ ಸಮಾರೋಪ ಸಭೆ
ಸಮಾನ ಸೌಹಾರ್ದ ಕರ್ನಾಟಕ

ವಿಚಾರ ಮಂಡಣೆ : ಪಾರ್ವತೀಶ
ಮುಖ್ಯ ಭಾಷಣಕಾರರು : ಫಾದರ್ ಮಾರ್ಟೀಸ್ ಮತ್ತು ಫಕೀರ್ ಮಹಮದ್ ಕಟ್ಪಾಡಿ
ಅಧ್ಯಕ್ಷತೆ : ಎ.ಕೆ.ಸುಬ್ಬಯ್ಯ
ನಿರ್ವಹಣೆ : ದೊಡ್ಡಿಪಾಳ್ಯ ನರಸಿಂಹಮೂರ್ತಿ

ಎಲ್ಲರಿಗೂ ಪ್ರೀತಿಯ ಸ್ವಾಗತ



ಸಾದತ್ ಹಸನ್ ಮಾಂಟೋ ಅವರ

ಮಿಸ್ಟೇಕ್ ನಾಟಕ

ರಥಬೀದಿ ಗೆಳೆಯರು, ಉಡುಪಿ, ತಂಡದಿಂದ


ನಿರ್ದೇಶನ:
ಡಾ.ಶ್ರೀಪಾದ ಭಟ್, ಶಿರಸಿ
ನಾಟಕ : ಸಂಜೆ 6.30ಕ್ಕೆ

ಎಲ್ಲೆಲ್ಲೂ ಜನದ್ರೋಹಿ ಸರ್ಕಾರಗಳು



• ಗೌರಿ ಲಂಕೇಶ್
editorlankesh@gmail.com

ಕಾಂಗ್ರೆಸ್ ನೇತೃತ್ವದ ಕೇಂದ್ರ ಸರ್ಕಾರಕ್ಕೆ ಮತ್ತು ಬಿಜೆಪಿಯ ರಾಜ್ಯ ಸರ್ಕಾರಕ್ಕೆ ಎರಡಕ್ಕೂ ಬಿಡಿಸಲಾಗದಂತಹ ಹುಚ್ಚು ಹಿಡಿದಿರುವಂತಿದೆ. ದೆಹಲಿಯಲ್ಲಿ ಪ್ರಧಾನಮಂತ್ರಿ ಮನಮೋಹನ್ ಸಿಂಗ್ ಅವರು ಕುಡಂಕುಲಂ ಅಣುಸ್ಥಾವರದ ವಿರುದ್ಧ ನಡೆಯುತ್ತಿರುವ ಜನರ ಪ್ರತಿರೋಧದ ಹಿಂದೆ ವಿದೇಶಿ ಸರ್ಕಾರೇತರ ಸಂಸ್ಥೆಗಳ ಕುಮ್ಮಕ್ಕು ಇದೆ ಎಂದು ಆರೋಪಿಸಿದರೆ, ಇಲ್ಲಿ ಬೆಂಗಳೂರಿನಲ್ಲಿ ಬಿಜೆಪಿಯ ಲಜ್ಜೆಗೆಟ್ಟ ಮೂವರು ಮಂತ್ರಿಗಳು ವಿಧಾನಸಭೆಯಲ್ಲಿ ಅಪಾರ ಶ್ರದ್ಧೆಯಿಂದ ಬ್ಲೂ ಫಿಲಂ ವೀಕ್ಷಿಸುತ್ತಿರುವ ದೃಶ್ಯವನ್ನು 'ಯಾಕೆ ಸೆರೆಹಿಡಿದಿರಿ? ಅದನ್ನು ಯಾಕೆ ಪ್ರಸಾರ ಮಾಡಿದಿರಿ?' ಎಂದು ಖಾಸಗಿ ಚಾನೆಲ್ ಅವರನ್ನೇ ಸದನ ಸಮಿತಿ ಪ್ರಶ್ನಿಸಿದೆ!



ಬಿಜೆಪಿಯವರದ್ದು ಎಂತಹ ಭಂಡತನವೆಂದರೆ ಆ ಪಕ್ಷದ ಸದಸ್ಯರೇ ಇರುವ ಈ ಸದನ ಸಮಿತಿಯು ಟಿವಿ ಚಾನೆಲ್‌ನವರಿಗೆ ಕೇಳಿದ ಐದು ಪ್ರಶ್ನೆಗಳ ಹಿಂದಿರುವ ಉದ್ದೇಶವೇ ತಪ್ಪೆಸಗಿದ ಮಂತ್ರಿಗಳ ವಿರುದ್ಧ ಕ್ರಮ ಕೈಗೊಳ್ಳುವ ಬದಲಾಗಿ ಅವರ ತಪ್ಪನ್ನು ಜಗಜ್ಜಾಹೀರು ಮಾಡಿದ ಟಿವಿ ಚಾನೆಲ್‌ನವರ ಮೇಲೆ ಗೂಬೆ ಕೂರಿಸುವುದಾಗಿದೆ. ನಿನ್ನೆ ಆ ಸಮಿತಿಯು ಟಿವಿ ಚಾನೆಲ್‌ನವರಿಗೆ ಕೇಳಿದ ಐದು ಪ್ರಶ್ನೆಗಳಿಗೆ ಮರು ಪ್ರಶ್ನೆಗಳನ್ನು ಕೇಳುವುದು ಇವತ್ತಿನ ಅನಿವಾರ್ಯವಾಗಿದೆ. ಅವು ಹೀಗಿವೆ:

ಸಮಿತಿಯ ಪ್ರಶ್ನೆ ನಂಬರ್ 1: ತಮ್ಮ ಸಂಸ್ಥೆಯ ಪ್ರತಿನಿಧಿಯನ್ನು ಯಾವ ಉದ್ದೇಶಕ್ಕೆ ವಿಧಾನಸಭೆಗೆ ನಿಯೋಜನೆ ಮಾಡುತ್ತೀರಿ?

ಮರು ಪ್ರಶ್ನೆ ನಂಬರ್ 1: ನಿಮ್ಮ ಪಕ್ಷದವರು ಯಾವ ಉದ್ದೇಶಕ್ಕಾಗಿ ಶಾಸಕರನ್ನು ವಿಧಾನಸಭೆಗೆ ಕಳುಹಿಸುತ್ತೀರಿ? ಜನರ ಸಮಸ್ಯೆಗಳ ಬಗ್ಗೆ ಚರ್ಚಿಸುವುದಕ್ಕೋ ಅಥವಾ ಅದ್ಭುತವಾದ ಏಕಾಗ್ರತೆಯಿಂದ ನಂಗಾನಾಚ್ ನೋಡುವುದಕ್ಕೋ?

ಸಮಿತಿಯ ಪ್ರಶ್ನೆ ನಂಬರ್ 2: ಕಾರ್ಯಕಲಾಪ ಮಾತ್ರ ಚಿತ್ರೀಕರಿಸಿ ವರದಿ ಮಾಡುವುದಕ್ಕಾಗಿ ವಿಧಾನಸಭೆ ಸಚಿವಾಲಯದಿಂದ ಪ್ರವೇಶ ಪಡೆದ ನಂತರ ಮೂಲ ಉದ್ದೇಶ ಮರೆತು ಅಸಭ್ಯ/ ಅನವಶ್ಯಕ ವಿಷಯಗಳನ್ನು ಕ್ಯಾಮೆರಾ ಮೂಲಕ ಸೆರೆ ಹಿಡಿದಿರುವುದು ಸರಿಯೇ? ಇದರ ಹಿಂದಿನ ಉದ್ದೇಶವೇನು?

ಮರು ಪ್ರಶ್ನೆ ನಂಬರ್ 2: ಈ ರಾಜ್ಯದ ಜನರು ತಮ್ಮ ಸಮಸ್ಯೆಗಳ ಬಗ್ಗೆ ತಮ್ಮ ಪ್ರತಿನಿಧಿಗಳು ಚರ್ಚಿಸಲಿ ಎಂದು ಅವರನ್ನು ವಿಧಾನಸಭೆಗೆ ಚುನಾಯಿಸಿ ಕಳುಹಿಸಿದ್ದರೆ ಅವರು ತಮ್ಮ ಮೂಲ ಕರ್ತವ್ಯವನ್ನು ಮರೆತು ವಿಧಾನಸಭೆಯಲ್ಲಿ ಅಸಭ್ಯ/ ಅಸಹ್ಯ ವಿಡಿಯೋಗಳನ್ನು ಮೊಬೈಲ್‌ನಲ್ಲಿ ನೋಡುತ್ತಾ ಕೂತಿದ್ದು ಸರಿಯೇ? ಈ ಮಾಜಿ ಮಂತ್ರಿಗಳ ಮೂಲ ಆಸಕ್ತಿ ಯಾವುದು? ಜನರ ಬೇಡಿಕೆಗಳೋ, ನಗ್ನ ಮಹಿಳೆಯರೋ?

ಸಮಿತಿಯ ಪ್ರಶ್ನೆ ನಂಬರ್ 3: ಸದನದ ನಡವಳಿಕೆ ಹೊರತುಪಡಿಸಿ ಉಳಿದ ವಿಷಯ ಚಿತ್ರೀಕರಿಸಿ ತಮ್ಮ ವೃತ್ತಿ ಕೌಶಲ್ಯವನ್ನು ದುರುಪಯೋಗಪಡಿಸಿಕೊಂಡಿದ್ದಲ್ಲದೆ, ಇಂತಹ ದೃಶ್ಯ ಅಸಂಸದೀಯವಾಗುವುದೆಂಬ ಅರಿವಿದ್ದರೂ ಸಭಾಧ್ಯಕ್ಷರ ಅನುಮತಿ ಇಲ್ಲದೆ ವೈಭವೀಕರಿಸಿ, ಪ್ರಸಾರಿಸಿರುವುದು ನ್ಯಾಯಸಮ್ಮತವೆ?

ಮರು ಪ್ರಶ್ನೆ ನಂಬರ್ 3: ಸದನದಲ್ಲಿ ಮುಖ್ಯವಾದ ಚರ್ಚೆ ನಡೆಯುತ್ತಿದ್ದರೂ ಅದನ್ನು ನಿರ್ಲಕ್ಷಿಸಿ, ಜನರು ತಮಗೆ ನೀಡಿರುವ ಜವಾಬ್ದಾರಿಯನ್ನು ಮರೆತು, ಜನರ ಭಾವನೆಗೆ ಆಘಾತ ಉಂಟುಮಾಡುವಂತಹ ಸೆಕ್ಸ್ ದೃಶ್ಯಗಳನ್ನು ಕದ್ದು ಹರಿಬಿಟ್ಟುಕೊಂಡು, ಅವುಗಳನ್ನು ಗುಟ್ಟಾಗಿ ವೀಕ್ಷಿಸುವ ಮೂಲಕ ರಾಜ್ಯದ ಮಾನವನ್ನು ಜಗತ್ತಿನಾದ್ಯಂತ ಹರಾಜು ಹಾಕಿದ್ದು ನ್ಯಾಯಸಮ್ಮತವೆ?

ಸಮಿತಿಯ ಪ್ರಶ್ನೆ ನಂಬರ್ 4: ವಿದ್ಯುನ್ಮಾನ ಮಾಧ್ಯಮದಿಂದ ಅಸಭ್ಯ/ಅನವಶ್ಯಕ ಮತ್ತು ಸದಭಿರುಚಿಯಿಂದ ಹೊರತಾದ ವಿಷಯಗಳನ್ನು ಸೆರೆಹಿಡಿದು ಪ್ರಸಾರ ಮಾಡಿದರೆ ಕರ್ನಾಟಕ ವಿಧಾನ ಸಭೆಯ ಪತ್ರಿಕಾ ಗ್ಯಾಲರಿಗೆ ನಿಯಂತ್ರಿಸುವ ನಿಯಮ 16, 17 ಮತ್ತು 20ರ ಸ್ಪಷ್ಟ ಉಲ್ಲಂಘನೆ ಯಾಗುತ್ತದೆ ಎಂಬುದು ತಿಳಿದಿಲ್ಲವೆ?

ಮರು ಪ್ರಶ್ನೆ ನಂಬರ್ 4: ಆಧುನಿಕ ಮೊಬೈಲ್ ಸೆಟ್‌ಗಳನ್ನು ಬಳಸಿ, ಅವುಗಳಲ್ಲಿ ಹತ್ತಾರು ಸೆಕ್ಸ್ ವೀಡಿಯೋ, ನಗ್ನ ಚಿತ್ರಗಳನ್ನು ಇಟ್ಟುಕೊಂಡು, ಅವನ್ನು ವಿಧಾನಸಭೆಯಲ್ಲೇ ನೋಡುತ್ತಾ ಕೂತಿದ್ದು ನಮ್ಮ ಸಂವಿಧಾನಕ್ಕೆ, ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾಡಿದ ಅವಮಾನ ಎಂಬುದು ನಿಮಗೆ ತಿಳಿದಿಲ್ಲವೇ?

ಸಮಿತಿಯ ಪ್ರಶ್ನೆ ನಂಬರ್ 5: ಭಾರತ ಸಂವಿಧಾನದ ಆಶಯದಂತೆ ಪ್ರತಿಯೊಬ್ಬ ನಾಗರಿಕನಿಗೂ ಅಭಿವ್ಯಕ್ತಿ ಸ್ವಾತಂತ್ರ್ಯ ದಯಪಾಲಿಸಿದ್ದಾಗ್ಯೂ ಸಾರ್ವಜನಿಕ ಸುವ್ಯವಸ್ಥೆ ಹಾಗೂ ಸಭ್ಯತೆಯ ದೃಷ್ಟಿಯಿಂದ ಇಂತಹ ದೃಶ್ಯಾವಳಿಗಳನ್ನು ಚಿತ್ರೀಕರಿಸಿರುವುದು, ಸಾರ್ವಜನಿಕವಾಗಿ ವೈಭವೀಕರಿಸಿ ಪ್ರದರ್ಶಿಸಿರುವುದು ಸಮಂಜಸವೆ?

ಮರು ಪ್ರಶ್ನೆ ನಂಬರ್ 5: ಭಾರತದ ಸಂವಿಧಾನದ ಆಶಯದಂತೆ ಜನರು ಈ ಮೂವರು ಬಿಜೆಪಿ ಮಂತ್ರಿಗಳಿಗೆ ಅಧಿಕಾರವನ್ನು ದಯಪಾಲಿಸಿದ್ದರೂ ಅದನ್ನು ಈ ತ್ರಿಮೂರ್ತಿಗಳು ಮರೆತು ಸರ್ಕಾರದ ಮತ್ತು ಜನರ ಅಮೂಲ್ಯ ಸಮಯ ಹಾಗು ಹಣವನ್ನು ಇಂತಹ ಅಸಹ್ಯದ ದೃಶ್ಯಾವಳಿಗಳನ್ನು ನೋಡುವ ಮೂಲಕ ದುರುಪಯೋಗ ಮಾಡಿದ್ದು ಸರಿಯೇ?

ಸೆಕ್ಸ್ ಸಿನಿಮಾ ನೋಡಿ ಸಿಕ್ಕಿಬಿದ್ದಿರುವ ತಮ್ಮ ಮಾಜಿ ಮಂತ್ರಿಗಳನ್ನು ರಕ್ಷಿಸಲು ಬಿಜೆಪಿಗಳು ಇಂತಹ ಪ್ರಶ್ನೆಗಳನ್ನೇ ಮಾಧ್ಯಮಗಳ ಮುಂದಿಡುತ್ತಾರೆಂದರೆ ಈ ಸ್ವಘೋಷಿತ 'ದೇವರ ಪಕ್ಷ'ವನ್ನು ನೋಡಿ ಅದ್ಯಾವ ಪರಮಾತ್ಮ ಮೆಚ್ಚುತ್ತಿದ್ದಾನೋ...

***

ಈಗ ಎಲ್ಲರಿಗೂ ಗೊತ್ತಿರುವಂತೆ ಕಳೆದ ಏಳು ತಿಂಗಳುಗಳಿಂದ ತಮಿಳುನಾಡಿನ ತಿರುನೆಲ್ವೇಲಿ ಜಿಲ್ಲೆಯಲ್ಲಿ ಸಾವಿರಾರು ಗ್ರಾಮಸ್ಥರು ಕುಡಂಕುಲಂ ಅಣು ಸ್ಥಾವರದ ವಿರುದ್ಧ ಪ್ರತಿಭಟಿಸುತ್ತಲೇ ಬಂದಿದ್ದಾರೆ. ಅವರದ್ದು ಅದೆಷ್ಟು ಪ್ರಬಲವಾದ ವಿರೋಧವೆಂದರೆ ಇಷ್ಟೊತ್ತಿಗಾಗಲೇ ವಿದ್ಯುತ್ ತಯಾರಿಸುವ ಕಾರ್ಯಾಚರಣೆಯನ್ನು ಪ್ರಾರಂಭಿಸಬೇಕಿದ್ದ ಸ್ಥಾವರದಲ್ಲಿನ ಎಲ್ಲ ಕೆಲಸಗಳೂ ಸ್ಥಗಿತಗೊಂಡಿದೆ.

ಹೇಳಿಕೇಳಿ ಪ್ರಧಾನಿ ಮನಮೋಹನ್ ಸಿಂಗ್ ಅಣು ಸ್ಥಾವರಗಳ ಬಗ್ಗೆ ಅಪಾರ ವ್ಯಾಮೋಹ ಇಟ್ಟುಕೊಂಡಿರುವವರು. ಆದ್ದರಿಂದ ಹೇಗಾದರೂ ಮಾಡಿ ಪ್ರಜಾಸತ್ತಾತ್ಮಕ



ವಾಗಿಯೂ, ಗಾಂಧಿ ಮಾರ್ಗದಲ್ಲಿಯೂ ನಡೆಯುತ್ತಿರುವ ಈ ಆಂದೋಲನವನ್ನು ಮುಗಿಸುವುದು ಅವರ ಗುರಿಯಾಗಿತ್ತು. ಆ ನಿಟ್ಟಿನಲ್ಲಿ ಪ್ರತಿಭಟನಾಕಾರರ ವಿರುದ್ಧ ಪೊಲೀಸರ ಮೂಲಕ ಖೊಟ್ಟಿಕೇಸುಗಳನ್ನು ಹಾಕಿಸಿದರು, ಪ್ರತಿಭಟನೆಯ ನೇತೃತ್ವವನ್ನು ವಹಿಸಿಕೊಂಡಿರುವ ನಾಯಕರನ್ನು ಬೆದರಿಸಿದರು, ಈ ಪ್ರತಿರೋಧದ ಹಿಂದೆ ಕ್ರಿಶ್ಚಿಯನ್ ಧರ್ಮದವರ ಮಸಲತ್ತಿದೆ ಎಂದು ಗೂಬೆ ಕೂರಿಸಲು ಯತ್ನಿಸಿದರು. ಆದರೆ ಇಂತಹ ಯಾವ ಷಡ್ಯಂತ್ರವೂ ಫಲ ಕೊಡಲಿಲ್ಲ. ಅದಕ್ಕೇ ಈಗ ಈ ಪ್ರತಿಭಟನಾಕಾರರಿಗೆ ಅಮೆರಿಕ ಮತ್ತು ಸ್ಕ್ಯಾಂಡಿನೇವಿಯಾ ದೇಶಗಳಲ್ಲಿರುವ ಸರ್ಕಾರೇತರ ಸಂಘಟನೆಗಳಿಂದ (ಎನ್‌ಜಿಓ) ಹಣ ಹರಿದುಬರುತ್ತಿದೆ, ಸಾಮಾಜಿಕ ಸೇವೆಗೆಂದು ಬರುವ ದುಡ್ಡನ್ನು ಇಲ್ಲಿನ ಜನ ಅಣುಸ್ಥಾವರದ ವಿರುದ್ಧದ ಪ್ರತಿಭಟನೆಗೆ ಅಕ್ರಮವಾಗಿ ಬಳಸುತ್ತಿದ್ದಾರೆ ಎಂದು ಸ್ವತಃ ಮನಮೋಹನ್ ಸಿಂಗ್ ಒಂದು ಪತ್ರಿಕಾ ಸಂದರ್ಶನದಲ್ಲಿ ಆರೋಪಿಸಿದ್ದಾರೆ. ಅಷ್ಟೇ ಅಲ್ಲ, ಹಲವು ಭಾರತೀಯ ಎನ್‌ಜಿಓಗಳನ್ನು ಕಪ್ಪುಪಟ್ಟಿಗೆ ಹಾಕಿ ಅವುಗಳಿಗೆ ವಿದೇಶದಿಂದ ಹಣ ಬರುವುದನ್ನು ತಡೆದಿದ್ದಾರೆ. ಇದರ ಹಿಂದಿರುವ ಉದ್ದೇಶ ಪ್ರತಿಭಟನಾಕಾರರ ಒಗ್ಗಟ್ಟನ್ನು ಮುರಿಯುವುದು ಮತ್ತು ಜನರ ವಿರೋಧವನ್ನು ಮಟ್ಟಹಾಕುವುದೇ ಆಗಿದೆ.

ಸಿಂಗ್ ಅವರ ಈ ಆರೋಪಕ್ಕೆ ಪ್ರತಿಯಾಗಿ ಕುಡಂಕುಲಂ ಅಣುಸ್ಥಾವರ ವಿರುದ್ಧದ ಆಂದೋಲನದಲ್ಲಿ ಪ್ರಮುಖ ಪಾತ್ರ ವಹಿಸಿರುವ ಎಸ್.ಪಿ. ಉದಯಕುಮಾರ್ ಎಂಬುವವರು ಸಿಂಗ್ ಅವರಿಗೆ ಈಗ ಮಾನನಷ್ಟ ನೋಟಿಸನ್ನು ಕಳುಹಿಸಿದ್ದಾರೆ. "ನಮ್ಮ ಸಂಘಟನೆ ವಿದೇಶದಿಂದ ಯಾವ ಹಣ ಸಹಾಯವನ್ನೂ ಪಡೆದಿಲ್ಲ. ಹಾಗೊಮ್ಮೆ ನಾವು ಪಡೆದಿದ್ದೇವೆ ಎಂದು ಸಾಬೀತಾದರೆ ನಾನು ಗಲ್ಲಿಗೆ ಹೋಗಲೂ ಸಿದ್ಧ. ಇಂತಹ ಆಧಾರರಹಿತ ಆರೋಪ ಮಾಡುವ ಮೂಲಕ ಪ್ರಧಾನಿ ಸಿಂಗ್ ತಾವೆಷ್ಟು ಜನರ ವಿರೋಧಿ ಎಂದು ಸಾಬೀತುಪಡಿಸಿದ್ದಾರೆ" ಎಂದಿದ್ದಾರೆ ಉದಯಕುಮಾರ್.

ವಾಸ್ತವವಾಗಿ, ಕುಡಂಕುಲಂ ಅಣುಸ್ಥಾವರದ ವಿರುದ್ಧ ಅದರ ಸುತ್ತಮುತ್ತಲಿನ ಹಳ್ಳಿಗಳಲ್ಲಿ ವಾಸಿಸುತ್ತಿರುವ ಸಾವಿರಾರು ಜನ ಕಳೆದ 23 ವರ್ಷಗಳಿಂದ ಪ್ರತಿಭಟಿಸುತ್ತಲೇ ಬಂದಿದ್ದಾರೆ. ಆದರೆ ನಮ್ಮ ಮಾಧ್ಯಮಗಳಿಗೆ ಮತ್ತು ಸರ್ಕಾರಗಳಿಗೆ ಹಳ್ಳಿಗರ, ಬಡವರ ವಿರೋಧ ಯಾವ ಲೆಕ್ಕಕ್ಕೂ ಇರೊಲ್ಲವಾದ್ದರಿಂದ ಅದನ್ನು ಎಲ್ಲರೂ ನಿರ್ಲಕ್ಷಿಸುತ್ತಲೇ ಬರಲಾಗಿತ್ತು. ಅಷ್ಟೇ ಅಲ್ಲ, ರಷ್ಯಾದ ಸಹಯೋಗದೊಂದಿಗೆ ನಿರ್ಮಾಣಗೊಂಡಿರುವ ಈ ಸ್ಥಾವರಕ್ಕೆ ಕೇಂದ್ರ ಸರ್ಕಾರ ಜನರ ತೆರಿಗೆ ಹಣದಿಂದಲೇ 13,000 ಕೋಟಿ ರೂಪಾಯಿಗಳನ್ನು ಸುರಿಯಿತು.

ಆದರೆ ಯಾವಾಗ ಕಳೆದ ವರ್ಷ ಜಪಾನಿನಲ್ಲಿ ಸುನಾಮಿ ಸಂಭವಿಸಿ ಅಲ್ಲಿನ ಫುಕೋಶಿಮಾ ಅಣುಸ್ಥಾವರ ಸ್ಫೋಟಗೊಂಡು ಜನರ ಜೀವಕ್ಕೇ ಅಪಾಯ ಒಡ್ಡಿತೋ ಆಗ ಕುಡಂಕುಲಂ ಸುತ್ತ ವಾಸಿಸುವ ಸುಮಾರು ಹದಿನೈದು ಲಕ್ಷ ಜನ ಭಯಭೀತರಾದರು. ಫುಕೋಶಿಮಾದಂತೆಯೇ ಕುಡಂಕುಲಂನಲ್ಲೂ ಅಪಘಾತ ಸಂಭವಿಸಿದರೆ ತಮಗೆ ಉಳಿಗಾಲವಿಲ್ಲ ಎಂದೂ, ಹಾಗೊಮ್ಮೆ ಅಪಘಾತ ಸಂಭವಿಸದಿದ್ದರೂ ವಿಕಿರಣ ಸೋರಿಕೆಯಿಂದ ತಮಗೆ ಅಪಾಯ ತಪ್ಪಿದ್ದಲ್ಲ ಎಂದೂ ಅರಿತ ಜನ ತಮ್ಮ ಆಂದೋಲನವನ್ನು ತೀವ್ರಗೊಳಿಸಿದರು. ಆಗ ಜನರೊಂದಿಗೆ ಸಕ್ರಿಯರಾಗಿ ಭಾಗವಹಿಸಿದ್ದು ಅಮೆರಿಕದಿಂದ ಭಾರತಕ್ಕೆ ವಾಪಸ್ಸು ಬಂದಿರುವ ಶಿಕ್ಷಕ ಉದಯಕುಮಾರ್ ಅವರು "ನಮ್ಮ ಹೋರಾಟವು ಕಾಂಗ್ರೆಸ್ ಅಥವಾ ಬಿಜೆಪಿ ಪಕ್ಷಗಳ ಐಷಾರಾಮಿ ಪ್ರತಿಭಟನೆಯಂತಲ್ಲ, ಏಸಿ ಹಾಲ್‌ಗಳಲ್ಲಿ ನಡೆಯುವ ಉಪವಾಸ ಸತ್ಯಾಗ್ರಹಗಳಲ್ಲ, ಬದಲಾಗಿ ಇದು ಬಡವರ ಹೋರಾಟ. ನಾವು ಇದನ್ನು ಹಲವಾರು ತಿಂಗಳುಗಳಿಂದ ನಡೆಸುತ್ತಿರುವುದು ಒಂದು ಸಾಮಾನ್ಯ ಪೆಂಡಾಲ್ ಅಡಿ. ಬಳಸುತ್ತಿರುವುದೂ ನಮ್ಮದೇ ಆದ ಮೈಕ್ ಸೆಟ್ಟನ್ನು. ಕುಡಂಕುಲಂ ಸ್ಥಾವರದ ವಿರುದ್ಧ ಪ್ರತಿಭಟಿಸಲು ಬರುವ ಜನರಿಗೆ ನಾವು ರಾಜಕೀಯ ಪಕ್ಷಗಳಂತೆ ಗುಂಡು-ತುಂಡು ಕೊಡುವುದಿಲ್ಲ, ಹೆಚ್ಚೆಂದರೆ ಕುಡಿಯುವ ನೀರನ್ನು ಕೊಡುತ್ತೇವಷ್ಟೇ. ನಮ್ಮದು ಮಹಾತ್ಮ ಗಾಂಧಿ ತೋರಿಸಿಕೊಟ್ಟ ಮಾರ್ಗ. ಆದರೆ ಇವತ್ತಿನ ಕಾಂಗ್ರೆಸ್ ಪಕ್ಷಕ್ಕೆ ಗಾಂಧಿ ಸಿದ್ಧಾಂತ ಗೊತ್ತಿಲ್ಲ ಮಾತ್ರವಲ್ಲ, ಅದಕ್ಕೆ ಗೊತ್ತಿರುವುದು ಬರೀ ಸಾಹುಕಾರ ಗಾಂಧಿಗಳು. ಅದಕ್ಕೆ ನಮ್ಮ ವಿರುದ್ಧ ಇಲ್ಲಸಲ್ಲದ ಆರೋಪವನ್ನು ಮಾಡಿ ಜನರ ಆತ್ಮಸ್ಥೈರ್ಯವನ್ನು ಕೆಡಿಸಲು ಯತ್ನಿಸುತ್ತಿದ್ದಾರೆ" ಎನ್ನುತ್ತಾರೆ ಉದಯಕುಮಾರ್.


ಇನ್ನು ಈ ಹೋರಾಟದ ಹಿಂದೆ ಕ್ರಿಶ್ಚಿಯನ್ ಧರ್ಮದವರ ಮಸಲತ್ತಿದೆ ಎಂಬ ಆರೋಪ ಕೂಡ ಎಷ್ಟು ಹಾಸ್ಯಾಸ್ಪದವೆಂದು ನೋಡಿ. ಕುಡಂಕುಲಂ ಸುತ್ತ ಮುತ್ತಲಿನ ಪ್ರದೇಶದಲ್ಲಿ ವಾಸಿಸುತ್ತಿರುವವರಲ್ಲಿ ಶೇಕಡಾ 90 ಭಾಗ ಜನ ಕ್ರಿಶ್ಚಿಯನ್ ಧರ್ಮವನ್ನು ಪಾಲಿಸುವವರಾಗಿದ್ದಾರೆ. ಅಂದಮಾತ್ರಕ್ಕೆ ಅದರ ಹಿಂದೆ ಚರ್ಚ್‌ಗಳಿವೆ ಎಂದು ಹೇಳಲಾಗುವುದಿಲ್ಲ. ಇಲ್ಲಿಯತನಕ ಯಾವ ಚರ್ಚ್ ಅಥವಾ ಬಿಷಪ್ ಈ ಹೋರಾಟಕ್ಕೆ ನಯಾ ಪೈಸೆಯನ್ನೂ ಕೊಟ್ಟಿಲ್ಲ. ಅಷ್ಟೇ ಅಲ್ಲ, ಈ ಆಂದೋಲನದ ಕೇಂದ್ರ ಸಮಿತಿಯಲ್ಲಿ ಹಿಂದೂಗಳು ಇದ್ದಾರಲ್ಲದೆ, ಕೆಲವು ಆರೆಸ್ಸೆಸ್ ಸದಸ್ಯರೂ ಇದ್ದಾರೆ. ಉದಯಕುಮಾರ್ ಅವರು ಹೇಳುವಂತೆ "ಇದು ಸ್ಥಳೀಯರು ತಮ್ಮ ಬದುಕಿಗಾಗಿ, ಜೀವನೋಪಾಯಕ್ಕಾಗಿ, ತಮ್ಮ ಮಕ್ಕಳ ಭವಿಷ್ಯಕ್ಕಾಗಿ ನಡೆಸುತ್ತಿರುವ ಹೋರಾಟ. ಇದು ಜನರ ಹೋರಾಟವಾಗಿದ್ದು ಅದಕ್ಕೆ ಯಾವುದೇ ಧರ್ಮದ ಲೇಪ ಹಚ್ಚುವುದು ಸರಿಯಲ್ಲ."


ಇದೆಲ್ಲಕ್ಕಿಂತ ತಮಾಷೆಯಾದ ಸಂಗತಿಯೊಂದು ಮೊನ್ನೆ ನಡೆದಿದೆ. ಕುಡಂಕುಲಂ ಹೋರಾಟವನ್ನು ನೋಡಲು ಕಳೆದ ವಾರ ಸಾಂಟೆಗ್ ಹರ್ಮನ್ ಎಂಬ ಜರ್ಮನ್ ಪ್ರಜೆ ಬಂದಿದ್ದಾಗ ಆತನನ್ನು ಬಲವಂತವಾಗಿ ಆತನ ದೇಶಕ್ಕೆ ಕೇಂದ್ರ ಸರ್ಕಾರ ವಾಪಸ್ಸು ಕಳುಹಿಸಿದೆ. ಅದಕ್ಕೆ ಪಿ. ಚಿದಂಬರಂ ಎಂಬ ಕೇಂದ್ರ ಮಂತ್ರಿ ನೀಡಿರುವ ಕಾರಣ "ಹರ್ಮನ್ ಭಾರತಕ್ಕೆ ಪ್ರವಾಸಿ ವೀಸಾದ ಮೇಲೆ ಬಂದಿದ್ದ. ಆತನಿಗೆ ಕುಡಂಕುಲಂನಲ್ಲೇನು ಕೆಲಸ? ಆತ ನಮ್ಮ ದೇಶದ ಕೆಲವು ಕಾನೂನುಗಳನ್ನು ಮುರಿದಿದ್ದರಿಂದ ಆತನನ್ನು ಅವರ ದೇಶಕ್ಕೆ ಕಳುಹಿಸಲಾಯಿತು." ಅಲ್ಲಾ ಸ್ವಾಮಿ, ಆತ ನಮ್ಮ ದೇಶದ ಕಾನೂನುಗಳನ್ನು ಉಲ್ಲಂಘಿಸಿದ್ದರೆ ಆತನನ್ನು ಬಂಧಿಸಿ, ವಿಚಾರಣೆಗೆ ಒಳಪಡಿಸಿ, ಶಿಕ್ಷೆ ಕೊಡಬೇಕಿತ್ತಲ್ಲವೇ. ಅದನ್ನು ಮಾಡುವ ಬದಲು ಆತನನ್ನು ವಾಪಸ್ ಕಳುಹಿಸಿದ್ದು ಯಾಕೆ? ಇನ್ನೂ ಮುಖ್ಯವಾಗಿ ಆತ ಭಾರತಕ್ಕೇ ಭೇಟಿ ನೀಡಲು ವೀಸಾ ಪಡೆದಿದ್ದನೆ ಹೊರತು ಕೇವಲ ದೆಹಲಿ, ಮುಂಬೈ ತರಹದ ಶಹರುಗಳಿಗೆ ಭೇಟಿ ನೀಡುವ ವೀಸಾ ಅಲ್ಲವಲ್ಲ. ಹಾಗಿರುವಾಗ ಆತ ಕುಡಂಕುಲಂನಲ್ಲಿ ಏನು ಮಾಡುತ್ತಿದ್ದ ಎಂಬುದು ಯಾಕೆ ಮುಖ್ಯವಾಗಬೇಕು? ಮಂತ್ರಿ ಆಗಿಲ್ಲದಿದ್ದಾಗ, ಎನ್ರಾನ್ ಮತ್ತು ವೇದಾಂತ ತರಹದ ಅಂತರರಾಷ್ಟ್ರೀಯ ಕಂಪನಿಗಳ ವಕೀಲನಾಗಿ ಹೊಟ್ಟೆ ಹೊರೆಯುವ ಚಿದಂಬರಂಗೆ ಇಂತಹ ಪ್ರಶ್ನೆಗಳಿಗೆ ಉತ್ತರ ಕೊಡುವ ತಾಕತ್ತು ಇಲ್ಲ ಬಿಡಿ.

ಕುಡಂಕುಲಂ ಅಣುಸ್ಥಾವರದ ವಿರುದ್ಧದ ಹೋರಾಟದಲ್ಲಿ ಹಲವಾರು ವರ್ಷ, ತಿಂಗಳುಗಳಿಂದ ಭಾಗಿಯಾಗಿರುವ ಜನರ ಆತಂಕಗಳು ಸಿಂಗ್‌ಗಾಗಲೀ, ಅವರ ಕಾಂಗ್ರೆಸ್ ಪಕ್ಷಕ್ಕಾಗಲಿ ಅರ್ಥವಾಗುವುದಿಲ್ಲ, ಅದಕ್ಕೆ ಕೇಂದ್ರ ಸರ್ಕಾರ ಕುಡಂಕುಲಂ ವಿರುದ್ಧದ ಜನಾಂದೋಲನದ ಮೇಲೆ ಮುಗಿಬಿದ್ದಿದೆ....

ಇಲ್ಲಿ ಪೋಲಿ ಮಂತ್ರಿಗಳನ್ನು ರಕ್ಷಿಸಲು ಸಜ್ಜಾಗಿರುವ ಸದನ ಸಮಿತಿ, ಅಲ್ಲಿ ಜನರ ಆಂದೋಲನವನ್ನೇ ಮಟ್ಟಹಾಕುವ ಪ್ರಧಾನ ಮಂತ್ರಿ... ಈ ಎರಡೂ ಸರ್ಕಾರಗಳನ್ನು ಚುನಾಯಿಸಿದ್ದ ನಮ್ಮ ದೇಶದ ಪ್ರಜೆಗಳೇ. ಇದೇನು ಪ್ರಜಾಪ್ರಭುತ್ವವೋ, ಇದೇನು ಸರ್ಕಾರಗಳೋ...

ಇನ್ಸ್‌ಪೆಕ್ಟರ್ ಲೋಕೇಶ್ವರ್ ಎತ್ತಂಗಡಿ ಯಡ್ಡಿಗೆ ಸಿಎಂ ಕೊಟ್ಟ ಮತ್ತೊಂದು ಪೆಟ್ಟು



ಇನ್ಸ್‌ಪೆಕ್ಟರ್ ಲೋಕೇಶ್ವರ್



ಪ್ರಸಾದ್

ಗಡ್ಕರಿ ಬೆಂಗಳೂರಿಗೆ ಬಂದು ಚಿಂತನ-ಮಂಥನಕ್ಕೆ ಬದಲು ಯಡ್ಡಿಯ ರೆಕ್ಕೆಪುಕ್ಕ ಕತ್ತರಿಸಿಹೋಗಿದ್ದು ಎಷ್ಟು ಸತ್ಯವ್ರೋ ಗೊತ್ತಿಲ್ಲ. ಆದರೆ ಆನಂತರದ ಬೆಳವಣಿಗೆಗಳಿವೆಯಲ್ಲ ಆದ್ಯಾವುದೂ ಯಡ್ಡಿಯ ಪಾಲಿಗೆ ಸಂತಸದ ಪ್ರಸಂಗಗಳಲ್ಲ. ತನ್ನ ಹುಟ್ಟುಹಬ್ಬವನ್ನು ಕೂಡ ಮಹಾನ್ ಶಕ್ತಿ ಪ್ರದರ್ಶನದಂತೆ ಬಿಂಬಿಸ ತೊಡಗಿದ ಯಡ್ಡಿಗೆ ಸಿ.ಎಂ. ಸದಾನಂದ ಗೌಡ ಕೊಟ್ಟ ಹುಟ್ಟುಹಬ್ಬದ ಉಡುಗೊರೆ ಯೇನು ಗೊತ್ತೆ?

ಯಡ್ಡಿಯ ಪರಮಾಪ್ತ ಪೊಲೀಸ್ ಇನ್ಸ್‌ಪೆಕ್ಟರ್ ಲೋಕೇಶ್ವರ್ ಎತ್ತಂಗಡಿ.

ಘಟನೆ ಕೂಡ ದೊಡ್ಡದೇನಲ್ಲ. ಯಡ್ಡಿ ಹುಟ್ಟು ಹಬ್ಬಕ್ಕೊಂದು ಶುಭ ಕೋರಲು ಬಂದಿದ್ದ ಮುಖ್ಯಮಂತ್ರಿಗಳ ಜೊತೆಗಿದ್ದವರು ಹಿರಿಯ ಐಎಎಸ್ ಅಧಿಕಾರಿ ಐಎಸ್‌ಎನ್ ಪ್ರಸಾದ್. ಯಡ್ಡಿ ಹುಟ್ಟುಹಬ್ಬದ ಸಡಗರ-ಸಂಭ್ರಮ ಮತ್ತು ರಾಜಕೀಯ ವಿಪರ್ಯಾಸದ ಗೌಜುಗದ್ದಲದ ಮಧ್ಯೆ ಓರ್ವ ಪೊಲೀಸ್ ಇನ್ಸ್‌ಪೆಕ್ಟರ್ ಯೂನಿಫಾರ್ಮಿನಲ್ಲಿ ಬರಲಿಲ್ಲ ಎಂಬುದಾಗಲಿ ಅಥವಾ ಡ್ಯೂಟಿ ಬಿಟ್ಟು ಮಾಜಿ ಮುಖ್ಯಮಂತ್ರಿಗೆ ಶುಭ ಹಾರೈಸಲು ಬಂದಿದ್ದೇ ತಪ್ಪು ಎಂದಾಗಲಿ-ಇದ್ಯಾವುದೂ ದೊಡ್ಡ ಸಂಗತಿಯಾಗಿರಲಿಲ್ಲ. ಆದರೆ ನಡೆದದ್ದೇ ಬೇರೆ.





ಸಿ.ಎಂ. ಸದಾನಂದ ಗೌಡರ ಜೊತೆ ಯಡ್ಡಿಗೆ ಶುಭ ಕೋರಲು ಬಂದ ಪ್ರಿನ್ಸಿಪಲ್ ಸೆಕ್ರೆಟರಿ ಐಎಸ್‌ಎನ್ ಪ್ರಸಾದ್ ಬೇರೆಲ್ಲ ದನ್ನೂ ಬದಿಗಿರಿಸಿ ಅಲ್ಲೇ ಇದ್ದ ಉಪ್ಪಾರ ಪೇಟೆಯ ಇನ್ಸ್‌ಪೆಕ್ಟರ್ ಲೋಕೇಶ್ವರ್‌ರತ್ತ ಕೈತೋರಿಸಿ 'ಏಯ್ ಮಿಸ್ಟರ್ ಕಮ್ ಹಿಯರ್, ನೀನ್ಯಾಕಯ್ಯಾ ಇಲ್ಲಿಗೆ ಬಂದೆ? ಎಲ್ಲಿ ನಿನ್ನ ಯೂನಿಫಾರ್ಮ್? ಡ್ಯೂಟಿ ಮಾಡೋದು ಬಿಟ್ಟು ಇಲ್ಲಿಗ್ಯಾಕೆ ಬಂದೆ?' ಇತ್ಯಾದಿಯಾಗಿ ಕೊಂಚ ಅಧಿಕಪ್ರಸಂಗಿತನವೆಂಬಂತೆ ರೇಗುತ್ತಾರೆ. ಅದಕ್ಕೆ ಲೋಕೇಶ್ವರ್ ಅಷ್ಟೇ ಖಡಕ್ಕಾಗಿ 'ಇದು ಖಾಸಗಿ ಕಾರ್ಯಕ್ರಮ. ನಾನ್ಯಾಕ್ರೀ ಬರಬಾರ್ದು?' ಎಂದು ಸಿಡುಕಿದ್ದಾರೆ.

ಸಿ.ಎಂ. ಸನ್ನಿಧಿಯಲ್ಲೇ.....!

ಇದಾಗಿ ಹದಿನೈದು ನಿಮಿಷಕ್ಕೆ ಯಡ್ಡಿ ಮನೆಯ ಹುಲ್ಲು ಹಾಸಿನ ಮೇಲೆ ಮುಖ್ಯಮಂತ್ರಿ ಸದಾನಂದ ಗೌಡ ಯಡ್ಡಿಗೆ ಹೂಗುಚ್ಛ ಕೊಟ್ಟು ಶುಭ ಕೋರುತ್ತಿದ್ದಂತೆ ಮತ್ತೆ ಐಎಎಸ್ ಅಧಿಕಾರಿ ಪ್ರಸಾದ್ ಲೋಕೇಶ್ವರ್ ವಿರುದ್ಧ ಹರಿಹಾಯುತ್ತಾರೆ. ಈಗ ತಾಳ್ಮೆ ಕಳಕೊಂಡ ಇನ್ಸ್‌ಪೆಕ್ಟರ್ ಲೋಕೇಶ್ವರ್ ಪ್ರಸಾದ್ ವಿರುದ್ಧ ತಿರುಗಿ ಬೀಳುತ್ತಾರೆ. 'ನಿಮ್ಮ ಕೆಲಸ ಎಷ್ಟೋ ಅಷ್ಟು ನೋಡ್ರಿ. ನೀವೇನು ನನಗೆ ಬಾಸಾ? ನನ್ನ ಡಿಪಾರ್ಟ್‌ಮೆಂಟ್ ಅಧಿಕಾರಿಗಳೇ ಕೇಳಿಲ್ಲ ನೀವ್ಯಾರ್ರೀ ಕೇಳೋಕ್ಕೆ? ಮೈಂಡ್ ಯುವರ್ ಓನ್ ಬಿಸಿನೆಸ್......!' ಇತ್ಯಾದಿಯಾಗಿ ಲೋಕೇಶ್ವರ್ ತಿರುಗಿಬಿದ್ದಿದ್ದನ್ನು ಖಾಸಗಿ ಸುದ್ದಿ ಚಾನಲ್ಲೊಂದರ ಕ್ಯಾಮರಾಮನ್ ಯಥಾವತ್ತಾಗಿ ಚಿತ್ರೀಕರಿಸಿಕೊಳ್ಳುತ್ತಾರೆ.

ಈ ದೃಶ್ಯ ಪದೇಪದೇ ಅದೇ ಚಾನಲ್ಲಿನಲ್ಲಿ ಬಿತ್ತರಗೊಳ್ಳುತ್ತದೆ. ಅಲ್ಲಿಗೆ ಇನ್ಸ್‌ಪೆಕ್ಟರ್ ಲೋಕೇಶ್ವರ್ ಮಟ್ಟ ಹಾಕುವ ಕಾರ್ಯಾಚರಣೆಯೊಂದು ಸದ್ದಿಲ್ಲದೆ ಶುರುವಾಗುತ್ತದೆ.

ಮೊದಲು ಕಮೀಷನರ್ ಮಿರ್ಜಿ, ಅಡಿಷನಲ್ ಕಮೀಷನರ್ ಸುನಿಲ್ ಕುಮಾರ್ ಮತ್ತು ಜಾಯಿಂಟ್ ಕಮಿಷನರ್ ಸೇರಿ ಲೋಕೇಶ್ವರ್ ದಮನದ ರುಪುರೇಷೆ ಮಾಡುತ್ತಾರೆ. ಆನಂತರ ಎರಡನೇ ಸುತ್ತಿನ ಕಾಯತಂತ್ರ ರೂಪಿಸುತ್ತಾರೆ. ತದನಂತರ ಗೃಹ ಕಾರ್ಯದರ್ಶಿ ಮಟ್ಟದಲ್ಲಿ ಸಭೆಯಾಗುತ್ತದೆ. ಆನಂತರ ಗೃಹ ಮಂತ್ರಿ ಅಶೋಕ್‌ರೇ ಖುದ್ದಾಗಿ ಹಿರಿಯ ಪೊಲೀಸ್ ಅಧಿಕಾರಿಗಳನ್ನು ಕರೆಸಿಕೊಂಡು ಸಾದಕ-ಭಾದಕ ಲೆಕ್ಕ ಹಾಕುತ್ತಾರೆ. ಅಂತಿಮವಾಗಿ ಮುಖ್ಯಮಂತ್ರಿ ಸದಾನಂದ ಗೌಡ ಮತ್ತು ಗೃಹ ಮಂತ್ರಿ ಅಶೋಕ್ ಕೂತು ಒಂದು ನಿರ್ಧಾರಕ್ಕೆ ಬರುತ್ತಾರೆ.

ಅದು ಉಪ್ಪಾರಪೇಟೆಯ ಇನ್ಸ್‌ಪೆಕ್ಟರ್ ಲೋಕೇಶ್ವರನನ್ನು ಸಿಸಿಬಿಗೆ ಎತ್ತಂಗಡಿ ಮಾಡುವುದು!

ಮೇಲುನೋಟಕ್ಕಿದು ಓರ್ವ ಉದ್ಧಟ ಪೊಲೀಸ್ ಇನ್ಸ್‌ಪೆಕ್ಟರ್‌ನನ್ನು ಮಟ್ಟಾ ಹಾಕುವ ಸರ್ಕಾರಿ ಕಾರ್ಯಾಚರಣೆಯಂತೆ ಕಾಣಬಹುದು. ಹಿರಿಯ ಐಎಎಸ್ ಅಧಿಕಾರಿಯೊಬ್ಬನ ಜೊತೆ ಮಾತಿನ ಚಕಮಕಿ ನಡೆಸಿದ್ದು ಲೋಕೇಶ್ವರ್ ತಪ್ಪೇ ಇರಬಹುದು. ಆದರೆ ಸೂಕ್ಷ್ಮವಾಗಿ ಗಮನಿಸಿದರೆ ಅಧಿಕಾರಸ್ಥ ಪಕ್ಷವೊಂದರ ಮಾಜಿ ಮುಖ್ಯಮಂತ್ರಿಯೊಬ್ಬನ ಹುಟ್ಟುಹಬ್ಬಕ್ಕೆಂದು ಸಮವಸ್ತ್ರ ಧರಿಸದೇ ಪೊಲೀಸ್ ಇನ್ಸ್‌ಪೆಕ್ಟರ್ ಬರುವುದು ಯಾವ ಮಹಾ ತಪ್ಪು?

ಮುಖ್ಯಮಂತ್ರಿಯೇ ಹುಟ್ಟುಹಬ್ಬಕ್ಕೆ ಶುಭಕೋರಲು ಬರಬಹುದಾದರೆ ಪೊಲೀಸ್ ಇನ್ಸ್‌ಪೆಕ್ಟರ್ ಓರ್ವ ಬರುವುದು ಯಾವ ಮಹಾ ಅಪರಾಧ? ಹಾಗೇ ಬಂದ ಮುಖ್ಯಮಂತ್ರಿಯ ಜೊತೆಗಿದ್ದ ಐಎಎಸ್ ಅಧಿಕಾರಿಯೊಬ್ಬನಿಗೆ ಆ ಪೊಲೀಸ್ ಇನ್ಸ್‌ಪೆಕ್ಟರ್ ಡ್ಯೂಟಿ ಬಿಟ್ಟುಬಂದಿದ್ದೇ ತಪ್ಪು ಎನ್ನಿಸಿದ ಪಕ್ಷದಲ್ಲಿ ಅದನ್ನು ಅಲ್ಲೇ ಇದ್ದ ಪೊಲೀಸ್ ಇಲಾಖೆಯ ವರಿಷ್ಠರಿಗೆ ದೂರಬೇಕಿತ್ತಲ್ಲವೆ? ತನಗೆ ಸಂಬಂಧಪಡದ ವ್ಯಾಪ್ತಿಯ ವಿಷಯಕ್ಕೆ ಮುಖ್ಯಮಂತ್ರಿಯ ಪ್ರಿನ್ಸಿಪಲ್ ಸೆಕ್ರೆಟರಿ ಏಕೆ ಅಷ್ಟೇ ದುಡುಕುತ್ತಾರೆ. ಇನ್ಸ್‌ಪೆಕ್ಟರ್ ಲೋಕೇಶ್ವರ್ ಮಾಡಿದ್ದು ತಪ್ಪೆನ್ನುವುದಾದರೇ ಐಎಎಸ್ ಪ್ರಸಾದ್ ಅಧಿಕ ಪ್ರಸಂಗಿತನವೂ ಅಷ್ಟೇ ತಪ್ಪಲ್ಲವೆ?

ಏಕೆ ಕೇವಲ ಲೋಕೇಶ್ವರ್‌ರನ್ನಷ್ಟೇ ಶಿಕ್ಷಿಸಿ ಐಎಎಸ್ ಪ್ರಸಾದ್‌ಗೆ ಸರ್ಕಾರ ಮಣೆ ಹಾಕುತ್ತದೆ?

ಅದು ಮುಖ್ಯಮಂತ್ರಿ ಸದಾನಂದ ಗೌಡರ ಯಡ್ಡಿ ದಮನದ ಮತ್ತೊಂದು ವರಸೆಯಲ್ಲದೆ ಮತ್ತೇನಲ್ಲ. ಉಪಲೋಕಾಯುಕ್ತರ ನೇಮಕಾತಿಯಲ್ಲಿ ಯಡ್ಡಿಯ ಮರ್ಜಿಯನ್ನು ಕಾಲುಕಸಮಾಡಿದ್ದಾಯ್ತು. ಇತ್ತೀಚೆಗೆ ನಡೆದ ಐಎಎಸ್ ವರ್ಗಾವರ್ಗಿಯಲ್ಲೂ ಯಡ್ಡಿಯನ್ನು ನಿರ್ಲಕ್ಷಿಸಿದ್ದಾಯ್ತು. ಯಡ್ಡಿಯನ್ನು ಧಿಕ್ಕರಿಸಿ ಸಿದ್ಧಗಂಗೆಯಲ್ಲಿ ಕೋಟಿ ಲಿಂಗ ಸ್ಥಾಪನಾ ಕಾರ್ಯಕ್ಕೆ ಕೈ ಇಟ್ಟದ್ದಾಯ್ತು. ಜಾರಕಿಹೊಳಿಯನ್ನು ಛೂಬಿಟ್ಟು ಗೋಕಾಕ್‌ನಲ್ಲಿ ಪಂಚಮಸಾಲಿಗಳನ್ನು ಯಡ್ಡಿ ವಿರುದ್ಧ ಎತ್ತಿ ಕಟ್ಟಿದ್ದಾಯ್ತು. ಯಡ್ಡಿ ತನ್ನ ಮನೆಯಲ್ಲೇ ನಡೆದ ಶೆಟ್ಟರ್ ಸಮ್ಮಿಲನಕ್ಕೆ ತಾನೂ ಹೋಗಿ ನಿಪ್ಪರಿಣಾಮದ ಹುಳಿ ಹಿಂಡಾಯ್ತು. ಆರೆಸ್ಸೆಸ್ ವರಿಷ್ಠರನ್ನೆಲ್ಲ ಯಡ್ಡಿ ವಿರುದ್ಧ ಎತ್ತಿ ಕಟ್ಟಿದ್ದಾಯ್ತು.

ಈಗ ಇಡೀ ಪೊಲೀಸ್ ಇಲಾಖೆಯ ಪಾಲಿಗೆ ಯಡ್ಡಿ ಮನೆಮಗನಂತಿದ್ದ ಲೋಕೇಶ್ವರ್‌ರನ್ನು ಬಲಿ ಹಾಕಿದ್ದಾರೆ.


ಕೂಗಾಡಿದ ಯಡ್ಡಿ

ಯಡ್ಡಿಯ ರೆಕ್ಕೆಪುಕ್ಕ ಕತ್ತರಿಸಿ ದುರ್ಬಲಗೊಳಿಸುವ ಒಂದೊಂದು ಕಾರಸ್ಥಾನವನ್ನು ಸಿ.ಎಂ. ಗೌಡ ಸದ್ದಿಲ್ಲದೇ ನಿರ್ವಹಿಸುತ್ತಿರುವುದರ ಲೇಟೆಸ್ಟ್ ಘಟನೆಯೇ ಲೋಕೇಶ್ವರ್ ಪದಚ್ಯುತಿ. ಲೋಕೇಶ್ವರ್ ವರ್ಗಾವಣೆಯನ್ನು ವಿರೋಧಿಸಿ ಈಗಾಗಲೇ ತಿಪಟೂರು ಬಂದ್ ಆಗಿದೆ. ಬೆಂಗಳೂರು, ಚಿಕ್ಕನಾಯಕನಹಳ್ಳಿ, ಹೊಸದುರ್ಗ, ಗುಬ್ಬಿಗಳಲ್ಲಿ ಅವರ ಬೆಂಬಲಿಗರು ಪ್ರತಿಭಟಿಸಿದ್ದಾರೆ. ಸಾಕ್ಷಾತ್ ಯಡ್ಡಿಯೇ ಮುಖ್ಯಮಂತ್ರಿಯ ಪ್ರಿನ್ಸಿಪಲ್ ಸೆಕ್ರೆಟರಿ ಪ್ರಸಾದ್‌ಗೆ ಫೋನ್ ಮಾಡಿ ಕೂಗಾಡಿದ್ದಾರೆ.

ಕಳೆದ ಮೂರು ವರ್ಷಗಳಿಂದ ಉಪ್ಪಾರಪೇಟೆಯಂಥ ಆಯಕಟ್ಟಿನ ಪೊಲೀಸ್ ಠಾಣೆಗೆ ಇನ್ಸ್‌ಪೆಕ್ಟರ್ ಆಗಿದ್ದ ಲೋಕೇಶ್ವರ್ ಸದ್ಯ ಪೊಲೀಸ್ ಇಲಾಖೆ ಮಟ್ಟಿಗೆ ರಾಜಕೀಯವಾಗಿ ಪ್ರಭಾವಿ. ಯಡ್ಡಿ ಮುಖ್ಯ ಮಂತ್ರಿಯಾಗಿದ್ದಷ್ಟೂ ಕಾಲ ಬೆಂಗಳೂರಿನ ಖಾಕಿಲೋಕದ ಮಟ್ಟಿಗೆ ಲೋಕೇಶ್ವರ್ ಅನಭಿಷಕ್ತ ದೊರೆ. ಎಂತೆಂಥಾ ಐಪಿಎಸ್ ಅಧಿಕಾರಿಗಳೇ ಲೋಕೇಶ್ವರ್ ಮುಂದೆ ಕೈಕಟ್ಟಿ ನಿಲ್ಲುತ್ತಿದ್ದರು. ಬೆಂಗಳೂರಿನ ಮೂವರು ಡಿಸಿಪಿಗಳು, ಅರ್ಧ ಡಜನ್ ಎಸಿಪಿಗಳು, ಎರಡು ಡಜನ್ನಿನ ಅಧಿಕ ಇನ್ಸ್‌ಪೆಕ್ಟರ್‌ಗಳ ವರ್ಗಾವರ್ಗಿಯನ್ನು ಸ್ವತಃ ಲೋಕೇಶ್ವರ್ ಯಡ್ಡಿಗೆ ಹೇಳಿಸಿ ಮಾಡಿಸಿದ್ದರು.


ಹುಟ್ಟುಹಬ್ಬದಲ್ಲಿ ಗೌಡ-ಯಡ್ಡಿ

ಯಡ್ಡಿ ಮಗ ವಿಜಯೇಂದ್ರನ ನಂಬಿಕಸ್ತ ಅನುಯಾಯಿಯಾಗಿದ್ದ ಲೋಕೇಶ್ವರ್ ವಿರುದ್ಧ ಪೊಲೀಸ್ ಇಲಾಖೆಯ ಒಂದು ಗುಂಪಿನ ಅಧಿಕಾರಿಗಳಿಗೆ ಮೊದಲೇ ಸಿಟ್ಟಿತ್ತು. ಅದಕ್ಕೆ ಕಾರಣ ಪೊಲೀಸ್ ವರ್ಗಾವರ್ಗಿಯಲ್ಲಿ ಲೋಕೇಶ್ವರ್‌ಗಿದ್ದ ಹಿಡಿತ. ನೀಲಂ ಅಚ್ಯುತರಾವ್‌ರನ್ನು ಯಡ್ಡಿ ಮನೆಗೆ ಕರೆದೊಯ್ದು ಸಂಬಂಧ ಕುದುರಿಸಿದ ಫಲವಾಗೇ ಅಚ್ಯುತರಾವ್ ಪೊಲೀಸ್ ಮಹಾನಿರ್ದೇಶಕರಾದದ್ದು, ಬೆಂಗಳೂರಿನ ಆಯಕಟ್ಟಿನ ಎಸಿಪಿ ಹುದ್ದೆಗಳಿಗೆಲ್ಲ ತನಗೆ ಬೇಕಾದವರನ್ನೇ ಹಾಕಿಕೊಂಡಿದ್ದು, ತಾನು ಮೊದಲು ಹೈಗ್ರೌಂಡ್ಸ್‌ನಂಥ ಪ್ರತಿಷ್ಠಿತ ಠಾಣೆಯಲ್ಲಿದ್ದು ಆನಂತರ ಅದಕ್ಕಿಂತಲೂ ಮಹತ್ವದ ಉಪ್ಪಾರಪೇಟೆ ಠಾಣೆಗೆ ಬಂದದ್ದು, ದಿನ ಬೆಳಗ್ಗೆಯಾದರೆ ಯಡ್ಡಿ ಮಗ ವಿಜಯೇಂದ್ರನ ಅಡ್ಡೆಯಲ್ಲಿ ವಿಜೃಂಭಿಸಿದ್ದು ಲೋಕೇಶ್ವರ್‌ರನ್ನು ಯಡ್ಡಿ ಕಿಚನ್ ಕ್ಯಾಬಿನೆಟ್ಟಿನ ಹೋಮ್ ಮಿನಿಸ್ಟರ್ ಎಂಬಂತೆ ಮಾಡಿಬಿಟ್ಟಿತ್ತು.


"ಸಾರ್, ಹುಟ್ಟುಹಬ್ಬಕ್ಕೆ ಉಡುಗೊರೆಯಾಗಿ ನಿಮ್ಮ ಮೊಬೈಲ್‌ಗೆ ಬ್ಲೂ ಫಿಲ್ಮ್ ಕಳಿಸ್ಲಾ...?"

ಅದೇ ಹೊತ್ತಿಗೆ ಮುಖ್ಯಮಂತ್ರಿ ಯಡ್ಡಿಯ ಪ್ರಿನ್ಸಿಪಲ್ ಸೆಕ್ರೆಟರಿಯಾಗಿದ್ದ ಐಎಸ್‌ಎನ್ ಪ್ರಸಾದ್‌ಗೂ ಲೋಕೇಶ್ವರ್‌ಗೂ ವಿಚಿತ್ರ ಜಿದ್ದಾಜಿದ್ದಿ ಶುರುವಾಯಿತು. ತನ್ನನ್ನೂ ಮೀರಿ ಯಡ್ಡಿಗೆ ಆಪ್ತರಾಗಿದ್ದ ಲೋಕೇಶ್ವರ್‌ರನ್ನು ಕಂಡರೇನೇ ಪ್ರಸಾದ್‌ಗೆ ಪಿತ್ಥ ಕೆರಳುತ್ತಿತ್ತು. ಮೂರ್ನಾಲ್ಕು ಬಾರಿ ಇಬ್ಬರ ಮಧ್ಯೆ ಮುಖ್ಯಮಂತ್ರಿ ಸಮ್ಮುಖದಲ್ಲೇ ಘರ್ಷಣೆ ನಡೆದಿದ್ದು ಅಂತಿಮವಾಗಿ ಯಡ್ಡಿ ಹುಟ್ಟುಹಬ್ಬದ ಮೂಲಕ ಇತ್ಯರ್ಥಗೊಂಡಿದೆ.

ಖಾಕಿ ದೊರೆ

ಲೋಕೇಶ್ವರ್ ಲೋಕಸಭೆಯ ಮಾಜಿ ಉಪಸಭಾಪತಿ ಮಲ್ಲಿಕಾರ್ಜುನಯ್ಯನವರ ಖಾಸಾ ಅಳಿಯ. ಜಾತಿಯ ಮಟ್ಟಿಗೆ ಯಡ್ಡಿಯ ಕುಲಬಾಂಧವ. ಶಾಸಕರಾದ ಹೊಸದರಲ್ಲಿ ಮಲ್ಲಿಕಾರ್ಜುನಯ್ಯನವರ ಮನೆಯಲ್ಲೇ ತಂಗುತ್ತಿದ್ದ ಯಡ್ಡಿಗೆ ಆ ಕಾಲದಿಂದಲೇ ಲೋಕೇಶ್ವರ್ ಜೊತೆ ಆತ್ಮೀಯತೆಯಿತ್ತು. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿ ಯಡ್ಡಿ ಉಪಮುಖ್ಯ ಮಂತ್ರಿಯಾದ ಮೇಲಂತೂ ಅದು ಪ್ರತಿಷ್ಠಿತ ಹೈಗ್ರೌಂಡ್ಸ್ ಠಾಣೆಯನ್ನು ಕೊಡಿಸುವಷ್ಟರ ಮಟ್ಟಿಗೆ ಗಾಢವಾಯಿತು. ಯಡ್ಡಿ ಮುಖ್ಯಮಂತ್ರಿಯಾದ ಮೇಲಂತೂ ಬೆಂಗಳೂರಿನ ಅತ್ಯಂತ ಬೇಡಿಕೆಯ ಉಪ್ಪಾರಪೇಟೆ ಠಾಣೆ ಲೋಕೇಶ್ವರ್ ಪಾಲಾಯಿತು.

ಇನ್ನೂ ಹೇಳಬೇಕೆಂದರೆ ಲೋಕೇಶ್ವರ್ ಬೆಂಗಳೂರಿನ ಮಟ್ಟಿಗೆ ಅನಭಿಷಕ್ತ ಪೊಲೀಸ್ ಕಮೀಷನರ್!

ಇದೆಲ್ಲಾ ಗೊತ್ತಿದ್ದೂ ಯಡ್ಡಿ ಮನೆಯಲ್ಲೇ ಪ್ರಿನ್ಸಿಪಲ್ ಸೆಕ್ರೆಟರಿ ಪ್ರಸಾದ್ ಲೋಕೇಶ್ವರ್ ಜೊತೆ ಘರ್ಷಣೆಗಿಳಿದು ಕ್ಯಾತೆ ತೆಗೆಯುತ್ತಾರೆಂದರೆ, ಪ್ರಸಾದ್ ಮರ್ಜಿಗೆ ಸದಾನಂದ ಗೌಡ ಲೋಕೇಶ್ವರ್ ಎತ್ತಂಗಡಿಗೆ ಮುಂದಾಗುತ್ತಾರೆಂದರೆ, ಅವಕಾಶ ಸಿಕ್ಕಲ್ಲೆಲ್ಲ ಸಿ.ಎಂ. ಯಡ್ಡಿಗೆ ಪೆಟ್ಟು ಕೊಡಲು ನಿರ್ಧರಿಸಿದ್ದಾರೆ ಎಂದೇ ಅರ್ಥ. ಮುಖ್ಯಮಂತ್ರಿಯ ಮನದಿಂಗಿತ ಅರಿತೇ ಪ್ರಿನ್ಸಿಪಲ್ ಸೆಕ್ರೆಟರಿ ಪ್ರಸಾದ್ ಯಡ್ಡಿ ಮರ್ಜಿಯನ್ನು ಧಿಕ್ಕರಿಸಿದ್ದಾರೆ.

ಮತ್ತೊಂದೆಡೆ ರಾಮಾಜೋಯಿಸ್, ಬಾಂಡಗೆ, ಮಂಗೇಶ್ ಭೇಂಡೆಯಂಥ ಆರೆಸ್ಸೆಸ್ ವರಿಷ್ಠರೇ ಬಹಿರಂಗವಾಗಿ ಯಡ್ಡಿಗೆ ಬುದ್ಧಿ ಹೇಳುತ್ತಿದ್ದಾರೆ. ಇದೆಲ್ಲ ಗಡ್ಕರಿ ಬೆಂಗಳೂರಿಗೆ ಬಂದು ಯಡ್ಡಿ ವಿರುದ್ಧ ನಡೆಸಿದ ಕಾರ್ಯಾಚರಣೆಯ ಫಲವಲ್ಲದೇ ಮತ್ತೇನು? ಗಡ್ಕರಿ ಬಂದುಹೋದ ನಂತರ ಸದಾನಂದ ಗೌಡರ ಬಾಡಿ ಲಾಂಗ್ವೇಜ್ ಬದಲಾಗಿದೆ. ಯಡ್ಡಿಯ ಮುಂದೆ ಹಿಂದಿನಷ್ಟು ನಯವಿನಯವಿಲ್ಲ. ಗಡ್ಕರಿ ಬರುವುದಕ್ಕೂ ಮುನ್ನ ಇದ್ದ ವೀರಾವೇಶದ ಗತ್ತು ಈಗ ಯಡ್ಡಿಯಲ್ಲಿ ಕಾಣಿಸುತ್ತಿಲ್ಲ. ಏಕೆಂದರೆ ಮೊದಲಿದ್ದಷ್ಟು ಶಾಸಕರ ಬೆಂಬಲವಾಗಲಿ ಆತ್ಮಸ್ಥೈರ್ಯವಾಗಲಿ ಈಗ ಯಡ್ಡಿ ಪಾಲಿಗೆ ಉಳಿದಂತಿಲ್ಲ.

• ರಾ. ಸೋಮನಾಥ್


ಚಂದ್ರೇಗೌಡರೂ ಸಿ.ಎಂ. ಆಗಬೇಕಂತೆ!

ಸದಾನಂದ ಗೌಡರ ವಿರುದ್ಧದ ಯಡ್ಡಿಯ ಹೊಟ್ಟೆಸಂಕಟ ಉಲ್ಬಣಿಸುತ್ತಿದ್ದಂತೆಯೇ ಹಳೇ ಗೌಡ ಚಂದ್ರೇಗೌಡರ ಸಿ.ಎಂ. ಕುರ್ಚಿಯ ಆಕಾಂಕ್ಷೆಯೂ ಕೆರಳಿ ನಿಂತಿದೆ!

ಮೊನ್ನೆ ಹುಟ್ಟುಹಬ್ಬಕ್ಕೂ ವಾರದ ಮೊದಲೇ ಕಾದು ಯಡ್ಡಿಯನ್ನು ಮಾತಿಗೆಳೆದ ಚಂ.ಗೌ. ಈ ಪುರುಷಾರ್ಥಕ್ಕೆ ನೀವು ಸದಾನಂದ ಗೌಡರನ್ನು ಸಿ.ಎಂ. ಮಾಡಬೇಕಿತ್ತಾ? ಆತನ ಬದಲು ನನ್ನನ್ನೇ ಬೆಂಬಲಿಸಿದ್ರೆ ನಿಮಗೆ ಈ ಗತಿ ಬರ್ತಿತ್ತೆ? ಎಂದು ಅನುಕಂಪ ತೋರಿದರಂತೆ. ಪಾಪ ಯಡ್ಡಿಗಿದು ಅಹುದೆನ್ನಿಸಿರಬೇಕು. ಚಂದ್ರೇಗೌಡರ ದುರಾಶೆ ಇಷ್ಟಕ್ಕೇ ತಣಿಯದೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಆರೆಸ್ಸೆಸ್ ಮತ್ತು ಅನಂತ್‌ಕುಮಾರ್ ಬಣವನ್ನು ಪಳಗಿಸುವ ಮಟ್ಟಕ್ಕೂ ಬೆಳೆದಿದ್ದು ಯಡ್ಡಿ ಕರೆದ ಶಾಸಕರ ಸಭೆಯ ವಿಷಯದಲ್ಲಿ.

ನಿನ್ನೆ ಮೊನ್ನೆಯ ತನಕ ಯಡ್ಡಿಯ ಬಲಗೈ ಬಂಟ ರೇಣುಕಾಚಾರ್ಯನನ್ನೂ ಮೀರಿಸುವಂತೆ ಯಡ್ಡಿ ಪರ ಹೂಂಕರಿಸುತ್ತಿದ್ದ ಚಂದ್ರೇಗೌಡರು ಇದ್ದಕ್ಕಿದ್ದಂತೆ 'ಯಡಿಯೂರಪ್ಪನವರು ಕರೆದ ಸಭೆಯಲ್ಲಿ ಅಂಥಾ ರಾಜಕೀಯವೇನೂ ಇಲ್ಲ ಅಂದರಷ್ಟೇ ನಾನೂ ಹೋಗಿ ಭಾಗವಹಿಸ್ತೀನಿ' ಎಂದುಬಿಟ್ಟರು!

ಇದರರ್ಥ ರಾಜಕೀಯವಿಲ್ಲ ಅಂದರಷ್ಟೇ ಚಂದ್ರೇಗೌಡರು ಭಾಗವಹಿಸುತ್ತಾರೆ. ಹಾಗೊಮ್ಮೆ ರಾಜಕೀಯವಿದ್ದರೆ ಅದಕ್ಕೆ ಚಂ.ಗೌ. ಬೆಂಬಲವಿಲ್ಲ!



ಚಂದ್ರೇಗೌಡರ ಇದೆಲ್ಲ ಕಣ್ಣಾಮುಚ್ಚಾಲೆಯ ಉದ್ದೇಶವೇನೆಂದರೆ ಅತ್ತ ಯಡ್ಡಿಯನ್ನೂ ಸಂಭಾಳಿಸುವುದು. ಯಡ್ಡಿಯ ಜೊತೆಗಿದ್ದೂ ಅನಂತ್ ಬಣ ಮತ್ತು ಆರೆಸ್ಸೆಸ್ ಪಾಳಯವನ್ನು ಓಲೈಸುವುದು. ಸದಾನಂದ ಗೌಡರನ್ನು ಪದಚ್ಯುತಿಗೊಳಿಸುವಲ್ಲಿ ಯಡ್ಡಿಯ ಕೈ ಮೇಲಾಗಿದ್ದೇ ಆದ ಪಕ್ಷದಲ್ಲಿ ಮತ್ತೊಬ್ಬ ಒಕ್ಕಲಿಗ ಮುಖ್ಯಮಂತ್ರಿಯಾಗುವ ಪ್ರಶ್ನೆ ಬಂತೆಂದರೆ ಹೇಗೂ ಯಡ್ಡಿ ಸಖ್ಯದ ಕಾರಣಕ್ಕೆ ಅನಂತ್ ಬಣ ಅಶೋಕ್ ವಿರುದ್ಧ ನಿಲ್ಲುತ್ತದೆ. ಆಗ ತನ್ನ ರಿಂಗ್ ಎಸೆದು ಬಿಟ್ಟರೆ ಯಡ್ಡಿಯೂ ಒಪ್ಪಬೇಕು, ಅನಂತ್ ಬಣವೂ ತಲೆದೂಗಿಸಲೇಬೇಕು!

ಇದು ಚಂದ್ರೇಗೌಡರ ಹಗಲು ಕನಸು. ಬಹುಶಃ ಒಕ್ಕಲಿಗ ಪತ್ರಕರ್ತರ 'ನ್ಯೂಸ್ ಪ್ಲಾಂಟರ್ಸ್' ಪಟಾಲಮ್ಮೊಂದು ಮಾಡಲು ಬೇರೆ ಕೆಲಸವಿಲ್ಲದೆ ಚಂದ್ರೇಗೌಡರ ತಲೆಗೆ ಸಿ.ಎಂ. ಗಾದಿಯ ಬೀಜ ಬಿತ್ತಿರಬೇಕು. ಪಾಪ ಗೌಡರಿಗೆ ಇಪ್ಪತ್ತರ ಅರಳುಮರಳು ಮತ್ತು ಕಾಮನ್‌ಸೆನ್ಸ್‌ನ ತೀವ್ರ ಬರಗಾಲ. ಮತ್ತೊಬ್ಬ ಒಕ್ಕಲಿಗನನ್ನು ಸಿ.ಎಂ. ಮಾಡುವುದೇ ಆದ ಪಕ್ಷದಲ್ಲಿ ಸದಾನಂದ ಗೌಡರನ್ನು ಏಕೆ ಇಳಿಸುತ್ತಾರೆ? ಮೂಲ ಬಿಜೆಪಿಯಲ್ಲದ, ಆರೆಸ್ಸೆಸ್ ಹಿನ್ನೆಲೆಯಿಲ್ಲದ, ನಿನ್ನೆಮೊನ್ನೆಯಷ್ಟೇ ಬಿಜೆಪಿಗೆ ಬಂದ ಯಾವ ನಾಯಕನನ್ನು ಬಿಜೆಪಿ ಅಧಿಕಾರಕ್ಕೆ ಬಂದ ಯಾವ ರಾಜ್ಯದಲ್ಲಿ ಮುಖ್ಯಮಂತ್ರಿ ಮಾಡಿದೆ?

ಕನಸು ಕಾಣಬೇಕು ನಿಜ, ಹಾಗಂತ ತಿರುಕನ ಕನಸಾಗಬಾರದಲ್ಲವೆ?,

ಹ್ಯಾಂ

ರಾಧಿಕಾಳ ಲಕ್ಕಿ ಲಾಗ ಹೊಡೀತು!

ಎಚ್.ಡಿ.ಕುಮಾರಸ್ವಾಮಿ ಅರ್ಪಿಸಿ, ಶ್ರೀಮತಿ ...ಧಿಕಾ ಕುಮಾರಸ್ವಾಮಿ ನಿರ್ಮಿಸಿದ ಚೊಚ್ಚಲ ...ತ್ರ 'ಲಕ್ಕಿ' ಬಾಕ್ಸ್ ಆಫೀಸಿನಲ್ಲಿ ಭರ್ಜರಿ ಲಾಗ ...ೂಡೆದಿದೆ.

ಮಾಜಿ ನಟಿ ರಾಧಿಕಾ ನಿರ್ಮಾಪಕಿಯಾಗಿ ಕನ್ನಡ ...ತ್ರರಂಗಕ್ಕೆ ಎಂಟ್ರಿ ಕೊಟ್ಟಾಗ ಇಡೀ ಚಿತ್ರರಂಗ ...ುಚಿಪಟ್ಟಿತ್ತು. ಅದೂ ತನ್ನ ಮೊದಲ ಚಿತ್ರದಲ್ಲೇ ...ಧಿಕಾ ತನ್ನ ಹಳೇ ಎದುರಾಳಿ ರಮ್ಯಾ ಮತ್ತು ...ೊಸ ಹೀರೋ ಯಶ್‌ಗೆ ಛಾನ್ಸು ಕೊಟ್ಟಿದ್ದು ...ಲ್ಲರನ್ನೂ ಬೆರಗುಗೊಳಿಸಿತ್ತು. ಮಾಜಿ ...ುಖ್ಯಮಂತ್ರಿ ಮತ್ತು ಮಾಜಿ ಸಿನಿಮಾ ನಿರ್ಮಾಪಕ ...ುಮಾರಸ್ವಾಮಿಯವರ ಸಂಪೂರ್ಣ ...್ಯಕಪ್‌ನೊಂದಿಗೆ ರಾಧಿಕಾ ನಿರ್ಮಾಣಕ್ಕಿಳಿದದ್ದು ...ಪವಳಿದ ಗಾಂಧಿನಗರದಲ್ಲಿ ಹೊಸ ಆಶಯವನ್ನು ...ತ್ತಿತ್ತು. ಸ್ವತಃ ಕುಮಾರಸ್ವಾಮಿ ಗಾಂಧಿನಗರದ ...-ಅಗಲ ಬಲ್ಲವರು; ಒಂದು ದಶಕದ ಹಿಂದೆ ...ೂರ್ಯವಂಶ'ದಂಥ ಹೈಬಜೆಟ್ ಸಿನಿಮಾವನ್ನು ...ರ್ಮಿಸಿದ್ದವರು; ತಂತ್ರಜ್ಞರು ಮತ್ತು ಕಲಾವಿದರಿಗೆ ...ರಾಳವಾಗಿ ಸಂಭಾವನೆ ನೀಡಿದ್ದವರು. ಈಗ ...ವರು ತಮ್ಮ ನವ ಪತ್ನಿ ರಾಧಿಕಾಳ ಮೂಲಕ ...ಿಮಾ ನಿರ್ಮಾಣವನ್ನು ಮತ್ತೆ ಆರಂಭಿಸಿದ್ದರಿಂದ ...ಹಳಷ್ಟು ಜನ ಸಂತಸಗೊಂಡಿದ್ದರು.

ಆದರೆ 'ಲಕ್ಕಿ' ಚಿತ್ರ ಈಗ ಎಲ್ಲರ ನಿರೀಕ್ಷೆಗಳಿಗೆ, ...್ಯಾಚಾರಗಳಿಗೆ ತಣ್ಣೀರೆರಚಿದೆ. ಆ ಸಿನಿಮಾ ...ುಗಡೆಯಾದ ದಿನದ ಮೊದಲ ಎರಡು ...ೀಗಳಿಗೆ ಜನ ಕಿಕ್ಕಿರಿದಿದ್ದರೂ ಸಂಜೆ ಹೊತ್ತಿಗೆ ...ಿಮಾ ಮಂದಿರಗಳು ಮಂಕುಬಡಿದಂತೆ ...ಲಿಯಾಗಿದ್ದವು.

ಅದಕ್ಕೆ ಮುಖ್ಯ ಕಾರಣ ಹೂರಣವಿಲ್ಲದೆ ಕತೆ.

ಚಿತ್ರದ ನಾಯಕ ಯಶ್ ಲಕ್ಕಿ ಹೆಸರಿನ ಪೋರ್ಕಿ ...ಪ್‌ನಲ್ಲಿ ನಾಯಕಿ ರಮ್ಯಾ ಹಿಂದೆ ಎಲ್ಲೆಂದರಲ್ಲಿ ...ುಗುತ್ತಿರುತ್ತಾನೆ. ಪ್ರೀತಿಸುವಂತೆ ...ಡಿಸುತ್ತಿರುತ್ತಾನೆ. ತನ್ನ ಜಳಕ್ಕುಬುಳಕ್ಕು ಬಟ್ಟೆ, ...ಣ್ಣಬಣ್ಣದ ಕೂದಲು, ಕೆಟ್ಟ ಡಿಸೈನಿನ ಗಡ್ಡ ...ುಮ್ಯಾಗೆ ಹಿಡಿಸುತ್ತಿಲ್ಲ ಎಂದು ಅರಿತ ಲಕ್ಕಿ ತನ್ನ ...ೀ ಲುಕ್ಕು ಬದಲಿಸಿಕೊಂಡು ವಿಕ್ಕಿ ಹೆಸರಿನಲ್ಲಿ ...ಕ್ಕಾಪಟ್ಟೆ ಡೀಸೆಂಟ್ ಆಗಿಬಿಡುತ್ತಾನೆ. ಮಾತ್ರವಲ್ಲ, ...ಮ್ಯಾ ಕೆಲಸ ಮಾಡುವ ಜಾಹೀರಾತು ಸಂಸ್ಥೆಯಲ್ಲೇ





ಕೆಲಸ ಗಿಟ್ಟಿಸುತ್ತಾನೆ. ಆಕೆ ವಾಸಿಸುವ ಅಪಾರ್ಟ್‌ಮೆಂಟಿನಲ್ಲೇ ಒಂದು ಫ್ಲಾಟನ್ನೂ ಪಡೆಯುತ್ತಾನೆ. ಆಗ ನಾಯಕಿ ಮೆಲ್ಲಮೆಲ್ಲಗೆ ಲಕ್ಕಿಗೆ ಹತ್ತಿರವಾಗುತ್ತಾಳೆ. ಒಮ್ಮೆ ಸಿಕ್ಕಿದ್ದೇ ಛಾನ್ಸು ಎಂದು ಆಕೆಗೆ 'ಐ ಲವ್ ಯೂ..' ಎಂದೇಬಿಡುತ್ತಾನೆ. ಆದರೆ ರಮ್ಯಾ ತಾನು ಈ ಹಿಂದೆಯೇ ಲಕ್ಕಿ ಎಂಬಾತನಿಗೆ ಮನಸ್ಸು ನೀಡಿರುವುದಾಗಿಯೂ, ಆತನ ಪೋರ್ಕಿ ಗೆಟಪ್ಪು ತನಗೆ ತುಂಬಾ ಇಷ್ಟ ಎಂಬುದಾಗಿಯೂ ಹೇಳುತ್ತಾಳೆ. ಈ ಕಾರಣಕ್ಕೆ ವಿಕ್ಕಿ ಮತ್ತೆ ಮೊದಲಿನ ಲಕ್ಕಿಯ ಪೋರ್ಕಿ ಗೆಟಪ್ಪಿಗೇ ಮರಳುತ್ತಾನೆ.... ಇದಿಷ್ಟೇ ಸಿನಿಮಾದ ಕತೆ. ಇದನ್ನು ಎರಡೂವರೆ ಗಂಟೆಗಳ ಕಾಲ ಎಳೆದೆಳೆದೂ ಸ್ಕ್ರೀನ್‌ಪ್ಲೇ ಮಾಡಿ, ನಗು ಬಾರದ ಕಾಮಿಡಿಯನ್ನು ಬೆರೆಸಿ ಸಿನಿಮಾ ಮಾಡಲಾಗಿದೆ.


'ಲಕ್ಕಿ' ವಿಚಾರದಲ್ಲಿ ನಿಜಕ್ಕೂ ಮೆಚ್ಚಬೇಕಿರುವುದು ನಿರ್ಮಾಪಕಿ ರಾಧಿಕಾಳನ್ನು. ಇಷ್ಟು ಕಳಪೆ ಕಥೆಯ ಸಿನಿಮಾದ ಪ್ರತಿಯೊಂದು ಫ್ರೇಮೂ ಕಲರ್‌ಫುಲ್ ಆಗಿ ಕಾಣಿಸುವಂಥ ಖರ್ಚು ಮಾಡಿದ್ದಾರೆ. ಹಾಡುಗಳಿಗೆ ಹಾಕಿರುವ ಸೆಟ್ಟುಗಳು, ಬಳಸಿರುವ ಕ್ಯಾಮೆರಾ ಮತ್ತು ಲೆನ್ಸುಗಳ ಕ್ವಾಲಿಟಿ ಅದ್ಭುತ. ಆದರೆ ಕತೆಯಲ್ಲಿ ತಿರುಳೇ ಇಲ್ಲದಿರುವುದು ನೋಡುಗರ ತಿರಸ್ಕಾರಕ್ಕೆ ಕಾರಣವಾಗಿದೆ.

ಅಂದಹಾಗೆ, ಈ ಚಿತ್ರದ ನಿರ್ಮಾಣ, ಪಬ್ಲಿಸಿಟಿ, ಕಲಾವಿದರ ಸಂಭಾವನೆ ಎಲ್ಲಾ ಸೇರಿ ಖರ್ಚಾಗಿರುವ ಒಟ್ಟು ಮೊತ್ತ ಬರೋಬ್ಬರಿ ಐದು ಕೋಟಿ ರೂಪಾಯಿ. ಹದಿನೈದು ಲಕ್ಷಕ್ಕೂ ಬೆಲೆ ಬಾಳದೇ ಕೂತಿದ್ದ ಯಶ್ ಈ ಚಿತ್ರಕ್ಕೆ ಪಡೆದ ಅಮೌಂಟು ನಲವತ್ತಾರು ಲಕ್ಷ. ಇನ್ನು ರಮ್ಯಾ ತನಗಿರುವ ಮಾರ್ಕೆಟ್ ರೇಟು 30 ಲಕ್ಷವನ್ನಷ್ಟೇ ಪಡೆದಿದ್ದಾಳೆ. ಈಗ ಲಕ್ಕಿ ಒಂದು ವಾರದಲ್ಲಿ ಮಾಡಿರುವ ಗಳಿಕೆಯಲ್ಲಿ ಖರ್ಚು ವೆಚ್ಚಗಳನ್ನು ಕಳೆದರೆ ಭರ್ತಿ ನಾಲ್ಕು ಕೋಟಿ ರೂಪಾಯಿಗಳು ನಿರ್ಮಾಪಕಿ ರಾಧಿಕಾಳ ಕೈಬಿಟ್ಟುಹೋಗಿದೆ!



'ಹಲ್‌ಕಟ್' ಡಾಕ್ಟರ್ ಡೈರೆಕ್ಷನ್ನು!

ಈ ಚಿತ್ರದ ನಿರ್ದೇಶಕ ಡಾ. ಸೂರಿ ಎಂಬಾತ. ಈತ ವೃತ್ತಿಯಲ್ಲಿ ದಂತವೈದ್ಯ. ಚಿತ್ರರಂಗಕ್ಕೂ ಈತನಿಗೂ ಯಾವ ದಿಕ್ಕಿನಿಂದಲೂ ಸಂಬಂಧ, ಸಂಪರ್ಕಗಳಿಲ್ಲ. ರಾಧಿಕಾಳ ಬೆನ್ನಿಗೆ ನಿಂತು, ಆಕೆಯ ವ್ಯವಹಾರಗಳನ್ನೆಲ್ಲಾ ನೋಡಿಕೊಳ್ಳುತ್ತಿರುವ ಬಂಟಿ ಎಂಬಾತನಿಗೆ ಈ ದಂತವೈದ್ಯ ಕ್ಲೋಸ್ ಫ್ರೆಂಡು. ಹೀಗಾಗಿ ಹಲ್ಲು ಕಟ್ಟುತ್ತಿದ್ದ ಡಾಕ್ಟರ್‌ನನ್ನು ಏಕಾಏಕಿ ಕರೆತಂದು ಡೈರೆಕ್ಟರ್ ಜಾಗದಲ್ಲಿ ಕೂರಿಸಲಾಯಿತು.



ಅಸಲಿಗೆ ಈ ಚಿತ್ರಕ್ಕೆ ಕಥೆ ಬರೆದದ್ದು ಗೌಸ್‌ಪೀರ್ ಎಂಬ ಯುವಕ. ಇತ್ತೀಚೆಗೆ ಚಿತ್ರಸಾಹಿತಿಯಾಗಿ ಒಂದಿಷ್ಟು ಹೆಸರು ಮಾಡುತ್ತಿರುವ ಗೌಸ್‌ಪೀರ್ 'ಲಕ್ಕಿ' ಚಿತ್ರದ ಕಥೆ, ಚಿತ್ರಕಥೆ, ಸಾಹಿತ್ಯ ಮತ್ತು ಸಂಭಾಷಣೆ ಇವೆಲ್ಲವನ್ನು ಬರೆಯುವ ಜವಾಬ್ದಾರಿಯನ್ನು ತನ್ನ ಹೆಗಲಿಗೇರಿಸಿಕೊಂಡಿದ್ದ. ನಿಜಕ್ಕೂ ಗೌಸ್‌ಪೀರ್ ಕೂತು ಚೆಂದನೆಯ ಕಥೆ ಬರೆದಿದ್ದರೆ ಚೆನ್ನಾಗಿರುತ್ತಿತ್ತು. ಆದರೆ ಆತನಿಗೆ ಅದೇನಾಯಿತೋ? ಇದ್ದಕ್ಕಿದ್ದಹಾಗೆ ಸಿಕ್ಕ ಈ ಅವಕಾಶವನ್ನು ಆದಷ್ಟು ಬೇಗ ಮುಗಿಸುವ ಆತುರಕ್ಕೆ ಬಿದ್ದ ಗೌಸ್‌ಪೀರ್ ಶಾರುಖ್ ಖಾನ್ ನಟಿಸಿದ್ದ 'ರಬ್ ನೇ ಬನಾ ದಿ ಜೋಡಿ' ಎಂಬ ಹಿಂದಿ ಚಿತ್ರವನ್ನೇ ಅಲ್ಪಸ್ವಲ್ಪ ಬದಲಾಯಿಸಿ ಕಾಪಿ ಹೊಡೆದ. ಪೇಲವವಾದ ಕಥೆಗೆ ಒಂದಿಷ್ಟು ಬಣ್ಣ ತುಂಬಿದ್ದು ಸಹ ನಿರ್ದೇಶಕ ಪ್ರಶಾಂತ್ ಕಾಳೇಗೌಡ. ಅಲ್ಲಿಗೆ ಹಲ್‌ಕಟ್ ಡಾಕ್ಟರ್ ಸೂರಿ ಪೂರ್ತಿ ಡಮ್ಮಿ ಕ್ಯಾಂಡಿಡೇಟು ಅನ್ನೋದು ರುಜುವಾತಾಯಿತು.


ನಷ್ಟವಾದರೂ ರಾಧಿಕಾಗೆ ಲಾಭ!

ಸಿನಿಮಾ ಬಿಡುಗಡೆಯಾದ ಒಂದೇ ವಾರಕ್ಕೆ ರಾಜ್ಯಾದ್ಯಂತ ಕಲೆಕ್ಷನ್ ಕಳೆದುಕೊಂಡು 'ಲಕ್ಕಿ' ಭೀಕರವಾಗಿ ನೆಲಕಚ್ಚಿದ್ದರೂ, ನಾಲ್ಕು ಕೋಟಿಗಳಷ್ಟು ಹಣ ಪೋಲಾಗಿದ್ದರೂ, ನಿರ್ಮಾಪಕಿ ರಾಧಿಕಾ ಒಂದು ರೀತಿಯಲ್ಲಿ ಲಾಭದಲ್ಲಿದ್ದಾರೆ!

ರಾಧಿಕಾಗೆ ತಾನು ಕುಮಾರಸ್ವಾಮಿಯ ಹೆಂಡತಿಯೆಂದು ಅಧಿಕೃತವಾಗಿ ಘೋಷಿಸಿಕೊಳ್ಳುವ ಅಗತ್ಯವಿತ್ತು. ಹಾಗೆಯೇ ಕಳೆದ ನಾಲ್ಕು ವರ್ಷಗಳಿಂದ ಪಂಜರದೊಳಗಿರುವ ಗಿಳಿಯಂತಾಗಿದ್ದ ರಾಧಿಕಾಗೆ ಹೊರ ಪ್ರಪಂಚಕ್ಕೆ ತನ್ನನ್ನು ತೆರೆದುಕೊಳ್ಳುವ, ಆ ಮೂಲಕ ಸ್ವತಂತ್ರಳಾಗುವ ಅಗತ್ಯ ಕೂಡಾ ಇತ್ತು. ಅಷ್ಟರಮಟ್ಟಿಗೆ 'ಲಕ್ಕಿ' ರಾಧಿಕಾಗೆ ಲಾಭವೇ ತಂದುಕೊಟ್ಟಿದೆ!!

• ಅರುಣ್ ಕುಮಾರ್.ಜಿ

...ನಾಯಿಯೇ ವಾಸಿ ಎಂದಳು ರಮ್ಯಾ!



ರಾಧಿಕಾ ಕುಮಾರಸ್ವಾಮಿ ನಿರ್ಮಿಸುವ ಚಿತ್ರದಲ್ಲಿ ಯಶ್ ನಾಯಕನಟ ಎಂದು ಅನೌನ್ಸ್ ...ಗುತ್ತಿದ್ದಂತೇ ಯಶ್‌ನನ್ನು ಹಿಡಿದು ನಿಲ್ಲಿಸುವುದೂ ಕಷ್ಟವಾಯಿತು.

ಅಸಲಿಗೆ ಈ ಚಿತ್ರದ ನಾಯಕನ ಪಾತ್ರಕ್ಕೆ ರಾಧಿಕಾ ಮೊದಲು ಆಯ್ಕೆ ಮಾಡಿದ್ದು 'ನೆನಪಿರಲಿ' ...ಖ್ಯಾತಿಯ ಪ್ರೇಮ್‌ನನ್ನು. ಆದರೆ ರಾಧಿಕಾಳಿಗೆ ದುಂಬಾಲು ಬಿದ್ದು ತನಗೆ ಅವಕಾಶ ಕೊಡುವಂತೆ ...ೋಗರೆದು ಛಾನ್ಸು ಗಿಟ್ಟಿಸಿಕೊಂಡವನು ಯಶ್.

ಅವಕಾಶ ಕೇಳಿ ಪಡೆಯುವುದು ಅಪರಾಧವಲ್ಲ ಬಿಡಿ. ಆದರೆ ಆ ಅವಕಾಶ ಪಡೆದ ನಂತರ ...ಯಶ್ ಮೆರೆದ ರೀತಿ ಇದೆಯಲ್ಲಾ? ಅದು ನಿಜಕ್ಕೂ ದುರಹಂಕಾರದ ಪರಮಾವಧಿ. ಛಾನ್ಸು ಕೊಟ್ಟ ...ಧಿಕಾ ಬಳಿಯೇ ಯಶ್ ಕಿರಿಕ್ಕಿಗೆ ನಿಂತ. ಅದು ಯಾವ ಮಟ್ಟಕ್ಕೆ ಹೋಯಿತೆಂದರೆ ಕಡೆಗೆ ...ುಮಾರಣ್ಣ ಈತನನ್ನು ಕರೆಸಿ ಸರಿಯಾಗಿ ತಲ್‌ತಲೆಗೇ ತಪರಾಕಿ ಕೊಟ್ಟರು. ಆದಾದನಂತರ ಬಾಲ ...ುದುರಿಕೊಂಡ ಯಶ್ ಚಿತ್ರದ ಕೆಲಸ ಮುಗಿಸಿಕೊಟ್ಟ.

ಅಷ್ಟಕ್ಕೇ ಸುಮ್ಮನಾಗದ ಯಶ್ "ನಾನು ನಟಿಸಿರುವ 'ಲಕ್ಕಿ' ಸಿನಿಮಾ ಗೆದ್ದರೆ ಅದು ನನ್ನಿಂದಲೇ..." ...ಂದು ಕಂಡಲ್ಲೆಲ್ಲಾ ಹೇಳಿಕೊಂಡು ತಿರುಗಾಡಿದ. ಈ ವಿಚಾರ ರಮ್ಯಾ ಕಿವಿಗೆ ತಲುಪಿದ್ದೇ ತಡ, ಆಕೆ ...ಟ್ವಿಟರ್‌ನಲ್ಲಿ "ಒಂದು ವೇಳೆ ಸಿನಿಮಾ ಗೆದ್ದರೆ ಅದು ನನ್ನಿಂದಲೂ ಅಲ್ಲ, ಹೀರೋ ಯಶ್‌ನಿಂದಲೂ ...ಅಲ್ಲ. ನಮ್ಮಿಬ್ಬರ ಜೊತೆ ನಟಿಸಿರುವ ಪೊಮೆರೇನಿಯನ್ ನಾಯಿಯಿಂದ. ನಮ್ಮೆಲ್ಲರಿಗಿಂತಲೂ ಅದು ...ಚೆಂದವಾಗಿ ನಟಿಸಿದೆ" ಎಂದು ಯಶ್ ಮುಟ್ಟಿ ನೋಡಿಕೊಳ್ಳುವಂತೆ ಬರೆದಳು!!

ಕೋಟಿ ಕೊಡೋರು ಯಾರು ಗುರೂ?

'ಲಕ್ಕಿ' ಚಿತ್ರಕ್ಕೆ ಆಯ್ಕೆಯಾಗುವ ಮುನ್ನ ದಾಸರಹಳ್ಳಿಯ ಕಾರ್ಪೊರೇಟರ್ ಶಿವನಂಜಯ್ಯ ನಿರ್ಮಿಸಬೇಕಿದ್ದ ಚಿತ್ರಕ್ಕೆ ಇದೇ ಯಶ್ ಹದಿನೆಂಟು ಲಕ್ಷಕ್ಕೆ ಕಮಿಟ್ ಆಗಿದ್ದ. ಅದಕ್ಕೆಂದು ಹತ್ತು ಲಕ್ಷ ರೂಪಾಯಿಗಳ ಅಡ್ವಾನ್ಸ್ ಕೂಡಾ ಪಡೆದಿದ್ದ. ಆದರೆ 'ಲಕ್ಕಿ' ಬಿಡುಗಡೆಗೆ ಸಿದ್ಧವಾಗಿದ್ದೇ ತಡ ಯಶ್ ತನ್ನ ಬೆಲೆಯನ್ನು ಒಂದು ಕೋಟಿಗೆ ಏರಿಸಿಕೊಂಡ. ಅಷ್ಟೇ ಅಲ್ಲ ಶಿವನಂಜಯ್ಯ ಮುಂದೆ "ನೀವು ಕೊಟ್ಟ ಹತ್ತು ಲಕ್ಷದ ಜೊತೆಗೆ ಇನ್ನೂ ತೊಂಭತ್ತು ಲಕ್ಷ ಕೊಟ್ಟರೆ ನಿಮ್ಮ ಸಿನಿಮಾದಲ್ಲಿ ನಟಿಸ್ತೀನಿ" ಎಂದು ಹೊಸ ವರಸೆ ಪ್ರಾರಂಭಿಸಿದ.


ಅದನ್ನು ಕೇಳಿ ಗಾಬರಿಗೆ ಬಿದ್ದ ನಿರ್ಮಾಪಕ ಕಂ ಕಾರ್ಪೊರೇಟರ್ ಶಿವನಂಜಯ್ಯ ಕಳೆದ ವಾರ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯಲ್ಲಿ ಯಶ್ ವಿರುದ್ಧ ದೂರು ದಾಖಲಿಸಿದ್ದಾರೆ. ಈಗ 'ಲಕ್ಕಿ' ಸಿನಿಮಾ ಕೂಡಾ ಬಗ್ಗಬೋರಲು ಬಿದ್ದಿದೆ. ಗಾಂಧಿನಗರದ ಜನ "ಯಶ್‌ನನ್ನು ಹಾಕಿಕೊಂಡರೆ ಸಾಡೇಸಾತ್ ಹೆಗಲೇರಿದಂತೆ" ಎಂದು ಗುಸುಗುಟ್ಟುತ್ತಿದ್ದಾರೆ. ಇನ್ನು ಯಶ್‌ಗೆ ಕೋಟಿ ಕೊಡೋರು ಯಾರೋ? ಗೊತ್ತಿಲ್ಲ..

ಯಾರೋ ಉಳ್ಳವರ ಕುಟುಂಬದ ಹುಡುಗನೊಬ್ಬ ಹೀಗೆ ತಿಮಿರು ಮಾಡಿದ್ದರೆ ಅದರಲ್ಲಿ ಹೊಸದೇನೂ ಇರುತ್ತಿರಲಿಲ್ಲ. ಆದರೆ ಯಶ್ ಕೂಡಾ ತೀರಾ ಕೆಳಮಧ್ಯಮವರ್ಗದಿಂದ ಬಂದ ಹುಡುಗ. ಈತನ ತಂದೆ ಕೆಎಸ್‌ಆರ್‌ಟಿಸಿಯಲ್ಲಿ ಇವತ್ತಿಗೂ ಡ್ರೈವರ್ ಆಗಿ ದುಡಿಯುತ್ತಿದ್ದಾರೆ.

ಇಂಥ ಚಾಳಿ ಯಶ್‌ಗೆ ತರವೇ?



ಯೋಗೇಶಿಗೆ ಜೈಲು ಯೋಗ!



ಸನ್ಮಾನ್ಯ ಸಿ.ಪಿ.ಯೋಗೇಶ್ವರ್ ಮೇಲೆ 14 ಪ್ರಕರಣಗಳು ದಾಖಲಾಗಿವೆ. ಅವುಗಳ ಜೊತೆಗೆ ಆದಾಯ ತೆರಿಗೆ ವಂಚನೆಗಾಗಿ ಐಟಿ ಇಲಾಖೆಯವರೂ ಅನಿವಾರ್ಯವಾಗಿ ಒಂದು ಕೇಸು ಜಡಿದಿದ್ದಾರೆ. ಇಷ್ಟೆಲ್ಲಾ ಆದಮೇಲೆ ಕರ್ನಾಟಕ ಲೋಕಾಯುಕ್ತ ಸುಮ್ಮನಿರಲು ಸಾಧ್ಯವೆ? ಯೋಗೇಶಿಯ ಈ ಭ್ರಷ್ಟಾಚಾರದ ಹಗರಣದ ಬಗ್ಗೆ ಕೇಸು ದಾಖಲಿಸಿಕೊಂಡಿರುವ ಲೋಕಾಯುಕ್ತದಿಂದ ಈಗಾಗಲೇ ತನಿಖೆ ಪ್ರಾರಂಭವಾಗಿದೆ. ಇಷ್ಟೆಲ್ಲಾ ಆಗಿ ಕನಿಷ್ಠ ಪಕ್ಷ ಜೈಲುಯೋಗವೂ ದೊರಕದೇ ಹೋದರೆ ಇಂಥಾ ಮಹತ್ವದ ಸಾಧನೆಗಳ ಸರದಾರನನ್ನು ಸರಿಯಾಗಿ ಗುರುತಿಸುವುದಾದರೂ ಹೇಗೆ?

• ದೊಡ್ಡಿಪಾಳ್ಯ ನರಸಿಂಹಮೂರ್ತಿ

ಬಿಜೆಪಿ ಟೀಮಿನಲ್ಲಿ ಮತ್ತೊಬ್ಬ ಮಂತ್ರಿ ಹಿಟ್‌ವಿಕೆಟ್ ಆಗಿದ್ದಾನೆ. ಮೂರನೇ ಅಂಪೈರ್‌ನಿಂದ ರೆಡ್‌ಸಿಗ್ನಲ್ ಬರುವುದು ಮಾತ್ರ ಬಾಕಿಯಿದ್ದು ಸದ್ಯದಲ್ಲೇ ಕಾಡಿನ ಮಂತ್ರಿ ಯೋಗೇಶಿ ಪದವಿ ಕಳೆದುಕೊಂಡು ಜೈಲು ಸೇರುವುದು ಗ್ಯಾರಂಟಿ! ಮೂಲತಃ ಚನ್ನಪಟ್ಟಣ ತಾಲ್ಲೂಕಿನ ಚಕ್ಕೆರೆ ಗ್ರಾಮದ ಬಡ ಮೇಷ್ಟ್ರ ಮಗನಾಗಿ ಹುಟ್ಟಿದ ಈ ಆಸಾಮಿ ಏನೇನೆಲ್ಲಾ ಸಾಧಿಸಿ ಕೊನೆಗೆ ಬಿಜೆಪಿಯಲ್ಲಿ ಮಂತ್ರಿಯಾಗಿ ನಂತರ ಜೈಲು ಸೇರಲಿರುವ ಕತೆಯನ್ನಾಧರಿಸಿ ಒಂದು ಸಿನಿಮಾ ಮಾಡೋದಾದರೆ ನೂರು ದಿನ ಓಡೋದೂ ಗ್ಯಾರಂಟಿ!

ಸನ್ಮಾನ್ಯರ ಮೇಲೆ 6+8+1+1= ಒಟ್ಟು 16 ಕೇಸುಗಳು ದಾಖಲಾಗಿವೆ.

ಇವುಗಳಲ್ಲಿ ಕ್ರಿಮಿನಲ್ ಪ್ರಕರಣಗಳು ಆರು, ಅವರ ಮಾಲಿಕತ್ವದ 'ಮೆಗಾಸಿಟಿ ಡೆವಲಪರ್ಸ್ ಅಂಡ್ ಬಿಲ್ಡರ್ಸ್ ಲಿಮಿಟೆಡ್" ಕಂಪನಿಯಿಂದ ನಡೆದ ಅವ್ಯವಹಾರ, ಮೋಸಗಳಿಗೆ ಸಂಬಂಧಿಸಿ ಎಂಟು ಪ್ರಕರಣಗಳು ಹೀಗೆ ಒಟ್ಟು 14 ಪ್ರಕರಣಗಳು ದಾಖಲಾಗಿವೆ. ಅವುಗಳ ಜೊತೆಗೆ ಆದಾಯ ತೆರಿಗೆ ವಂಚನೆಗಾಗಿ ಐಟಿ ಇಲಾಖೆಯವರೂ ಅನಿವಾರ್ಯವಾಗಿ ಒಂದು ಕೇಸು ಜಡಿದಿದ್ದಾರೆ. ಇಷ್ಟೆಲ್ಲಾ ಆದಮೇಲೆ ಕರ್ನಾಟಕ ಲೋಕಾಯುಕ್ತ ಸುಮ್ಮನಿರಲು ಸಾಧ್ಯವೆ? ಯೋಗೇಶಿಯ ಈ ಭ್ರಷ್ಟಾಚಾರದ ಹಗರಣದ ಬಗ್ಗೆ ಕೇಸು ದಾಖಲಿಸಿಕೊಂಡಿರುವ ಲೋಕಾಯುಕ್ತದಿಂದ ಈಗಾಗಲೇ ತನಿಖೆ ಪ್ರಾರಂಭವಾಗಿದೆ. ಇಷ್ಟೆಲ್ಲಾ ಆಗಿ ಕನಿಷ್ಠ ಪಕ್ಷ ಜೈಲುಯೋಗವೂ ದೊರಕದೇ ಹೋದರೆ ಇಂಥಾ ಮಹತ್ವದ ಸಾಧನೆಗಳ ಸರದಾರನನ್ನು ಸರಿಯಾಗಿ ಗುರುತಿಸುವುದಾದರೂ ಹೇಗೆ? ಆದ್ದರಿಂದ ಅವರಿಗೆ ಸದ್ಯದಲ್ಲೇ ಜೈಲು ಯೋಗ ಪ್ರಾಪ್ತಿಯಾಗಲಿದೆ ಎಂದು ಕಾನೂನು ಪಂಡಿತರು ಭವಿಷ್ಯ ನುಡಿದಿದ್ದಾರೆ. ಅಂಥಾ ಭವಿಷ್ಯ ಹೇಳಿದೋರ ಬಾಯಿಗೆ ಸಕ್ಕರೆ ಬೀಳಲಿ ಅಂತ ಹಾರೈಸಿ ನಾವೀಗ ಯೋಗೇಶಿಯ ಘನಂದಾರಿ ಸಾಧನೆಯ ಹಾದಿಯನ್ನೊಮ್ಮೆ ಪರಿಶೀಲಿಸೋಣ.

ಮೆಗಾಸಿಟಿ ಯೋಗೇಶ್

ಸನ್ಮಾನ್ಯ ಸಿ.ಪಿ.ಯೋಗೇಶ್ವರ್ ರಾಜಕೀಯಕ್ಕಿಳಿದು ಶಾಸಕನಾಗುವ ಮುಂಚೆ ಮೆಗಾಸಿಟಿ ಯೋಗೇಶ್ ಎಂಬ ಅನ್ವರ್ಥನಾಮದಿಂದಲೇ ಪ್ರಸಿದ್ಧನಾಗಿದ್ದ. ಅದಕ್ಕೂ ಮುಂಚೆ ಈತ ಬೆಂಗಳೂರಿನಲ್ಲಿ ಎಳನೀರು, ತೆಂಗಿನಕಾಯಿ ಮಾರಿಕೊಂಡು ಹೊಟ್ಟೆಹೊರೆಯುತ್ತಿದ್ದ. ಆ ನಂತರ ಮೆಗಾಸಿಟಿ ವ್ಯವಹಾರದಲ್ಲಿ ಕೊಳ್ಳೆಹೊಡೆದ ಹಣದಿಂದಲೇ ಈ ಆಸಾಮಿ ಶಾಸಕನಾಗಿದ್ದು, ಮಂತ್ರಿಯಾಗಿರುವುದು. ಅಷ್ಟು ಮಾತ್ರವಲ್ಲ, ಈಗ ಪರಪ್ಪನ ಅಗ್ರಹಾರದ ಕಡೆ ಮುಖ ಮಾಡಿರುವುದೂ ಕೂಡ ಅದೇ ಮೆಗಾಸಿಟಿಯ ಕಾರಣದಿಂದಾಗಿಯೇ!

ಬೆಂಗಳೂರಿನ ಸುತ್ತಮುತ್ತ ರಿಯಲ್‌ಎಸ್ಟೇಟ್ ಧಂಧೆ ಯದ್ವಾತದ್ವಾ ಏರಿಕೆಯಾದ ಕಾಲಘಟ್ಟವದು. ಹಾಗೆ ಯೋಗೇಶ್ವರ್ 1995ರಲ್ಲಿ ಮೆಗಾಸಿಟಿ (ಬೆಂಗಳೂರು) ಡೆವಲಪರ್ಸ್ ಅಂಡ್ ಬಿಲ್ಡರ್ಸ್ ಲಿಮಿಟೆಡ್ ಎಂಬ ಕಂಪನಿಯನ್ನು ಹುಟ್ಟುಹಾಕಿ ಬೆಂಗಳೂರು-ಮೈಸೂರು ಹೆದ್ದಾರಿಯ ಪಕ್ಕದಲ್ಲೇ ಬಿಡದಿಯ ಬಳಿ ವಜ್ರಗಿರಿ ಟೌನ್‌ಶಿಪ್ ಎಂಬ ಯೋಜನೆಯೊಂದನ್ನು ಪ್ರಾರಂಭಿಸಿದ.

ಕೆಲವು ಮಹಾನ್ ವ್ಯಕ್ತಿಗಳ ಗುಣಗಾನ ಮಾಡುವಾಗ ನೇರ ಮತ್ತು ನಿಷ್ಠುರ ವ್ಯಕ್ತಿ ಎನ್ನುತ್ತೇವೆ. ಹಾಗೆಯೇ ಈ ಯೋಜನೆಯ ಉದ್ದೇಶ ಕೂಡ ಬಹಳ ನೇರ ಮತ್ತು ನಿಷ್ಠುರವಾಗಿತ್ತು. ಹೇಗೆಂದರೆ, ಬೆಂಗಳೂರು ಮತ್ತು ಇತರೆಡೆಗಳ ಮಧ್ಯಮ ವರ್ಗದ ಜನರು ಹೇಗಾದರೂ ಮಾಡಿ ಒಂದು ಸ್ವಂತ ಸೈಟನ್ನು ಕೊಂಡುಕೊಳ್ಳಬೇಕೆಂದು ಕನಸು ಕಾಣುವುದು ನಮಗೆಲ್ಲಾ ಗೊತ್ತು. ಅಲ್ಲದೆ ಐಟಿ- ಬಿಟಿ ಮಂದಿ ತಮ್ಮ ಉಳಿತಾಯದ ಹಣವನ್ನು ಸೈಟುಗಳ ಮೇಲೆ ಹೂಡುವುದೇ ಲಾಭದಾಯಕವೆಂದು ಹಣ ಹೂಡಲು ಹಾತೊರೆಯುತ್ತಾರೆ.



ಇಂಥಾ ಜನರಿಗೆ ಸೈಟಿನ ಆಮಿಷವೊಡ್ಡಿ ಅವರ ಕೈಯಲ್ಲಿರುವ ಹಣವನ್ನು ಲಪಟಾಯಿಸುವ ನೇರ ಮತ್ತು ನಿಷ್ಠುರ ಉದ್ದೇಶದಿಂದಲೇ ಯೋಗೇಶಿ ಅಂಡ್ ಕಂಪನಿಯ ಸಂಚುಕೂಟ ವಜ್ರಗಿರಿ ಟೌನ್‌ಶಿಪ್ ಯೋಜನೆಗೆ ಕೈಹಾಕಿದ್ದು. ಬಹಳ ವ್ಯವಸ್ಥಿತವಾಗಿ ಕಾರ್ಯಾಚರಣೆ ನಡೆಸಿದ ಈ ಕೂಟ ನೇಮಿಸಿದ ಕಿಲಾಡಿ ಏಜೆಂಟ್‌ಗಳು ಬಣ್ಣ ಬಣ್ಣದ ಮಾತುಗಳಿಂದ ಸಾವಿರಾರು ಮಂದಿಯನ್ನು ಮರುಳು ಮಾಡಿದರು. ತಮ್ಮ ಚಿತ್ತಾಕರ್ಷಕ ಜಾಹೀರಾತುಗಳಿಂದ ಮಧ್ಯಮವರ್ಗದ ಸುಮಾರು 9000 ಮಂದಿಯನ್ನು ಬಕ್ರಾಗಳನ್ನಾಗಿಸಿ ಒಟ್ಟು ಸುಮಾರು 60-70 ಕೋಟಿ ಬಂಡವಾಳವನ್ನು ಬಾಚಿಬಿಟ್ಟ.

ನಂತರ ಯೋಗೇಶಿ ಮಾಡಿದ್ದೇನು ಗೊತ್ತೆ? ಯೋಜನೆಯನ್ನು ಪೂರ್ಣಗೊಳಿಸಿ ತನ್ನನ್ನು ನಂಬಿ ದುಡ್ಡು ತೆತ್ತ ಮಂದಿಗೆ ಸೈಟು ನೀಡುವುದನ್ನು ಅಕ್ಷರಶಃ ಮರೆತೇಬಿಟ್ಟ. ಅನಾಯಾಸವಾಗಿ ಬಂದ ಹಡಬಿಟ್ಟಿ ದುಡ್ಡನ್ನು ಯೋಗೇಶಿ ಬಳಸಿಕೊಂಡ ರೀತಿಯನ್ನು ಯಾರೇ ಆಗಲಿ ಮೆಚ್ಚಲೇಬೇಕು. ಈ ಅಕ್ರಮ ಹಣವನ್ನು ಬಳಸಿ ನಾನಾ ಬಣ್ಣಗಳಲ್ಲಿ, ನಾನಾ ವೇಷಗಳಲ್ಲಿ ಕಾಣಿಸಿಕೊಂಡ. ಬಂಡವಾಳ ಹೂಡಿದವರು ಸೈಟೂ ಇಲ್ಲದೇ ದುಡ್ಡೂ ಇಲ್ಲದೇ ಬಾಯಿಬಡಕೋತಾ ಇದ್ದರೆ ಈತ ತನಗಾಗಿ ಒಂದು ಭಾರೀ ಬಂಗಲೆ ಕಟ್ಟಿಸಿಕೊಂಡ. ಫ್ಯಾಷನ್ ಫೋರಮ್ ಪ್ರೈವೇಟ್ ಲಿಮಿಟೆಡ್ ಎಂಬ ಮತ್ತೊಂದು ಕಂಪನಿ ಪ್ರಾರಂಭಿಸಿ ಇಲ್ಲಿ ಬಾಚಿದ ಹಣವನ್ನು ಅಲ್ಲಿ ಯಥೇಚ್ಛವಾಗಿ ಸುರಿದ.

ನಂತರ ನೇರ ಸಿನಿಮಾ ರಂಗಕ್ಕೆ ಕಾಲಿಟ್ಟ ಈ ಮಹಾಶಯರು ಕತೆ-ಚಿತ್ರಕತೆ-ನಿರ್ದೇಶನಗಳನ್ನು ಮಾತ್ರವಲ್ಲದೆ ತಾನೇ ಹೀರೋ ಆಗಿಯೂ ಕಾಣಿಸಿಕೊಂಡ (ಕ್ಷಮಿಸಿ, ನಟನೆಯ ಗಂಧಗಾಳಿಯೇ ಈತನಿಗೆ ಗೊತ್ತಿರದಿದ್ದ ಕಾರಣ ಸಿನಿಮಾದಲ್ಲಿ ನಟಿಸಿದ ಎಂದರೆ ಆಭಾಸವಾಗುತ್ತೆ). ಒಂದಷ್ಟು ದಿನ ಸಿನಿಮಾ ನಟಿಯರೊಂದಿಗೆ ಕುಣಿದು ಕುಪ್ಪಳಿಸಿದ. ಈ ಸಿನಿಮಾಗಳು ಹೇಳಹೆಸರಿಲ್ಲದಂತೆ ಮಕಾಡೆ ಬಿದ್ದಾಗ ಆತ ಅಷ್ಟಾಗಿ ತಲೆ ಕೆಡಿಸಿಕೊಳ್ಳಲಿಲ್ಲ. ಯಾಕೆ ಗೊತ್ತೆ? ಸಿನಿಮಾದಲ್ಲಿ ಕೊಚ್ಚಿಹೋದ ಹಣ ಬೆವರು ಸುರಿಸಿ ಗಳಿಸಿದ್ದರೆ ತಾನೇ? ಅದು ಯಾರದೋ ದುಡ್ಡು ಯೋಗೇಶಿ ಜಾತ್ರೆ ಆಗಿತ್ತಷ್ಟೆ.

ಆ ನಂತರ ಯೋಗೇಶಿ ಆರಿಸಿಕೊಂಡಿದ್ದು "ದಗಾಕೋರರ ಅಂತಿಮ ಮಾರ್ಗ"ವಾದ ರಾಜಕಾರಣವನ್ನು. ಹೀಗಾಗಿ ತನ್ನ ಕ್ಷೇತ್ರ ಚನ್ನಪಟ್ಟಣದ ಸುತ್ತಮುತ್ತ 'ದಾನಧರ್ಮ'ದ ಕೆಲಸದಲ್ಲಿ ತೊಡಗಿಕೊಳ್ಳುವ ಮೂಲಕ

ಡೀಕೇಶಿ-ಯೋಗೇಶಿ ಕಚ್ಚಾಟದ ಗುಟ್ಟೇನು?

"ಈ ದೀಕೆ ಶಿವಕುಮಾರ್ ಎಂಥವನು ಅಂತಾ ನನಗೆ ಗೊತ್ತಿಲ್ಲವೆ? ಕೊತ್ವಾಲ್ ರಾಮಚಂದ್ರನಂಥಾ ರೌಡಿಗೆ ಕಾಲು ಒತ್ತಿಕೊಂಡು ಬಿದ್ದಿರುತ್ತಿದ್ದ... ಆ ರೌಡಿಗಳಿಗೆ ಟೀ ಕಾಫಿ ಸಪ್ಲೈ ಮಾಡ್ಕೊಂಡಿದ್ದ. ಇಂಥಾ ಹಿನ್ನೆಲೆಯವರಿಂದ ನಾವು ಎಂಥಾ ರಾಜಕೀಯ ನಿರೀಕ್ಷೆ ಮಾಡಬಹುದು ನೀವೇ ಹೇಳಿ?" - ಕರ್ನಾಟಕ ಕಾಂಗ್ರೆಸ್ಸಿನ ಅಗ್ರಸಾಲಿನ ರಾಜಕಾರಣಿ, ಮಾಜಿ ಮಂತ್ರಿ ಹಾಗೂ ಹಾಲಿ ಶಾಸಕ ಸನ್ಮಾನ್ಯ ಡಿ.ಕೆ.ಶಿವಕುಮಾರ್ ಅವರ ಬಗ್ಗೆ ಹಾಲಿ ಬಿಜೆಪಿ ಸಂಪುಟದಲ್ಲಿ ಅರಣ್ಯ ಸಚಿವರಾಗಿರುವ ಸಿ.ಪಿ.ಯೋಗೇಶ್ವರ್ ಉದುರಿಸಿದ ಆಣಿಮುತ್ತುಗಳಿವು!

"ಈ ಮಂಗನ (ಯೋಗೇಶ್ವರ್) ಕೈಗೆ ಮಾಣಿಕ್ಯ (ಮಂತ್ರಿ ಪದವಿ) ಸಿಕ್ಕಿಬಿಟ್ಟಿದೆ. ಹೀಗೇ ಮಂಗಾಟ ಆಡ್ತಾ ಇದ್ರೆ ಈ ಮಂಗ ಆ ಮಾಣಿಕ್ಯವನ್ನು ಕಳೆದುಕೊಳ್ಳೋದು ಗ್ಯಾರಂಟಿ! ....ಈತನ ಮೇಲೆ ಈಗಾಗಲೇ ಸಿಐಡಿಯವರು ಚಾರ್ಜ್‌ಶೀಟ್ ಹಾಕಿದ್ದಾರೆ. ಇವನ ಯೋಗ್ಯತೆ ಯಾರಿಗೆ ಗೊತ್ತಿಲ್ಲ? ಈ 420ಯಿಂದ ನಾವು ಪಾಠ ಕಲಿಯಬೇಕಾ?" - ಮಾನ್ಯ ಅರಣ್ಯ ಸಚಿವರ ಬಗ್ಗೆ ಡೀಕೇಶಿ ಆಡಿದ ಮಾತುಗಳಿವು!

ಕಳೆದ ಕೆಲವಾರು ವರ್ಷಗಳಿಂದ ಡೀಕೇಶಿ ಮತ್ತು ಯೋಗೇಶಿ ನಡುವೆ ಹೊಗೆಯಾಡುತ್ತಿದ್ದ ಹಗೆತನ ಇದೀಗ ಬೆಂಕಿಜ್ವಾಲೆಯಾಗಿ ಹೊರಹೊಮ್ಮಿದೆ. ಕೊಬ್ಬಿದ ಗೂಳಿಗಳಂತೆ ಅಖಾಡಕ್ಕೆ ಇಳಿದಿರುವ ಈ ಕುಸ್ತಿಪಟುಗಳು ತೊಡೆತಟ್ಟಿ ಗುಟುರು ಹಾಕುತ್ತಿದ್ದಾರೆ. ಈ ಗುದ್ದಾಟದ ಬಿರುಸಿನಲ್ಲಿ ಪರಸ್ಪರರ ಅಂಗಿಗಳು ಚಿಂದಿಚಿಂದಿಯಾಗಿವೆ. ಈ ನಿರ್ಣಾಯಕ ಹಂತದಲ್ಲಿ ಮಾನ ಮುಚ್ಚಿಕೊಳ್ಳಲೆಂದು ಉಳಿದಿದ್ದ ಲಂಗೋಟಿಗಳಿಗೂ ಪರಸ್ಪರ ಕೈಹಾಕಿ ಜಗ್ಗುತ್ತಿದ್ದಾರೆ. ಸೋಲೋ ಗೆಲುವೋ ಇನ್ನೂ ನಿರ್ಣಯವಾಗದ ಈ ಕದನ ಕುತೂಹಲಕರ ಹಂತ ತಲುಪಿದೆ. ನಾಡಿನ ಜನರಿಗೆ ಈ ಜಂಗಿ ಕುಸ್ತಿ ಪುಕ್ಕಟೆ ಮನರಂಜನೆ ನೀಡುತ್ತಿದೆ.





ಆದರೆ ಇದು ಕೇವಲ ಮನರಂಜನೆಯ ವಿಷಯವೇ? ಖಂಡಿತಾ ಅಲ್ಲ. ಇವರಿಂದ ಮನರಂಜನೆ ಪಡೆದು ಚಪ್ಪಾಳೆ ತಟ್ಟಿ ಸುಮ್ಮನಾಗಲು ಇವರು ಸರ್ಕಸ್‌ನ ಕೋಡಂಗಿಗಳಲ್ಲ. ಈ ಗಣ್ಯ ವ್ಯಕ್ತಿಗಳು ನಮ್ಮ ಹೆಮ್ಮೆಯ ಕರುನಾಡಿನ ಜನ ಪ್ರತಿನಿಧಿಗಳೆನಿಸಿಕೊಂಡವರು. ನಾಡಿನ ರಾಜಕೀಯ-ಆರ್ಥಿಕ-ಸಾಮಾಜಿಕ ಭವಿಷ್ಯವನ್ನು ನಿರ್ಧರಿಸುವ ಹೊಣೆಹೊತ್ತು ವಿಧಾನಸೌಧದಲ್ಲಿ ಗಟ್ಟಿಯಾಗಿ ತಳವೂರಿರುವವರು. ಆದರೆ ಇವರ ನಡವಳಿಕೆಯಲ್ಲಿ ನಾಡಿನ ಪ್ರಗತಿಗೆ ಪೂರಕವಾಗುವ ಅಥವಾ ಕರುನಾಡಿನ ಘನತೆ ಗೌರವ ಹೆಚ್ಚಿಸುವಂಥಾ ಯಾವೊಂದೂ ಅಂಶವೂ ಕಾಣುತ್ತಿಲ್ಲ.

ಇವರ ಮದವೇರಿದ ಕಾದಾಟದಲ್ಲಿ ಪರಸ್ಪರರ ನಿಜಬಣ್ಣ ಜನರ ಮುಂದೆ ಬಯಲಾಗುತ್ತಿದೆ. ಇಬ್ಬರೂ ಈ ನಾಡಿನ ಜನರಿಗೆ ಯಾಮಾರಿಸಿ ಸಂಪತ್ತು ಬಾಚಿದ ದಗಾಕೋರರರೇ! ಒಬ್ಬ ಕಲ್ಲುಕಳ್ಳನಾದರೆ ಮತ್ತೊಬ್ಬ ನೆಲಗಳ್ಳ, ಅಷ್ಟೆ ವ್ಯತ್ಯಾಸ. ಪರಸ್ಪರರ ವ್ಯವಹಾರದ ಹಕೀಕತ್ತೇನೆಂಬುದು ಅವರಿಗೆ ಚೆನ್ನಾಗಿ ಗೊತ್ತಿದೆ. ಹೀಗೆ ಅವರ ದೂಷಣೆಯಲ್ಲಿ ಹೊರಬಿದ್ದ ಸತ್ಯಾಂಶಗಳು ಆಘಾತಕಾರಿಯಾದುದು. ಪ್ರಜಾಪ್ರಭುತ್ವ ವ್ಯವಸ್ಥೆಗೆ ಕೊಡಲಿಪೆಟ್ಟು ಹಾಕುವಂಥದ್ದು. ಒಂದೆಡೆ ಡೀಕೇಶಿ ಬಳ್ಳಾರಿ ಗಣಿದಣಿಗಳಂತೆ ಕನಕಪುರ ತಾಲೂಕನ್ನು ಒಂದು ಸಂಸ್ಥಾನವನ್ನಾಗಿಸಿಕೊಂಡು ಅಕ್ರಮ ಗ್ರಾನೈಟ್ ದಂಧೆಯಲ್ಲಿ ತೊಡಗಿ ಸಾವಿರಾರು ಕೋಟಿಗಳನ್ನು ಲೂಟಿ ಹೊಡೆದಿದ್ದರೆ, ಮತ್ತೊಂದೆಡೆ ಯೋಗೇಶಿ ಸೈಟು ಕೊಡುವುದಾಗಿ ನಂಬಿಸಿ ಸುಮಾರು 9000 ಮಂದಿಯಿಂದ ಹಣ ವಸೂಲಿ ಮಾಡಿ ಉಂಡೆನಾಮ ತಿಕ್ಕಿದ್ದಾನೆ.


ಕೇಂದ್ರದ ಕಾಂಗ್ರೆಸ್ ಸರ್ಕಾರವನ್ನು ಬಳಸಿಕೊಂಡು ತನ್ನ ವಿರುದ್ಧದ ಕೇಸುಗಳನ್ನು ಡೀಕೇಶಿ ಜಾಲಾಡುತ್ತಿದ್ದಾನೆ ಎಂಬ ಅನುಮಾನ ಯೋಗೇಶಿಯದು. ಹಾಗೆಯೆ ತನ್ನ ವಿರುದ್ಧ ಕತ್ತಿ ಮಸೆಯಲಿಕ್ಕೆಂದೇ ಅರಣ್ಯ ಖಾತೆಯನ್ನು ಪಡೆದು ಯೋಗೇಶಿ ತನಿಖೆಯ ಹೆಸರಿನಲ್ಲಿ ಮಸಲತ್ತು ಮಾಡುತ್ತಿದ್ದಾನೆ ಎಂಬುದು ಡೀಕೇಶಿಯ ಖಚಿತ ಅಭಿಪ್ರಾಯ. ವಾಸ್ತವದಲ್ಲಿ ಈ ಇಬ್ಬರ ಅನುಮಾನಗಳೂ ನೂರಕ್ಕೆ ನೂರು ಸತ್ಯ. ಹಾಗೆಯೇ ಪರಸ್ಪರರ ಬಗ್ಗೆ ಮಾಡಿರುವ ಆರೋಪಗಳೂ ಸಹ ಅಂಗೈನಲ್ಲಿರುವ ಹುಣ್ಣಿನಂತೆ ಎದ್ದು ಕಾಣುತ್ತಿವೆ.

ಇವರಿಬ್ಬರ ಕಚ್ಚಾಟ ಹೀಗೇ ಸಾಂಗವಾಗಿ ಮುಂದುವರೆಯಲಿ, ಅಷ್ಟು ಮಾತ್ರವಲ್ಲದೆ ಕಾನೂನಿನ ಕುಣಿಕೆಗೆ ಆದಷ್ಟು ಬೇಗ ಈರ್ವರೂ ಬೀಳುವಂತಾಗಲಿ ಎಂಬುದೇ ತಾಯಿ ಭುವನೇಶ್ವರಿಯ ಅಂತರಾಳದ ಬಯಕೆ. ಆದ್ದರಿಂದ ಅವರಿಬ್ಬರಿಗೂ ನಾವು 'ಬೆಸ್ಟ್ ಆಫ್ ಬ್ಯಾಡ್‌ಲಕ್' ಹೇಳಲೇಬೇಕು. ❖

ಕಾರಣದ ಭವಿಷ್ಯಕ್ಕೆ ಬುನಾದಿ ರೂಪಿಸಿಕೊಂಡ. ರಾಜ್ಯೋತ್ಸವ, ಶನ ಹಬ್ಬ ಮುಂತಾದ ಚಟುವಟಿಕೆಗಳ ಪ್ರಾಯೋಜಕನಾಗುವ ಲಕ ಕ್ಷೇತ್ರದ ಯುವಜನತೆಯನ್ನು ತನ್ನತ್ತ ಸೆಳೆದುಕೊಂಡ. ಹಾಗೆ ಮನವಮಿ ಬಂದಾಗ ಮಜ್ಜಿಗೆ-ಪಾನಕ ಕುಡಿಸಿದ. ರಂಜಾನ್‌ನಲ್ಲಿ ಪಿ ಇಟ್ಟುಕೊಂಡು ಸಾಬರ ಜೊತೆ ಫೋಟೊ ತೆಗೆಸಿಕೊಂಡ.

ಹೀಗೆ ತರಹೇವಾರಿ ಕಸರತ್ತು ನಡೆಸಿದ ಯೋಗೇಶಿ ಕಾಂಗ್ರೆಸ್‌ನಿಂದ ನಾಮಾ ಟಿಕೆಟ್ ಪಡೆದುಕೊಳ್ಳಲು ಡೀಕೇಶಿಯ ದುಂಬಾಲು ಬಿದ್ದು ಲಕ್ಷಗಳ ಕಾಣಿಕೆಯನ್ನೂ ತೆತ್ತ. ಕೊನೆಗೆ ಡೀಕೇಶಿ ಕೈಎತ್ತಿದಾಗ ಸೆಡ್ಡು ಹೊಡೆದು ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಎಮ್‌ಎಲ್‌ಎ ಆಗೇಬಿಟ್ಟ. ದೇ ಚಾಳಿಯ ಮಂದಿ ವಿಧಾನಸಭೆಯಲ್ಲಿ ಬಿತುಳುಕುತ್ತಿರುವುದನ್ನು ಕಣ್ಣಾರೆ ಕಂಡ ಯೋಗೇಶಿ ಇದೇ ತನಗೆ ್ಯಂತ ಸುರಕ್ಷಿತ ಜಾಗವೆಂಬ ಗಟ್ಟಿ ನಿರ್ಧಾರಕ್ಕೆ ಬಂದುಬಿಟ್ಟ. ಹಾಗೆ ತಂತ್ರ ಅಭ್ಯರ್ಥಿಯಾಗಿ ಗೆದ್ದು ಬಂದ ಯೋಗೇಶಿ ಅನತಿ ಕಾಲದಲ್ಲೇ ಗ್ರೆಸ್ ಸೇರಿ ಹಲವಾರು ವರ್ಷಕಾಲ ರಾಜಕೀಯ ತರಬೇತು ದುಕೊಂಡ. ಆದರೆ ಕಾಂಗ್ರೆಸ್‌ನಲ್ಲಿ ತನ್ನ ರಾಜಕೀಯ ಏಳ್ಗೆಯಾಗಲು ಕೇಶಿ ಬಿಡುವುದಿಲ್ಲ ಎಂಬುದು ಖಾತ್ರಿಯಾದಾಗ ದೇಶಭಕ್ತರ ಪಕ್ಷಕ್ಕೆ ಮೋಷನ್ ಪಡೆದುಕೊಂಡ. ಕಳೆದ ಚುನಾವಣೆಯಲ್ಲಿ ಚನ್ನಪಟ್ಟಣದ ಸಕನಾಗಿ ಜೆಡಿಎಸ್‌ನಿಂದ ಆರಿಸಿ ಬಂದಿದ್ದ ಅಶ್ವತ್ ಎಂಬ ಕಸುಬಿಯನ್ನು ಕ-ಮಲ ಆಪರೇಷನ್‌ನಲ್ಲಿ ಸೂಕ್ತ ಮಾರುಕಟ್ಟೆ ಬೆಲೆಗೆ ೀದಿಸಿ, ನಂತರ ನಡೆದ ಉಪಚುನಾವಣೆಯಲ್ಲಿ ವಿಧಾನಸೌಧಕ್ಕೆ ಎಂಟ್ರಿ ಕೊಟ್ಟ. ಆಮೇಲೆ ಈ ಆಸಾಮಿ ಏನೇನು ಕರಾಮತ್ತು ಡಿದನೋ ಅಥವಾ ಜನರನ್ನು ಯಾಮಾರಿಸುವುದರಲ್ಲಿ ಈತನಿಗಿರುವ ತಿಮ ಪ್ರತಿಭೆಗೆ ಕೇಸರಿಕೂಟವೇ ಮಾರುಹೋಯಿತೋ ಆ ರಾಮಚಂದ್ರನೇ ಬಲ್ಲ. ಅಂತೂಇಂತೂ ಮಂತ್ರಿ ಪದವಿ ಸಿಬಿಟ್ಟಿದ್ದಾನೆ.

ಹೇಗೂ ಜೈಲು ಸೇರುವುದು ಖಾತ್ರಿಯಾಗಿರುವಾಗ ಅದಕ್ಕೂ ಂಚೆ ಬಿಜೆಪಿಯ ಮಂತ್ರಿ ಎನಿಸಿಕೊಂಡ ೀಗೇಶಿಯ ನರಜನ್ಮ ಸಾರ್ಥಕವಾದಂತೆಯೇ ಕೊನೆಯದಾಗಿ ಮತ್ತೊಂದು ವಿಶಿಷ್ಟ ನೆ ಮಾಡುವ ಸದವಕಾಶ ಅವನಿಗೆ ದೊದಗಿದೆ. ಅದೇನೆಂದರೆ ತಮ್ಮ ರೆಂಟು ಸಾಧನೆಗಳನ್ನು ಒಳಗೊಂಡ ಒಂದು ೀಮಾಂಚನಾಕಾರಿ ಚಿತ್ರಕತೆ ಬರೆದು, ರ್ಮಾಣ- ನಿರ್ದೇಶನ-ನಟನೆ ಎಲ್ಲಾ ತಾನೇ ಡಿ, 'ವಿಧಾನ ಸೌಧದಿಂ ಪರಪ್ಪನ ಹಾರಕೂ' ಎಂಬ ಶೀರ್ಷಿಕೆಯ ಮಾವೊಂದನ್ನು ಮಾಡಿದರೆ ಭರ್ಜರಿ ಶಸ್ಸು ಸಾಧಿಸುವುದು ಖಚಿತ. ಆದರೆ ತಡ ಡುವ ಹಾಗಿಲ್ಲ. ಕಾಲ ಮಿಂಚುವ ಮುನ್ನ ಯೋಗೇಶಿ ಅರ್ಜೆಂಟಾಗಿ ರ್ಮಪ್ರವೃತ್ತನಾಗಬೇಕು. ಯಾಕೆಂದರೆ ಕಾನೂನಿನ ಪ್ರಕಾರ ಪರಪ್ಪನ ಹಾರದಲ್ಲಿದ್ದುಕೊಂಡು ಸಿನಿಮಾ ತೆಗೆಯಲು ಅವಕಾಶವಿರೋದಿಲ್ಲ.



ದುಕೊಂಡವರಿಗೆ ಕಾನೂನೇ ಗತಿ

ಅತ್ತ ಯೋಗೇಶಿ ಕಂಡೋರ ದುಡ್ಡಲ್ಲಿ ಸಾಧನೆಯ ರವನ್ನೇರುತ್ತಿದ್ದರೆ ಇತ್ತ ಎಮ್‌ಡಿಬಿಎಲ್ ಕಂಪನಿಯನ್ನು ನಂಬಿ ಗನಾಮ ಹಾಕಿಸಿಕೊಂಡವರ ಕತೆಯನ್ನು ಕೇಳುವವರೂ ದಂತಾಯಿತು. ಸೈಟಾದರೂ ಕೊಡಿ, ಇಲ್ಲವಾದರೆ ನಮ್ಮ ಹಣ ಪಸ್ ಕೊಡಿ ಎಂದು ಹತ್ತಾರು ಬಾರಿ ತಿರುಗಿದರೂ ಯೋಗೇಶಿ ್ ಕಂಪನಿಯಿಂದ ಪರಿಹಾರದ ಮಾತು ಹಾಗಿರಲಿ, ಸರಿಯಾದ ತ್ತರವೂ ದೊರೆಯಲಿಲ್ಲ. ಹೀಗಾಗಿ ಬೇರೆ ದಾರಿ ಕಾಣದ ಒಂದಷ್ಟು ಗ್ರಾಹಕ ಕೋರ್ಟಿನ ಮೊರೆ ಹೋದರು. ಮತ್ತೆ ಕೆಲವರು 02ರಲ್ಲಿ ಸಾರ್ವಜನಿಕ ಹಿತಾಸಕ್ತಿಯ ಮೊಕದ್ದಮೆ ಹೂಡಿದರು.

ಆಗ ಮಣ್ಣಿನ ಮಗ/ಮೊಮ್ಮಕ್ಕಳ ಸರ್ಕಾರವಿತ್ತು. ದೇವೇಗೌಡ ಮತ್ತು ಮಾರಸ್ವಾಮಿ ರಾಮನಗರ ಜಿಲ್ಲೆಯಲ್ಲಿ ತಮ್ಮ ಪ್ರಮುಖ ಪ್ರತಿಸ್ಪರ್ಧಿ ೀಶಿಯೊಂದಿಗೆ ಗುದ್ದಾಡಿ ಹೈರಾಣಾಗಿದ್ದರು. ಹೀಗಿರುವಾಗ ಅದೇ ಯಲ್ಲಿ ಮತ್ತೊಬ್ಬ ಒಕ್ಕಲಿಗ ಜಾತಿಯ ಪ್ರತಿಸ್ಪರ್ಧಿ ತಲೆಯೆತ್ತುವುದಕ್ಕೆ ವು ಮಾಡಿಕೊಡಲು ಅವರೇನು ದಡ್ಡರೇ? ಹೀಗಾಗಿ ಕುಮಾರಸ್ವಾಮಿ ಚಾನ್ಸ್ ಅಂತಾ ಮೆಗಾಸಿಟಿ ಅವ್ಯವಹಾರಗಳ ಬಗ್ಗೆ ತನಿಖೆ ಸಲು ಸಿಐಡಿಗೆ ಆದೇಶಿಸಿದರು. ಅಂತಿಮವಾಗಿ ಸಿಐಡಿ 2010ರ ರ್ಚ್‌ನಲ್ಲಿ ಚಾರ್ಜ್‌ಶೀಟ್ ಸಲ್ಲಿಸಿವೆ.

ಅದರ ಪ್ರಕಾರ "ಹೂಡಿಕೆದಾರರು ಹೆಚ್ಚಾಗಿ ಮಧ್ಯಮವರ್ಗದವರಾಗಿ ದರಿಂದ ಅವರಿಗೆ 800 ರೂಪಾಯಿಯಿಂದ ಹಿಡಿದು 6400 ಗಳವರೆಗೆ ವಿವಿಧ ಶ್ರೇಣಿಯ ಮಾಸಿಕ ಕಂತುಗಳಲ್ಲಿ 5 ವರ್ಷಗಳಲ್ಲಿ ್ಣ ಹಣ ಪಾವತಿಸುವ ಸ್ಕೀಮ್ ನೀಡಲಾಗಿದೆ. ಅವರಲ್ಲಿ ಸುಮಾರು 3000 ಜನರು ಪೂರ್ತಿ ಕಂತುಗಳನ್ನು ಪಾವತಿಸಿದ್ದು ಉಳಿದವರು ಹೆಚ್ಚುಕಮ್ಮಿ 40 ಕಂತುಗಳವರೆಗೆ ಪಾವತಿಸಿದ್ದಾರೆ.... ಮೆಗಾಸಿಟಿ ಯೋಜನೆಗೆ ಸರ್ಕಾರದ ಅನುಮತಿ ಸಿಕ್ಕಿರುವುದು 1094 ನಿವೇಶನಗಳ ನಿರ್ಮಾಣಕ್ಕೆ ಮಾತ್ರ. ಆದರೆ 9000ಕ್ಕಿಂತಲೂ ಹೆಚ್ಚು ಜನರಿಂದ ಸೈಟು ನೀಡುವುದಾಗಿ ನಂಬಿಸಿ ಸುಮಾರು 71 ಕೋಟಿ ಮೊತ್ತವನ್ನು ಸಂಗ್ರಹಿಸಲಾಗಿದೆ.... ಈ ಜನರ ಬಹುಪಾಲು ಹಣವನ್ನು ಯೋಗೇಶ್ವರ್ ಹಾಗೂ ಆತನ ಬಂಧುಗಳು ದುರುಪಯೋಗಪಡಿಸಿಕೊಂಡಿದ್ದಾರೆ. ಈ ಹಣದ ಬಗ್ಗೆ ಸರಿಯಾದ ಲೆಕ್ಕಪತ್ರಗಳನ್ನೂ ಒದಗಿಸಿಲ್ಲ" ಇದು ಅಸಲಿ ಕತೆ.

●●● ಸತ್ತವರ ಹೆಸರಲ್ಲೂ 420 ದಂಧೆ

ಒಬ್ಬ ರೈತ ಸತ್ತು ಎಷ್ಟೋ ವರ್ಷಗಳಾದ ನಂತರ ಕ್ರಯಪತ್ರಕ್ಕೆ ಆತ ಸಹಿ ಹಾಕಲು ಸಾಧ್ಯವೇ? ಸತ್ತು ಸ್ವರ್ಗದಲ್ಲಿರುವ ಬಡಪಾಯಿ ರೈತರ ಜೊತೆಯಲ್ಲೂ ವ್ಯವಹಾರ ಮಾಡಲು ಯೋಗೇಶಿಯಂಥ ನೆಲಗಳ್ಳರಿಗೆ ಸಾಧ್ಯ ಎಂಬುದು ಈಗ ಸಾಬೀತಾಗಿದೆ. ಈ ಕೇಸಿನ ತನಿಖೆ ಕೈಗೆತ್ತಿಕೊಂಡ ಕೇಂದ್ರದ ಎಸ್‌ಎಫ್‌ಐಒ ಸಂಸ್ಥೆ ಯೋಗೇಶಿಯ ಮತ್ತಷ್ಟು 420 ಕೆಲಸಗಳನ್ನು ಪತ್ತೆಹಚ್ಚಿದೆ. ಮೆಗಾಸಿಟಿ ಯೋಜನೆಗೆ ಬಳಸಲಿಕ್ಕೆಂದು ರೈತರಿಂದ ಜಮೀನು ಖರೀದಿಸಿರುವುದಾಗಿ ಹೇಳಿಕೊಂಡಿದ್ದ ಈ ಕಾಡು ಮಂತ್ರಿ ಸುಮಾರು 450 ಖೊಟ್ಟಿ ಕ್ರಯದ ಕರಾರುಪತ್ರಗಳನ್ನು ಸೃಷ್ಟಿಸಿದ್ದಾನೆ. ಪತ್ರದಲ್ಲಿ ನಮೂದಾಗಿರುವ ಕೆಲವು ಸರ್ವೆ ನಂಬರ್‌ಗಳು ಅಸ್ತಿತ್ವದಲ್ಲೇ ಇಲ್ಲ, ಮತ್ತೆ ಕೆಲವು ರೈತರು ಸತ್ತು ಯಾವುದೋ ಕಾಲವಾಗಿದ್ದರೂ ಅವರ ಹೆಸರಿನಲ್ಲಿ ಮಾರಾಟ ದಾಖಲೆ ಸಿದ್ಧವಾಗಿದೆ. ಸರಿಯಾಗಿ ಹೆಸರು ನಮೂದಾಗಿರುವ ರೈತರು ಇಂಥಾ ಯಾವ ಕ್ರಯಪತ್ರಕ್ಕೂ ಸಹಿ ಹಾಕಿಲ್ಲ, ಇನ್ನೂ ಸಹಿ ಹಾಕಿರುವ ಕೆಲವು ವ್ಯಕ್ತಿಗಳಿಗೆ ಹಣ ಸರಿಯಾಗಿ ಪಾವತಿಯಾಗಿಲ್ಲ!

ಅಷ್ಟು ಮಾತ್ರವಲ್ಲ, ಸ್ವತಃ ಕಂಪನಿಯ ರೂವಾರಿಯಾಗಿದ್ದ ಯೋಗೇಶಿಯೊಬ್ಬನೇ ಮೂರು ವಿಭಿನ್ನ ಹೆಸರುಗಳಲ್ಲಿ ಮೂರು ಡೈರೆಕ್ಟರ್ ಐಡೆಂಟಿಫಿಕೇಷನ್ ನಂಬರ್‌ಗಳನ್ನು (ಡಿಐಎನ್) ಹೊಂದಿದ್ದಾನೆ. ಆತನ ಹೆಸರು, ತಂದೆಯ ಹೆಸರು ಹಾಗೂ ಊರಿನ ಹೆಸರುಗಳನ್ನು ತಿರುಗಾಮುರುಗಾ ಮಾಡಿ ಮೂರು ನಿರ್ದೇಶಕ ಸ್ಥಾನವನ್ನು ಅಲಂಕರಿಸಿಬಿಟ್ಟಿದ್ದಾನೆ. ಅಂದಹಾಗೆ ಕಳೆದ ವರ್ಷವಷ್ಟೆ ಅಂಥಾ ಒಂದು ಡೈರೆಕ್ಟರ್‌ಶಿಪ್ ಪಡೆದುಕೊಂಡಿದ್ದು ಆಗ ಆತ ರಾಜ್ಯ ರೇಷ್ಮೆ ಕೈಗಾರಿಕಾ ನಿಗಮದ ಚೇರ್ಮನ್ ಆಗಿದ್ದ. ಇಂಥಾ ಎಲ್ಲಾ ವಿಶೇಷ ಅರ್ಹತಾ ಪರೀಕ್ಷೆಗಳಲ್ಲಿ ತೇರ್ಗಡೆಯಾದ ನಂತರವೇ ಕೇಸರಿಕೂಟ ಈ 420 ಯೋಗೇಶಿಯನ್ನು ಮಂತ್ರಿ ಮಾಡಿದ್ದು, ಏನಂತೀರಿ?


ಈ ವಿಷಯದಲ್ಲಿ ಯೋಗೇಶಿಯ ಸಮರ್ಥನೆ ನೋಡಿ. "ನೈಸ್ ಯೋಜನೆಯಿಂದ ನಮ್ಮ ಮೆಗಾಸಿಟಿ ಟೌನ್‌ಶಿಪ್‌ಗೆ ತೊಂದರೆಯಾಗಿದೆ, ಇದನ್ನೇ ಎಚ್‌ಡಿಕೆ ಮತ್ತು ಡೀಕೇಶಿ ದೊಡ್ಡದು ಮಾಡ್ತಾ ಇದ್ದಾರೆ, ಅದು ಬಿಟ್ಟರೆ ನಾನು ಯಾವ ತಪ್ಪೂ ಮಾಡಿಲ್ಲ" ನೈಸ್‌ನಿಂದ ಸಾವಿರಾರು ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ ನಿಜ. ಆದರೆ ಈ ಮೆಗಾಸಿಟಿ ಯೋಗೇಶಿಗೆ ಅಂಥಾ ಯಾವ ತೊಂದರೆಯೂ ಆಗಿಲ್ಲವೆಂಬುದು ವಾಸ್ತವ. ಗಂಟುಕಳ್ಳ ಯೋಗೇಶಿಗೆ ಕುಂಟುನೆಪ ಹುಡುಕುತ್ತಿದ್ದಾನೆ ಅಷ್ಟೆ.

ಮತ್ತೊಂದು ವಿಷಯ ಕೇಳಿ. 2006-07 ರಲ್ಲಿ ಶಾಸಕನಾಗಿದ್ದ ಸಂದರ್ಭದಲ್ಲಿ ತಾನು 35.82 ಲಕ್ಷ ಮೌಲ್ಯದ ಆಸ್ತಿ ಹೊಂದಿರುವುದಾಗಿ ಚುನಾವಣಾ ಆಯೋಗಕ್ಕೆ ವಿವರಣೆ ನೀಡಿದ್ದ. ಆದರೆ ಕಳೆದ ಚನ್ನಪಟ್ಟಣ ಉಪಚುನಾವಣೆ ವೇಳೆ ತನ್ನ ಆಸ್ತಿ 3.24 ಕೋಟಿ ಎಂದು ಘೋಷಿಸಿಕೊಂಡಿದ್ದಾನೆ. ವಾಸ್ತವದಲ್ಲಿ ಇದರ ನೂರಾರು ಪಟ್ಟು ಆಸ್ತಿ ಮಾಡಿದ್ದಾನೆಂಬುದು ಚನ್ನಪಟ್ಟಣದ ಶಾಲಾಮಕ್ಕಳಿಗೂ ಗೊತ್ತಿರುವ ಸತ್ಯ. ಅದು ಹೋಗಲಿ, 'ಈಗಿನ ಪ್ರಶ್ನೆಯೇನೆಂದರೆ ಅಧಿಕೃತವಾಗಿ ಘೋಷಿಸಿದ ಆಸ್ತಿ 3-4 ವರ್ಷದಲ್ಲಿ ನೂರು ಪಟ್ಟು ಹೆಚ್ಚಾಗಿದ್ದು ಹೇಗೆಂದು ತನಿಖಾ ತಂಡ ಪ್ರಶ್ನೆ ಮಾಡಿದೆ.'



ಅಷ್ಟು ಮಾತ್ರವಲ್ಲದೆ ತನಿಖಾ ಸಂಸ್ಥೆಗಳಿಂದ ಹಲವು ಬಾರಿ ಸಮನ್ಸ್ ಜಾರಿಯಾದರೂ ಈತ ವಿಚಾರಣೆಗೆ ಹಾಜರಾಗಿಲ್ಲವಂತೆ. ನಾನೇ ಕಾನೂನನ್ನು ರೂಪಿಸುವ ಮಂತ್ರಿಯಾಗಿರುವಾಗ ಇನ್ನು ನನ್ನನ್ನು ಕೇಳುವ ಕಾನೂನು ಯಾವುದಿದೆ ಎಂಬುದು ಆತನ ಲೆಕ್ಕಾಚಾರ ಇರಬಹುದು.

ಮತ್ತೊಂದು ವಿಪರ್ಯಾಸ ನೋಡಿ. ಆರು ತಿಂಗಳ ಹಿಂದೆ ಯಡ್ಡಿ ಮತ್ತಾತನ ಹಲವು ಮಂತ್ರಿ ಮಹೋದಯರು ಒಬ್ಬೊಬ್ಬರಾಗಿ ಜೈಲು ಸೇರಿದ ನಂತರ ಸದಾನಂದಗೌಡ ಆಕಸ್ಮಿಕವಾಗಿ ಪಟ್ಟಕ್ಕೇರಿದ್ದರೆ ಯೋಗೇಶ್ ಅರಣ್ಯ ಸಚಿವನಾಗಿ ಗೂಟದ ಕಾರನ್ನು ಪಡೆದದ್ದು ಮಾತ್ರ ಬಹಳ ಪ್ರಯತ್ನಪೂರ್ವಕವಾಗಿ. ಆದರೆ ಆತನಿಗೆ ಕೇಡುಗಾಲ ಕೂಡ ಆಗಲೇ ವಕ್ಕರಿಸಿತ್ತು, ಹೆಚ್ಚುಕಮ್ಮಿ ಅದೇ ಸಮಯದಲ್ಲಿ ಕೇಂದ್ರ ಸರ್ಕಾರದ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುವ 'ತೀವ್ರತರ ಮೋಸಗಳ ತನಿಖಾ ಕಚೇರಿ (ಎಸ್‌ಎಫ್‌ಐಒ)' ಯೋಗೇಶ್ವರ್ ಮೇಲೆ ಚಾರ್ಜ್‌ಶೀಟ್ ಹಾಕಿದೆ. ಅದು ಎಂಥಾ ಚಾರ್ಜ್ ಅಂತೀರಾ? ಕಾರ್ಪೊರೇಟ್ ವ್ಯವಹಾರದಲ್ಲಿ ಮೋಸ, ಹಣವನ್ನು ನುಂಗಿಹಾಕಲು ಕ್ರಿಮಿನಲ್ ಸಂಚು, ಸುಳ್ಳು ದಾಖಲಾತಿಗಳ ಸೃಷ್ಟಿ ಹಾಗೂ ವಂಚನೆ ಇತ್ಯಾದಿ.


Property belonging to former MLA C P Yogeshwar (seen right)

ಮೆಗಾಸಿಟಿ ಕಚೇರಿ


ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿರುವುದರಿಂದ ಬಿಜೆಪಿಯ ಮಂತ್ರಿಯ ವಿರುದ್ಧ ಪಿತೂರಿ ಮಾಡಿರಬಹುದೆಂದು ಕೆಲವರು ರಾಗ ತೆಗೆಯಬಹುದು. ಆದರೆ ಈ ಕೇಸಿನಲ್ಲಿ ಅಂಥಾ ಆರೋಪಕ್ಕೆ ಅವಕಾಶವಿಲ್ಲ, ಯಾಕೆಂದರೆ ಇದೇ ಬಿಜೆಪಿ ಸರ್ಕಾರದ ಕೈಯಲ್ಲಿರುವ ಸಿಐಡಿ ಇಲಾಖೆ 2010ರ ಮಾರ್ಚ್‌ನಲ್ಲಿ ಯೋಗೇಶಿಯ ಮೇಲೆ ಕ್ರಿಮಿನಲ್ ಫೋರ್ಜರಿಯ ಚಾರ್ಜ್‌ಶೀಟ್ ಸಲ್ಲಿಸಿದೆ. ಆದಾದ ನಂತರ, ಅಂದರೆ 2010ರ ಏಪ್ರಿಲ್‌ನಲ್ಲಿ ಕೇಂದ್ರದ ಎಸ್‌ಎಫ್‌ಐಒ ಈ ಪ್ರಕರಣವನ್ನು ತನಿಖೆ ಮಾಡಲು ಕೈಗೆತ್ತಿಕೊಂಡದ್ದು. ಒಂದೇ ವ್ಯತ್ಯಾಸವೆಂದರೆ ಸಿಐಡಿಯವರು ಕೇಸನ್ನು ತೇಲಿಸಿ ಐಪಿಸಿ ಸೆಕ್ಷನ್ 420 ಮತ್ತು 418 ಎಂಬ ಎರಡೇ ಸೆಕ್ಷನ್‌ಗಳನ್ನು ದಾಖಲಿಸಿದ್ದರೆ ಎಸ್‌ಎಫ್‌ಐಒ ಸಾಕ್ಷ್ಯಾಧಾರಗಳ ಸಮೇತ ಹತ್ತಾರು ಕೇಸುಗಳನ್ನು ಜಡಿದಿದೆ.

ಸುಮಾರು 71 ಕೋಟಿ ಮೊತ್ತದ ಈ ಹಗರಣ ನ್ಯಾಯಾಲಯದಲ್ಲಿ ಸಾಬೀತಾದರೆ ಮಾನ್ಯ ಕಾಡು ಮಂತ್ರಿ ಹಾಗೂ ಅವರ ತಮ್ಮ ಸಿ.ಪಿ.ಗಂಗಾಧರೇಶ್ವರ್ ಇಬ್ಬರೂ ಜೀವನಪೂರ್ತಿ ಜೈಲಿನಲ್ಲೇ ಕಳೆಯಬೇಕಾಗುತ್ತೆ. ಯೋಗೇಶಿಗೆ ಮತ್ತಷ್ಟು ಯೋಗ ಒಲಿದರೆ ಆತನ ಹೆಂಡತಿ ಮಂಜುಳ ಕುಮಾರಿಯನ್ನೂ ತನ್ನೊಂದಿಗೆ ಕರೆದೊಯ್ಯುವ ಸಾಧ್ಯತೆಯಿದೆ.

ನಾವು ಬಿಜೆಪಿ ವಿಷಯದಲ್ಲಿ ನಿಷ್ಪಕ್ಷಪಾತವಾಗಿ ಅಭಿಪ್ರಾಯ ಮಂಡಿಸಬೇಕು. ಪತ್ರಿಕಾಧರ್ಮ ಕಾಪಾಡಿಕೊಳ್ಳಬೇಕು. ವಿನಾಕಾರಣ ಯಾವಾಗಲೂ ಕೇಸರಿಕೂಟವನ್ನು ನಿಂದಿಸಬಾರದು. ಹಾಗೆ ನೋಡಿದರೆ ಇದೀಗ ವಿಪರ್ಯಾಸಗಿರುವ ಯೋಗೇಶಿ ಜೈಲುಯಾತ್ರೆಗೆ ಆತ ಬಿಜೆಪಿ ಮಂತ್ರಿಗಿರಿಯ ಅವಧಿಯಲ್ಲಿ ನಡೆಸಿದ ಲಫಡಾಗಳು ಕಾರಣವಲ್ಲವೇ ಅಲ್ಲ, ಆತ ಬಿಜೆಪಿ ಸೇರುವ ಮುನ್ನವೇ ಮಾಡಿದ್ದ ಪುಣ್ಯಕಾರ್ಯಗಳ ಪ್ರತಿಫಲ ಇದೀಗ ಒದಗಿ ಬರುತ್ತಿದೆ ಅಷ್ಟೆ. ಅದರಲ್ಲಿ ಎಳ್ಳಷ್ಟೂ ಅನುಮಾನವಿಲ್ಲ.

ಅಂದಹಾಗೆ ಯೋಗೇಶಿಯ ಈ ಸಾಧನೆಯ ಚರಿತ್ರೆ ಬಿಜೆಪಿ ನಾಯಕರಿಗೆ ಗೊತ್ತಿರಲಿಲ್ಲವೆ? ಅದು ಅಂಥಾ ಗುಟ್ಟಿನ ವಿಷಯವಾಗಿತ್ತಾ ಅಂತ ನೋಡಿದರೆ ಆತ ಅಂಥಾ ಮುಚ್ಚುಮರೆಯೇನೂ ಮಾಡಿರಲಿಲ್ಲ. ಈತನ ಕುಖ್ಯಾತ ಮೆಗಾಸಿಟಿ ದಂಧೆ ಬಹಳ ಹಿಂದೆಯೇ ಜಗಜ್ಜಾಹೀರಾಗಿ ಹೋಗಿತ್ತು. ಹಾಗಾದರೆ ಬಹುಶಃ ಜೈಲುಶಿಕ್ಷೆಗೆ ಒಳಗಾಗಬಹುದಾದ ಯೋಗೇಶಿಯ ಇಂಥಾ ಕನಿಷ್ಠ ಅರ್ಹತೆಯನ್ನು ಪರಿಗಣಿಸಿಯೇ ಬಿಜೆಪಿಯ ವರಿಷ್ಠರು ಅವನಿಗೆ ನಡೆಮುಡಿ ಹಾಸಿ ಪಕ್ಷಕ್ಕೆ ಕರೆದುಕೊಂಡಿದ್ದಾರೆ ಎಂಬ ತೀರ್ಮಾನಕ್ಕೆ ನಾವು ಬರಬಹುದು. ಅದಕ್ಕೆ ಸಾಕಷ್ಟು ಆಧಾರಗಳು ಸಿಗುತ್ತವೆ. ಈ ಬಗ್ಗೆ ಬಿಜೆಪಿ ರಾಜ್ಯಾಧ್ಯಕ್ಷ ಈಶ್ವರಪ್ಪ ಹೇಳಿದ್ದೇನು ಗೊತ್ತೆ? "ನಮಗೆ ಈ ಕೇಸಿನ ಸಂಪೂರ್ಣ ಮಾಹಿತಿಯಿದೆ, ಯೋಗೇಶ್ವರ್ ಯಾವ ತಪ್ಪೂ ಮಾಡಿಲ್ಲ, ಇದು ವಿರೋಧ ಪಕ್ಷಗಳ ಕುತಂತ್ರವಲ್ಲದೇ ಬೇರೆ ಏನೂ ಇಲ್ಲ, ಆದ್ದರಿಂದ ಯೋಗೇಶ್ವರ್ ಆರೋಪಮುಕ್ತರಾಗುತ್ತಾರೆ." ಛೀ...! ನಾಚಿಕೆಗೇಡು!!!

ಏನೇ ಆಗಲಿ ಆಡಳಿತಾರೂಢ ಬಿಜೆಪಿಗೆ ಹೀಗೆ ಬಂಪರ್ ಜೈಲುಯೋಗ ಬರಬಹುದೆಂದು ಯಾವ ಪ್ರಚಂಡ ಜ್ಯೋತಿಷಿಯೂ ಭವಿಷ್ಯ ನುಡಿದಂತೆ ಕಾಣುವುದಿಲ್ಲ, ಜ್ಯೋತಿಷಿಗಳು ಸಾಯಲಿ, ಬಿಜೆಪಿ ಪಟಾಲಂಗೆ ರಾಜಪುರೋಹಿತ ರಂತಿರುವ ಆರೆಸ್ಸೆಸ್‌ನವರಿಗೇನಾಗಿದೆ? ಅವರಾದರೂ ಏನಾದರೂ ಪರಿಹಾರ ಮಾರ್ಗ ಹುಡುಕಬೇಕಿತ್ತಲ್ಲವೆ? ಅಂಥಾ ಪ್ರಯತ್ನದ ಸಣ್ಣ ಕುರುಹೂ ಕಾಣುತ್ತಿಲ್ಲವಲ್ಲ.



ಅಮಿತಾಬ್ - ಐಶ್ವರ್ಯಾಗೆ ಪಾಪದ ಪಾಲು

ತನ್ನ 420 ಯೋಜನೆಯ ಕಡೆ ಹೂಡಿಕೆದಾರರನ್ನು ಆಕರ್ಷಿಸಲು ವಿಶ್ವಸುಂದರಿಯ ಪಟ್ಟಕ್ಕೇರಿದ ಐಶ್ವರ್ಯಾ ರೈಯನ್ನು ಕರೆಸಿ ಆಕೆಯಿಂದ ಜ್ಯೋತಿ ಬೆಳಗಿಸಿದ ಯೋಗೇಶಿ ಹೈಟೆಕ್ ತಂತ್ರವನ್ನೇ ಹೂಡಿದ್ದ. ಬೆಂಗಳೂರು ನಗರದ ಡಬಲ್‌ರೋಡಿನಲ್ಲಿ ಒಂದು ಹೈಟೆಕ್ ಮೆಗಾಸಿಟಿ ಆಫೀಸ್ ತೆರೆದ. ಬಾಲಿವುಡ್‌ನ ಮೇರುನಟ ಅಮಿತಾಬ್ ಬಚ್ಚನ್‌ರ ಕೈಯಲ್ಲಿ ಕಚೇರಿ ಉದ್ಘಾಟನೆ ಮಾಡಿಸಿದ. ಅದಕ್ಕಾಗಿ ಅವರಿಗೆ ಹೋಗಿಬರುವ ಫ್ಲೈಟ್ ವೆಚ್ಚವೂ ಸೇರಿ ಅದೆಷ್ಟು ಹಣ ಸುರಿದನೋ ಯೋಗೇಶಿಯೇ ಬಲ್ಲ, ಅಷ್ಟು ಸಾಲದೆಂಬಂತೆ ಕನ್ನಡದ ಹಿರಿಯ ನಟ ಪಂಢರಿಬಾಯಿ ಹಾಗೂ ಹಾಡುಗಾರ ಪಿ.ಅಶ್ವತ್‌ರನ್ನೂ ಇದೇ ಸಂದರ್ಭದಲ್ಲಿ ಕರೆಸಿ ಸನ್ಮಾನ ಮಾಡಿದ. ಮಾತ್ರವಲ್ಲದೆ ಅವರಿಬ್ಬರಿಗೂ ಇದೇ ಮೆಗಾಸಿಟಿ ಯೋಜನೆಯಲ್ಲಿ ಉಚಿತವಾಗಿ ಸೈಟು ನೀಡುವುದಾಗಿ ಘೋಷಿಸಿಬಿಟ್ಟ. ಅವರಿಗಾದರೂ ಸೈಟು ಕೊಟ್ಟನೋ ಇಲ್ಲವೋ ನಮಗಂತೂ ಗೊತ್ತಾಗಿಲ್ಲ. ಆದರೆ ಈ ಐನಾತಿ 420 ದಂಧೆಯ ಪಾಪದಲ್ಲಿ ಅವರನ್ನೂ ಪಾಲುದಾರರನ್ನಾಗಿಸಿದ್ದಂತೂ ನಿಜ. ಈಗ ಯೋಜನೆಗಾದ ಗತಿಯೇ ಆ ಮೆಗಾಸಿಟಿ ಕಚೇರಿಗೂ ಬಂದಿದ್ದು ಪಾಳುಸುರಿಯುತ್ತಿದೆ.


ಕೊಟ್ಲಲ್ಲಪ್ಪೋ ಕೈ ಎಂಬ ಡರ್ಟಿ ಪಿಕ್ಚರ್ ಸುತ್ತ ಕಿತ್ತಾಟ



ನಯಾಪೈಸೆಯಿಲ್ಲದೆ ಕೋಟಿ ಬಜೆಟ್ಟಿನ ಸಿನಿಮಾ ತೆಗೆದರೆ ಏನಾಗುತ್ತದೆ? ಹಾಗೆ ಮಾಡಿದ ಸಿನಿಮಾ ಬಾಕ್ಸ್ ಆಫೀಸ್ ಹಿಟ್ಟಾಗುತ್ತದೆ ಎಂದು ರಿಲೀಜಿಗೆ ಮೊದಲೇ ಪುಕಾರೆದ್ದರೆ ಎಂಥಾ ಫಜೀತಿಯಾಗುತ್ತದೆ? ಅದರಲ್ಲೂ, ಹೆಸರಾಂತ ಸ್ಟಾರ್‌ಗಳು, ಹೀರೋಯಿನ್ ಇಲ್ಲದೆಯೇ ಗ್ಲಾಮರ್ ಕಾರಣಕ್ಕೇ ಸಿನಿಮಾ ದುಡ್ಡು ಮಾಡುತ್ತದೆಯೆಂದು ಗೊತ್ತಾಗಿಬಿಟ್ಟರೆ ಏನೆಲ್ಲಾ ರಾದ್ಧಾಂತವಾಗಲು ಸಾಧ್ಯ?

ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರದಂತಿದೆ ಕೊಟ್ಲಲ್ಲಪ್ಪೋ ಕೈ!

ಸೆಕ್ಸ್ ಬಾಂಬ್ ಸಿಲ್ಕ್‌ಸ್ಮಿತಾಳ ಜೀವಿತಗಾಥೆ ಕುರಿತು ಹಿಂದಿಯಲ್ಲಿ 'ಡರ್ಟಿ ಪಿಕ್ಚರ್' ಎಂಬ ಸಿನಿಮಾ ಸೂಪರ್ ಹಿಟ್ಟಾಗಿದ್ದರ ಸೈಡ್ ಎಫೆಕ್ಟ್ ಗಾಂಧಿನಗರದಲ್ಲಿ ವಿಚಿತ್ರ ಕಚ್ಚಾಟವೊಂದನ್ನು ಹುಟ್ಟು ಹಾಕಿದ್ದೇ 'ಕೊಟ್ಲಲ್ಲಪ್ಪೋ ಕೈ' ಎಂಬ ಚಿತ್ರ. ಹೀರೋಯಿನ್ ನಯನಕೃಷ್ಣ ಡೈರೆಕ್ಟರ್ ರುಪಿಗೆ ಚಪ್ಪಲಿ ತೋರಿದಳಂತೆ. ಹತ್ತು ಪರ್ಸೆಂಟ್ ಫೈನಾನ್ಶಿಯರ್ ವೆಂಕಟೇಶ್ ಮತ್ತು ಹೀರೋ ಧನುಷ್ ಮಧ್ಯೆ ಬೀದಿಕಾಳಗವೇ ನಡೆಯಿತಂತೆ. ನಿರ್ಮಾಪಕ ಕಪಾಲಿ ಆನಂದ್ ಸಿನಿಮಾ ಸಹವಾಸವೇ ಸಾಕೆಂದು ಗಾಂಧಿನಗರದತ್ತ ತಲೆಹಾಕುವುದನ್ನೇ ನಿಲ್ಲಿಸಿದ್ದಾರಂತೆ. ಡೈರೆಕ್ಟರ್ ರುಪಿಯನ್ನು ಕಿಡ್ನಾಪ್ ಮಾಡಿ ಇಡೀ ಸಿನಿಮಾ ಬರೆಸಿಕೊಳ್ಳಲು ಹೀರೋಯಿನ್ ನಯನ ರೌಡಿಗಳನ್ನು ಛೂಬಿಟ್ಟಳಂತೆ ಇತ್ಯಾದಿ ಬಿಡುಗಡೆಗೆ ಮೊದಲೇ ಚಿತ್ರವಿಚಿತ್ರ ರಾದ್ಧಾಂತಗಳ ಹುತ್ತವಾಗಿ ಹೋದ 'ಕೊಟ್ಲಲ್ಲಪ್ಪೋ ಕೈ' ಕಿತ್ತಾಟ ಕಳೆದೊಂದು ವಾರದಿಂದ ಕನ್ನಡದ ಎಲ್ಲಾ ನ್ಯೂಸ್ ಚಾನಲ್‌ಗಳಿಗೂ ರುಚಿ ರುಚಿ ಭೋಜನವಾಗಿಬಿಟ್ಟಿದೆ.



ಕಪಾಲಿ ಆನಂದ್

ಬಿಡುಗಡೆಗೆ ಮೊದಲೇ ಈ ಪಾಟಿ ವಿವಾದ ಹುಟ್ಟುಹಾಕಿದ 'ಕೊಟ್ಲಲ್ಲಪ್ಪೋ ಕೈ' ಹಕೀಕತ್ತೇ ವಿಚಿತ್ರ. ಲೋಫರ್ ಡೈರೆಕ್ಟರ್, ಚಪ್ಪರ್ ಹೀರೋ, ಸೂಪರ್ ಹೀರೋಯಿನ್ ಮತ್ತು ಮೀಟರ್ ಪ್ರೊಡ್ಯೂಸರ್ ಸೇರಿಕೊಂಡು ಮಾಡಿರುವ ಕನ್ನಡದ ಕೆಟ್ಟ ಚಿತ್ರ' ಎಂದು ನಿರ್ಮಾಪಕರೇ ಜಾಹೀರಾತು ಕೊಡುತ್ತಾರೆಂದರೆ ಇದು ಇನ್ನೆಂಥಾ ಚಿತ್ರವಾಗಿರಬೇಕು? ಅಸಲಿಗೆ 'ಕೊಟ್ಲಲ್ಲಪ್ಪೋ ಕೈ' ಹಿಂದಿಯ 'ಡರ್ಟಿ ಪಿಕ್ಚರ್'ನಂತೆ ಕಾಮುಕ ನಟಿಯೊಬ್ಬಳ ಪ್ರಣಯ ದುರಂತ ಕುರಿತ ಚಿತ್ರವಂತೆ. ಇತ್ತೀಚೆಗಷ್ಟೇ ಬೇರ್ಪಡೆಯಾದ ಸಿನಿಮಾ ಜೋಡಿಯೊಂದರ ಕತೆಯನ್ನೇ ರುಪಿ ಸಿನಿಮಾ ಮಾಡಿದ್ದೇ ಇಷ್ಟೆಲ್ಲಕ್ಕೂ ಕಾರಣ ಎಂಬ ಮಾತೂ ಇದೆ. ಹೀರೋಯಿನ್ ನಯನಕೃಷ್ಣ ಸಂಜಯ್ ನಗರ ಪೊಲೀಸ್ ಠಾಣೆಗೆ ಕೊಟ್ಟ ದೂರಿನಲ್ಲಿ ಡೈರೆಕ್ಟರ್ ರುಪಿ ತನಗೆ 25 ಲಕ್ಷ ದುಡ್ಡು ಕೊಡಬೇಕೆಂದು ಕೇಳಿದರೆ ಅಶ್ಲೀಲವಾಗಿ ಬಯ್ಯುತ್ತಾನೆಂದು ಹೇಳಿದ್ದರೆ ನಿಜ ಮರ್ಮವೇ ಬೇರೆಯದೆ.

ನಿಂಫೋಮೇನಿಯಾ!

ಡೈರೆಕ್ಟರ್ ರುಪಿ ನಯಾ ಪೈಸೆಯಿಲ್ಲದೆ ಇಂಥಾದ್ದೊಂದು ಸಿನಿಮಾ ಮಾಡಿದ್ದೇ ಇಷ್ಟೆಲ್ಲಾ ಭಾನಗಡಿಗೆ ಕಾರಣವಾಯಿತೆಂದು ಇಡೀ ಗಾಂಧಿನಗರ ಮಾತಾಡಿಕೊಳ್ಳುತ್ತಿದೆ. ಈ ರುಪಿ ಎಂಬಾತ ಯಾರು ಎತ್ತ ಎಂದು ಕೆದಕ ಹೊರಟರೆ ಅದೇ ಒಂದು ಸಿನಿಮಾಕ್ಕಾಗುವಷ್ಟು ಸರಕಾಗುತ್ತದೆ. ರುಪಿಯ ಪಾಲಿಗೆ 'ಕೊಟ್ಲಲ್ಲಪ್ಪೋ ಕೈ' ಮೂರನೇ ಚಿತ್ರ. ಮೊದಲು ಅಜಯ್ ರಾವ್ ಹಾಕಿಕೊಂಡು ಬೆಂಗಳೂರಿನ ಒಂದು ಡಜನ್ ರೌಡಿಗಳನ್ನೆಲ್ಲ ಗುಡ್ಡೆಹಾಕಿ 'ಸೂರ್ಯ ದಿ ಗ್ರೇಟ್' ಎಂಬ ಸಿನಿಮಾ ಮಾಡಿದ. ಆನಂತರ 'ಮರುಭೂಮಿ' ನಿರ್ಮಿಸಿ ಅದನ್ನು ಅರ್ಧಕ್ಕೆ ಕೈಬಿಟ್ಟು 'ಕೊಟ್ಲಲ್ಲಪ್ಪೋ ಕೈ'ಗೆ ಕೈ ಇಟ್ಟ. ಈತನ ವೈಶಿಷ್ಟ್ಯವೆಂದರೆ ಹತ್ತಾರು ಜನರನ್ನು ಹಿಡಿದು ತಲಾ ಐದೋ ಹತ್ತೋ ಲಕ್ಷ ಕಿತ್ತು ಸಿನಿಮಾ ಮಾಡುವುದು. ಹೀಗೆ ಸಿನಿಮಾಕ್ಕೊಂದು ರುಪಿ ಯಾರ್‍ಯಾರಿಂದ ಪುಡಿ ಲಕ್ಷಗಳ ಲೆಕ್ಕದಲ್ಲಿ ಬಂಡವಾಳ ಹಾಕಿಸಿದ್ದನೋ ಅವರ್‍ಯಾರೂ ಗಾಂಧಿನಗರ ಮೆಟ್ಟಿಗೆ ಪಳಗಿದವರಲ್ಲ.

ಹೀಗೆ ಯಾರ್‍ಯಾರಿಂದಲೋ ದುಡ್ಡೆತ್ತಿದ್ದ ರುಪಿ ತನ್ನ ಬಜೆಟ್ಟಿನ ದೊಡ್ಡ ಮೊತ್ತವನ್ನು ಪಡಕೊಂಡಿದ್ದು ಕಪಾಲಿ ಆನಂದ್ ಎಂಬ ಪುರಾಣ ಪಂಟರ್‌ನಿಂದ. ಅದು ಸರಿಸುಮಾರು ನಲವತ್ತು ಲಕ್ಷದಷ್ಟು. ಆದರೆ ಚಿತ್ರದ ಕಥಾವಸ್ತುವಾಗಿ ಆತ ಆಯ್ದುಕೊಂಡಿದ್ದು ಮಾತ್ರ ನಿಂಫೋಮೇನಿಯಾ ಅರ್ಥಾತ್ ಹೆಣ್ಣಿನ ಅತಿಕಾಮುಕತೆಯನ್ನು. ಇದೊಂದು ಸೈಕಲಾಜಿಕಲ್ ಸಬ್ಜೆಕ್ಟ್. ಅದು ಮನೋರೋಗವೋ, ವಿಕೃತಿಯೋ, ಪಶುವಾಂಛೆಯೋ ಗೊತ್ತಿಲ್ಲ. ಬಹುಶಃ ರುಪಿಯ ವ್ಯಕ್ತಿತ್ವದಲ್ಲೇ ಈ ಥರದ ವಿಕೃತಿಯಿತ್ತೆ?

ಈ ರುಪಿಯ ಇತಿಹಾಸವೇ ವಿಚಿತ್ರ. ಕೆಲವೊಮ್ಮೆ ಪಂಚತಾರಾ ಹೋಟೆಲಲ್ಲಿ ಕೂತು ಸ್ಕಾಚ್ ಕುಡಿಯುತ್ತಾನೆ. ಇನ್ನೊಮ್ಮೆ ಕಟ್ಟಾ ಕೊಳಕು ಬಾರೊಂದರಲ್ಲಿ ಪೋರ್ಕಿಗಳ ಜೊತೆ ಕುಡಿದು ಹಾಡು ಹೇಳುತ್ತಿರುತ್ತಾನೆ. ಮತ್ತೊಮ್ಮೆ ಐಷಾರಾಮಿ ಕಾರಲ್ಲಿ ಯಾರೋ ಹೀರೋಯಿನ್ ಜೊತೆ ಪೋಜು ಕೊಟ್ಟವನು ಮರುಕ್ಷಣವೇ ಯಾವುದೋ ಫುಟ್‌ಪಾತಿನಲ್ಲಿ ಕೂತು ಸಿಗರೇಟು ಸೇದುತ್ತಿರುತ್ತಾನೆ. ಮಾತೆತ್ತಿದರೆ ಸರ್ವಜ್ಞ, ಬುದ್ಧರನ್ನೂ ಮೀರಿಸುವ ತತ್ವ ಹೇಳುತ್ತಾನೆ. ವಿನಾಕಾರಣ ಜೈಲಿಗೆ ಹೋಗಿ ಅಲ್ಲಿನ ಕ್ರಿಮಿನಲ್‌ಗಳ ಜೊತೆ ಕಾಲ ಕಳೆಯುತ್ತಾನೆ. ಕುಡಿದನೆಂದರೆ ಪುಂಖಾನುಪುಂಖ ವಚನಗಳನ್ನು ಹೇಳುತ್ತಾನೆ. ಇದಲ್ಲದೇ ರುಪಿಯ ಮತ್ತೊಂದು ವೈಶಿಷ್ಟ್ಯವೆಂದರೆ ಸಿಕ್ಕಸಿಕ್ಕವರನ್ನು ಕೂರಿಸಿಕೊಂಡು ಅವರ ಜ್ಯೋತಿಷ್ಯ ಹೇಳುವುದು. ಎಂತೆಂಥಾ ಗಣ್ಯಾತಿಗಣ್ಯರೇ ಈತನ ಜ್ಯೋತಿಷ್ಯ ಕೇಳಿ ಸುಸ್ತು ಬೀಳುತ್ತಾರಂತೆ. ಭೂತ-ಭವಿಷ್ಯ ಎರಡನ್ನೂ ಅವರ ಮುಖ ನೋಡಿಯೇ ಹೇಳುತ್ತಾನಂತೆ. ಈ ಕಾರಣಕ್ಕೇ ತನ್ನ ಹೆಸರನ್ನು ರುಪಿ ಎಂದು ಇಟ್ಟುಕೊಂಡಿರಬೇಕು!

ವಿಚಿತ್ರ ಮನುಷ್ಯ

ಒಟ್ಟಿನಲ್ಲಿ ರುಪಿ ಜ್ಯೋತಿಷಿಯಾ, ತತ್ವಜ್ಞಾನಿಯಾ, ಹುಚ್ಚನಾ, ವಂಚಕನಾ, ವಿಕೃತನಾ, ಸಾಹಿತಿಯಾ, ಮಂತ್ರವಾದಿಯಾ, ವೇದಾಂತಿಯಾ ಎಂಬುದೇ ಯಾರಿಗೂ ಗೊತ್ತಿಲ್ಲ. ಫುಟ್‌ಪಾತ್ ಕಸದತೊಟ್ಟಿಯ ಬಳಿ ಕೂತು ಆತ ಬೀದಿನಾಯಿಗಳಿಗೆ ಮುತ್ತಿಡುವುದನ್ನು ನೋಡಿದವರಿದ್ದಾರೆ. ಹಾಗೆ ಸ್ಮಶಾನದ ಗೋರಿಗಳ ಮೇಲೆ ಮಲಗಿ ಗಾಂಜಾ ಹೊಡೆಯುವುದನ್ನೂ ಜನ ಕಂಡಿದ್ದಾರೆ. ಈತ ಯಾರು, ಎಲ್ಲಿಂದ ಬಂದ, ಹಿನ್ನೆಲೆಯೇನು, ಏಕೆ ನಯಾಪೈಸೆಯ ಖರ್ಚಿಲ್ಲದೆ ಸಿನಿಮಾಕ್ಕೆ ಕೈಹಾಕುತ್ತಾನೆ ಇತ್ಯಾದಿ ಏನೊಂದೂ ಯಾರಿಗೂ ಗೊತ್ತಿಲ್ಲ. ಈತನ ಕುರಿತ ವದಂತಿ, ಮೌಢ್ಯಗಳಿಗೂ ಲೆಕ್ಕವಿಲ್ಲ.

ಶುರುವಿನಲ್ಲಿ ಈತ 'ಸೂರ್ಯ ದಿ ಗ್ರೇಟ್' ಚಿತ್ರಕ್ಕೆಂದು ಬೆಂಗಳೂರಿನ ಒಂದು ಡಜನ್ ರೌಡಿಗಳನ್ನು ಕಲೆ ಹಾಕಿದನಲ್ಲ, ಹಾಗೆ ಯಾರೆಲ್ಲ ರೌಡಿಗಳು ಈತನ ಚಿತ್ರದಲ್ಲಿ ನಟಿಸಿದರೋ ಅವರ್‍ಯಾರೂ ಇವತ್ತು ಬದುಕುಳಿದಿಲ್ಲ. ಯಮಲೋಕದಲ್ಲಿ ರೌಡಿಗಳೆಲ್ಲ ಸೇರಿ ಯಮನ ವಿರುದ್ಧ ಮುಷ್ಕರ ಹೂಡುವ ಕತೆ ಇದ್ದುದರಿಂದಲೋ ಏನೋ ಅದರಲ್ಲಿ ನಟಿಸಿದ ಕೋಳಿ ಫಯಾಜ್, ಡೆಡ್ಲಿ ಸೋಮ, ಚಿಕನ್ ಈಶ್ ರಾಜೇಂದ್ರ, ತಿಮ್ಮೇನಹಳ್ಳಿ ಗೋವಿಂದ, ಮಚ್ಚ ಮುಂತಾದವರೆಲ್ಲ ಒಬ್ಬೊಬ್ಬರಾಗಿ ಹತರಾದರು. ಆನಂತರ ಬೆಂಗಳೂರು ಅಂಡರ್‌ವರ್ಲ್ಡ್ ಅನ್ನೇ ಆಧರಿಸಿ 'ಮರುಭೂಮಿ' ಎಂಬ ಚಿತ್ರದಲ್ಲಿ ಎರಡನೇ ಹೀರೋ ಪಾತ್ರ ವಹಿಸಿದ್ದ ವಿನೋದ್‌ಗೆ ಚಿತ್ರದಲ್ಲಿ ಕೊಲೆಯಾಗುವ ಪಾತ್ರವೇ ಇತ್ತು. ಅದೇನಾಯಿತೋ ವಿನೋದ್ ರೌಡಿಗಳಿಂದ ಕೊಲೆಯಾಗುವ ಸನ್ನಿವೇಶದ ಶೂಟಿಂಗ್ ಮುಗಿದ ಒಂದೇ ವಾರಕ್ಕೆ ಆತ ವಾಸ್ತವವಾಗಿಯೇ ಕೊಲೆಯಾಗಿದ್ದ!

ಕುಡಿದ ಮತ್ತಿನಲ್ಲಿ ಗೋವರ್ಧನ ಮೂರ್ತಿ ಎಂಬ ಸಿನಿಮಾ ಫೈನಾನ್ಶಿಯರ್ ತನ್ನ ರಿಯಲ್ ಎಸ್ಟೇಟ್ ಅಡ್ಡೆಯಲ್ಲೇ ಗೆಳೆಯ ವಿನೋದ್‌ನನ್ನು ತಮಾಷೆ ಮಾಡಲು ಹೋಗಿ ಗುಂಡಿಟ್ಟು ಕೊಂದುಬಿಟ್ಟ!



ಡೈರೆಕ್ಟರ್ ರುಪಿ

ಕೋಟಿಗಟ್ಟಲೆ ಹಣ ಸುರಿದು ಸಿನಿಮಾ ಶೋಕಿಗೆ ಬಿದ್ದಿದ್ದ ಗೋವರ್ಧನ ಮೂರ್ತಿ ವಿನೋದ್ ಕೊಲೆ ಕೇಸಲ್ಲಿ ಜೈಲು ಪಾಲಾದವನು ಇವತ್ತಿಗೂ ಹೊರ ಬಂದಿಲ್ಲ. ಈಗ 'ಕೊಟ್ಲಲ್ಲಪ್ಪೋ ಕೈ' ಎಂದು ಹೆಸರಿಟ್ಟು ಸಿನಿಮಾ ಮಾಡ ಹೊರಟ ರುಪಿಗೆ ನಾಯಕಿ ನಯನಾಳೇ ಕೈಕೊಡುತ್ತಾಳೆಂದರೆ ಅದು ಆತನ ರಾಶಿಫಲವೆಂದೂ ಜಾಯಮಾನ ವೆಂದೂ ಕತೆ ಕಟ್ಟುವವರೇ ಹೆಚ್ಚು.

'ಕೊಟ್ಲಲ್ಲಪ್ಪೋ ಕೈ' ಚಿತ್ರಕ್ಕೆ ರುಪಿ ಆಯ್ದುಕೊಂಡಿದ್ದು ನಿಂಫೊಮೇನಿಯಾ ಎಂಬ ಮನೋವಿಕೃತಿಯನ್ನು. ಅದರರ್ಥ ಹೆಣ್ಣಿನ ಅತಿಕಾಮುಕತೆ. ಇದೊಂಥರ ಸೈಕಲಾಜಿಕಲ್ ಡಿಸಾರ್ಡರ್ ಅಂತೆ. ವಿಪರೀತ ಸೆಕ್ಸ್ ವಾಂಛೆಯನ್ನು ಬೆಳೆಸಿಕೊಂಡ ಹೀರೋಯಿನ್ ತನ್ನ ಪ್ರಿಯಕರನನ್ನು ವಂಚಿಸಿ ಪಡ್ಡೆ ಹುಡುಗನೊಬ್ಬನ ಜೊತೆ ಕಾಮಕೇಳಿ ನಡೆಸುವಾಗಲೇ ಪ್ರೇಮಿಯ ಕೈಗೆ ಸಿಕ್ಕಿಬೀಳುತ್ತಾಳೆ. ಗಾಬರಿಗೆ ಬಿದ್ದು ಜೊತೆಗಿದ್ದ ಹುಡುಗನ ಜೊತೆ ಸೇರಿ ತನ್ನ ಪ್ರಿಯತಮನನ್ನೇ ಕೊಲ್ಲುತ್ತಾಳೆ. ಹಾಗೆ ಮಾಡಿದ ಕೊಲೆಯನ್ನು ಮುಚ್ಚಿಹಾಕಲು ಹೋಗಿ ಯಡವಟ್ಟಿನ ಮೇಲೆ ಯಡವಟ್ಟು ಮಾಡಿಕೊಳ್ಳುತ್ತಾಳೆ. ಒಂದೆಡೆ ಕಾಮ ಮತ್ತೊಂದೆಡೆ ಕ್ರೈಮು ಎರಡೂ ದಿಕ್ಕಿನಿಂದ ಸಾಗುವ ಕತೆ ಈಗಾಗಲೇ ಬಾಲಿವುಡ್‌ನ 'ಮರ್ಡರ್', ಹಾಲಿವುಡ್‌ನ 'ಬೇಸಿಕ್ ಇನ್‌ಸ್ಟಿಂಕ್ಟ್', **Unfaithful**ನಂಥ ಚಿತ್ರಗಳಲ್ಲಿ ಬಂದುಹೋಗಿದೆ.

ರಂಭಾ ಹೀರೋಯಿನ್


ಇಂಥದ್ದೇ ಕತೆಯನ್ನು ಆಯ್ದುಕೊಂಡ ರುಪಿ ಅದಕ್ಕೆ ನಿಂಫೋಮೇನಿಯಾ ಎಂಬ ಮನೋವಿಕೃತಿಯ ಮಸಾಲೆ ಬೆರೆಸಿದ್ದಾನೆ. ಹಾಲಿವುಡ್‌ನ ರೋಮಾನ್ಸ್ ದೃಶ್ಯಗಳನ್ನೇ ಹೋಲುವಂತೆ ಬೆಡ್‌ರೂಮ್ ದೃಶ್ಯಗಳಿವೆ. ಇತ್ತೀಚೆಗಷ್ಟೇ ಹಿಂದಿಯ 'ಡರ್ಟಿ ಪಿಕ್ಚರ್' ಹಿಟ್ಟಾಗಿದ್ದರಿಂದ ಮನಶಾಸ್ತ್ರದ ಮರೆಯಲ್ಲಿ ಮಸಾಲೆ ಚಿತ್ರ ಮಾಡಿ ಕಾಸು ಮಾಡುವ ರುಪಿಯ ತಲೆಗಾರಿಕೆಗೆ ಸಿಕ್ಕವಳು ಐಟಮ್ ಹೀರೋಯಿನ್ ನಯನ ಕೃಷ್ಣ!

ಈಕೆಯನ್ನೇ ತನ್ನ ಚಿತ್ರಕ್ಕೆಂದು ರುಪಿ ಆಯ್ದುಕೊಳ್ಳುವುದಕ್ಕೂ ಕಾರಣವಿತ್ತು. ಈ ಹೊತ್ತಿಗಾಗಲೇ ಆಕೆ ನಟಿಸಿದ್ದ 'ರಂಭಾ' ಎಂಬ ಸೆಕ್ಸ್ ಚಿತ್ರವೊಂದು ಐವತ್ತು ಲಕ್ಷದ ಲಾಭ ಗಳಿಸಿತ್ತು. ಏನೇನೂ ಇಲ್ಲದೆ ಕೇವಲ ಹೀರೋಯಿನ್ ಮೈಮಾಟವಿದ್ದ ಕಾರಣಕ್ಕೇ ಆಪಾಟಿ ಲಾಭ ಮಾಡಿದ 'ರಂಭಾ' ಚಿತ್ರಕ್ಕಿಂತ ತಾನು ಗ್ಲಾಮರಸ್ ಆಗಿ ಸಿನಿಮಾ ಮಾಡಿಬಿಟ್ಟರೆ ಕನಿಷ್ಠ ಒಂದು ಕೋಟಿಯಾದರೂ ಲಾಭ ಮಾಡಬಹುದೇನೋ ಎಂಬ ದುರಾಶೆ ರುಪಿಯ ತಲೆ ಹೊಕ್ಕಿತ್ತು. ನಯನಾಳ ಜೊತೆ ಧನುಷ್ ಎಂಬ ಹೊಸ ಹೀರೋನನ್ನು ಹಾಕಿಕೊಂಡ. ಮತ್ತೊಬ್ಬ ಹೀರೋ ಪಾತ್ರಕ್ಕೆ ನವೀನ್ ಕೃಷ್ಣನನ್ನು ಕರೆಸಿಕೊಂಡ. ತಬಲಾ ನಾಣಿ, ಕಮೇಡಿಯನ್ ಮಿತ್ರ, ಸಂಗೀತಾ ಶೆಟ್ಟಿ ಮುಂತಾದವರೆಲ್ಲ ಸೇರಿ ತಕ್ಕಮಟ್ಟಿಗಿನ ತಾರಾಗಣವಾಯಿತಾದರೂ ರುಪಿಯ ಲೆಕ್ಕಾಚಾರವೇ ಬೇರೆಯಾಯಿತು.

ಅದು ಬಿ.ಸಿ. ಸೆಂಟರ್‌ನ ಮಾರುಕಟ್ಟೆ. ರಂಭಾ, ದೇವಾಲಯ, ಪ್ರೇಮ ಕಾರಂಜಿ ಇತ್ಯಾದಿ ಬಿ.ಸಿ. ಸೆಂಟರ್‌ಗಾಗೇ ನಿರ್ಮಿಸಿದ ಚಿತ್ರಗಳು ಯಾವ ಸ್ಟಾರ್‌ನ ಚಿತ್ರಕ್ಕೂ ಕಮ್ಮಿಯಿಲ್ಲದಂತೆ ದುಡ್ಡು ದೋಚುತ್ತವೆ. ಇದೇ ಫಾರ್ಮುಲಾ ಬಳಸಿ ಹಸಿಬಿಸಿ ದೃಶ್ಯಾವಳಿಗಳನ್ನು ರಸವತ್ತಾಗಿ ಶೂಟ್ ಮಾಡಿದ ರುಪಿ ಕೊನೆಕೊನೆಗೆ ದುಡ್ಡಿನ ಬರಕ್ಕೆ ಬಿದ್ದು ಏಳೆಂಟು ಮಂದಿಯ ಮುಂದೆ ತಲಾ ಐದೋ, ಹತ್ತೋ ಲಕ್ಷಕ್ಕೆ ಕೈಚಾಚಿದ್ದ. ಹೀಗೆ ದುಡ್ಡು ಕೊಟ್ಟವರಲ್ಲಿ ಹೀರೋಯಿನ್ ನಯನಾ ಕೃಷ್ಣ ಕೂಡ ಒಬ್ಬಳು. ಆಕೆ ಕೊಟ್ಟಿದ್ದು 7.80 ಲಕ್ಷ. ಯಾವತ್ತು ಸಿನಿಮಾ 'ಅದ್ಭುತವಾಗಿ' ಬಂದಿದೆಯೆಂಬುದು ಗೊತ್ತಾಯಿತೋ ನಯನಾಳ ದುರಾಶೆ ಹೆಡೆಯೆತ್ತಿದೆ. ಕೊಟ್ಟ ಕಾಸಿಗೆ ಇಡೀ ಸಿನಿಮಾ ಅನ್ನೇ ಲಪಟಾಯಿಸುವುದು ಆಕೆಯ ಹುನ್ನಾರ. ಹಾಗಂತ ಸಿನಿಮಾ ಹಂಚಿಕೆಯಾಗಲಿ ವ್ಯಾಪಾರವಾಗಲಿ ಗೊತ್ತಿಲ್ಲ, ಯಾರೋ ಹೇಳಿದರೆಂದು ತಾನು ಕೊಟ್ಟ ಕಾಸಿಗೆ ಮಂಗಳೂರು ವಲಯದ ಹಂಚಿಕೆ ಹಕ್ಕು

'ಕೊಟ್ಲಲ್ಲಪ್ಪೋ ಕೈ' ಕನ್ನಡದ 'ಡರ್ಟಿ ಪಿಕ್ಚರ್' ಆಗುತ್ತೋ ಬಿಡುತ್ತೋ ಆ ಮಾತು ಬೇರೆ. ಆದರೆ ಅದೊಂದು ಹಾಟ್ ಮೂವಿ ಎಂಬ ಹಣೆಪಟ್ಟಿಗಂತೂ ...ಂದಿತಾ ...ಳಪಡಲಿದೆ. ನಯನಾ ಇದರಲ್ಲಿ ...ಟೂಪೀಸ್‌ನಲ್ಲಿ ...ಟಿಸಿದ್ದಾಳೆ. ಹೀರೋ ...ನುಷ್ ಜೊತೆ ...ಪ್ರೂರ್ತಿ ಚೆತ್ತಲಾಗುವ ...ಶ್ಯವೂ ಇದೆಯಂತೆ. ...ಂಥಾ ಮೈ ...ೋರಿಕೆಯನ್ನು ...ಸೆನ್ಸಾರ್ ಮಂಡಳಿ ...ಮಾವುದೇ ಕಾರಣಕ್ಕೂ ...ಪ್ಪುವುದು ಕಷ್ಟ. ...ಾಗೊಮ್ಮೆ ಮನಶಾಸ್ತ್ರ ...ಥವಾ ...ಮನೋವಿಕೃತಿಯ ...ರಿತ ಚಿತ್ರವೆಂದು ...ಯಾಯಿತಿ ...ೊಟ್ಟರೂ ಆದರ ...ಬಿಸಿ ಕಾಮಕೇಳಿಯ ...ಹುಪಾಲನ್ನು ಸೆನ್ಸಾರ್ ...ಮಾಡದೇ ಬಿಡಲು ...ಾಧ್ಯವೇ ಇಲ್ಲ.

ಹಿಂದಿಯ 'ಡರ್ಟಿ ...ಕ್ಚರ್' ಹೆಸರಿಗಷ್ಟೇ ...ರ್ಟಿಯಾದರೂ ಅದಕ್ಕೊಂದು ಕತೆ, ವಿಷಯದ ...ಕಟ್ಟಿತ್ತು. ಸಿಲ್ಕ್‌ಸ್ಮಿತಾಳ ಬದುಕಿನ ಕತೆಯಾದ್ದರಿಂದ ...ದನ್ನು ಜನ ಬೇರೆಯದೇ ದೃಷ್ಟಿಯಲ್ಲಿ ನೋಡಿದ್ದರು. ...ದರೆ ಕೊಟ್ಲಲ್ಲಪ್ಪೋದ ಕತೆಯೇ ಹೆಣ್ಣಿನ ಕಾಮ ...ಕೃತಿ ಕುರಿತದ್ದು. ಮನೋವೈಜ್ಞಾನಿಕ ಕತೆಯ ...ಮರೆಯಲ್ಲಿ ಸೆಕ್ಸ್ ಚಿತ್ರವೊಂದನ್ನು ಮಾಡಿ ಹಣ ...ಮಾಡುವ ರುಪಿಯ ತಂತ್ರ ಫಲಿಸಿದೆ. ಆದರೆ ಸೆನ್ಸಾರ್ ಮಂಡಳಿ ಒಂದಷ್ಟು ಬಿಸಿ ದೃಶ್ಯಗಳಿಗೆ ಅವಕಾಶ ಮಾಡಿಕೊಡಬಹುದು, ಇದು ಫೈನಾನ್ಸಿಯರ್‌ಗಳಿಗೂ ಚೆನ್ನಾಗಿ ಗೊತ್ತಿದೆ.




ಹೇಗೂ ದುಡ್ಡು ಮಾಡುವ ನಿರೀಕ್ಷೆಯಿಂದ ಈ ಡರ್ಟಿ ಚಿತ್ರವನ್ನು ಪುಡಿಕಾಸಿಗೆ ಹೊಡೆಯಲು ಕೊನೆಕೊನೆಗೆ ಯಾವ ಮಟ್ಟಕ್ಕಿಳಿದಿದ್ದಾರೆಂದರೆ ರುಪಿ ಡೈರೆಕ್ಟರ್ ಓರ್ವ ಸೈಕೋ ಎಂದು ನಯನಾ ತನ್ನ ಗೆಳತಿಯರನ್ನು ಛೂಬಿಟ್ಟು ಟಿವಿಗಳಿಗೆ ಸಂದರ್ಶನ ಕೊಡಿಸುತ್ತಿದ್ದಾಳೆ. ಹೀಗೆ ನಯನಾಳ ಹಂಗಿಗೆ ಬಿದ್ದು ರುಪಿ ತನ್ನನ್ನು ಪೀಡಿಸಿದ, ರೇಪ್ ಮಾಡಲು ಯತ್ನಿಸಿದ ಎಂದು ಟಿವಿಗಳ ಮುಂದೆ ಹೇಳಿಕೆ ಕೊಟ್ಟ ಇಬ್ಬರು ಎಕ್ಸ್‌ಟ್ರಾ ನಟಿಯರ ಪೈಕಿ ಸುಕೃತಾ ಎಂಬ ಯುವತಿ ಮೈಸೂರಿನ ಲೈವ್‌ಬ್ಯಾಂಡ್ ಒಂದರ ಡ್ಯಾನ್ಸರ್. ಮತ್ತೊಬ್ಬಳು ನಕ್ಷತ್ರಾ ಎಂಬ ಪುಡಿನಟಿಯದ್ದೂ ಇದೇ ಜಾಯಮಾನ. ಇಂಥ ತಲೆಮಾಸಿದ ಹುಡುಗಿಯರನ್ನು ಹಿಡಿದು ತಂದು ರುಪಿಯನ್ನು ಬ್ಲಾಕ್‌ಮೇಲ್ ಮಾಡಲು ನೋಡಿದ ನಯನಾ ಕೃಷ್ಣಳ ಇತಿಹಾಸ ಇನ್ನೂ ಅಸಹ್ಯ.

ಸಿನಿಮಾ ಒಂದರ ಸುತ್ತ ಈ ಪಾಟಿ ಕಚ್ಚಾಟವೆ? ಹಾಗೊಮ್ಮೆ ಸೆನ್ಸಾರ್‌ನಿಂದಲೇ ಹೊರಬರದೇ ಹೋದರೆ ಇವರೆಲ್ಲ ಇನ್ನೆಷ್ಟು ಹೀನಾಯವಾಗಿ ಬಡಿದಾಡಿಕೊಳ್ಳಬಹುದು?

...ರೆದುಕೊಡು ಎಂದಿದ್ದಾಳೆ. ಕೊಟ್ಟ 7.80 ಲಕ್ಷಕ್ಕೆ ...ಂಗಳೂರು ವಲಯವನ್ನು ಹೇಗೆ ಬರೆದುಕೊಡಲು ...ಧ್ಯ? ಎಂದ ರುಪಿ ಅಂತಿಮವಾಗಿ 15 ಲಕ್ಷಕ್ಕೆ ವ್ಯಾಪಾರ ...ದುರಿಸಿದ್ದಾನೆ. ಉಳಿಕೆ 8 ಲಕ್ಷವನ್ನು ಕೊಟ್ಟ ನಂತರವೇ ...ಷ್ಟು ಬರೆದುಕೊಡುತ್ತೇನೆಂದು ಒಪ್ಪಂದಕ್ಕೂ ಬಂದಿದ್ದಾನೆ.

ಡರ್ಟಿ ಕಚ್ಚಾಟ

ಈ ಮಧ್ಯೆ ಇನ್ನಾರು ತಲೆ ಕೆಡಿಸಿದರೋ ಗೊತ್ತಿಲ್ಲ ...ಯನಾ ತನಗೆ ಮಂಗಳೂರು ವಲಯಬೇಡ, ...ದರಾಬಾದ್ ಕರ್ನಾಟಕ ಏರಿಯಾ ಬರೆದುಕೊಡು ...ದು ಹಠಕ್ಕೆ ಬಿದ್ದಿದ್ದಾಳೆ. ಹೈದ್ರಾಬಾದ್ ...ರ್ನಾಟಕವೇ ಆದರೆ ಅದಕ್ಕೆ ...ರೆ ಬೆಲೆಯಿದೆ. ಆ ರೇಟು ...ಟ್ಟರಷ್ಟೇ ...ರೆದುಕೊಡೋದು ಎಂದು ...ಪಿ ಪಟ್ಟು ಹಿಡಿದಿದ್ದಾನೆ. ...ಲ್ಲಿಗೆ ನಯನಾಳ ವರಸೆಯೇ ...ವಲಾಗಿದೆ. ಹೈದ್ರಾಬಾದ್ ...ರ್ನಾಟಕ ಏರಿಯಾ ಕೊಡಲ್ಲ ...ದರೆ ನಾನು ಕೊಟ್ಟ ...ದ್ದನ್ನು ಈಗಲೇ ಮಡುಗು ...ದಿದ್ದಾಳೆ. ಹೇಗಮ್ಮಾ ...ದ್ಲೀ?... ಏನು ...ಟ್ಟಿದ್ದನ್ನೆಲ್ಲಾ ಸಿನಿಮಾಕ್ಕೆ ...ಕಿದ್ದೀನಿ. ಸಿನಿಮಾ ರಿಲೀಜ್ ...ೈ ಎಲ್ಲಿಂದ ದುಡ್ಡು ತರ್ಲಿ? ...ದು ಕೈಚೆಲ್ಲಿದ್ದಾನೆ ರುಪಿ.



ಇದನ್ನೇ ತನ್ನ ದುರಾಶೆ ಈಡೇರಿಸಿಕೊಳ್ಳಲು ...ಸಿಕೊಂಡ ನಯನಾ ತಾನಲ್ಲದೆ ತನ್ನ ಜೊತೆ ಪುಡಿ ...ಗಳ ಫೈನಾನ್ಸ್ ಮಾಡಿದ್ದ ವೆಂಕಟೇಶ್, ದಯಾನಂದ್ ...ಂಜಮ್ಮರನ್ನೂ ಎತ್ತಿಕಟ್ಟಿ ನಾವೆಲ್ಲ ಹಾಕಿದ ದುಡ್ಡನ್ನು ...ಗಲೇ ಮಡಗು ಇಲ್ಲಾ ಅಂದ್ರೇ ಇಡೀ ಸಿನಿಮಾ ಅನ್ನೇ ...ಮಗೆ ಬರೆದುಕೊಂಡು ಎಂಬ ಬೇಡಿಕೆಯಿಟ್ಟಿದ್ದಾಳೆ. ...ಷ್ಟಕ್ಕೂ ದಯಾನಂದ್ ಹಾಕಿದ್ದೇ 7 ಲಕ್ಷ. ವೆಂಕಟೇಶ್ ...ಟ್ಟಿದ್ದು ಬರೀ 8.5 ಲಕ್ಷ ಮಾತ್ರ. ಮುಂಜಮ್ಮ ಮತ್ತು ...ರೇಶ್ ಹಾಕಿದ್ದೂ ಕೇವಲ 7 ಲಕ್ಷವನ್ನು. ನಯನಳ ...ದ್ದೂ ಸೇರಿದರೆ ಇವರೆಲ್ಲ ಸೇರಿ ಹಾಕಿದ ಮೊತ್ತ 30 ...ಕ್ಷ ಕೂಡಾ ದಾಟಲ್ಲ. ಆದರೆ ತಾನು ಈಗಾಗಲೇ ಒಂದು ...ೋಟಿಯಷ್ಟೂ ಖರ್ಚು ಮಾಡಿದ್ದೇನೆ. ಈ ಪೈಕಿ ದೊಡ್ಡ ...ತ್ತ ಹಾಕಿದ್ದು ಕಪಾಲಿ ಆನಂದ್. ಅಂಥವರೇ ಸಿನಿಮಾ ...ಗಿಗಲು ಕಾಯುತ್ತಿರುವಾಗ ಇಡೀ ಸಿನಿಮಾ ನಿಮಗೆ ಬರೆದುಕೊಡೋದಕ್ಕೆ ಹೇಗೆ ಸಾಧ್ಯ ಎಂದಿದ್ದಾನೆ ರುಪಿ.

ಅಲ್ಲಿಗೆ ನಯನಾ ಅಕ್ಷರಶಃ ಲೇಡಿ ಡಾನ್‌ಳಂತೆ ಹಾವಳಿಗಿಳಿದಿದ್ದಾಳೆ. ನೀನು ಸಿನಿಮಾ ಮುಗಿಸೋತನಕ ನಾನು ಕಾಯೋಲ್ಲ, ದುಡ್ಡು ಕೊಡದೇ ಹೋದರೆ ನಿನ್ನನ್ನು ಉಳಿಸೋಲ್ಲ, ನನ್ನ ಜೊತೆ ಇತರೇ ಫೈನಾನ್ಸಿಯರ್‌ಗಳೂ ನಿನ್ನನ್ನು ಬಿಡಲ್ಲ ಎಂದು ಕಾಟಕ್ಕಿಳಿದಳು. ಕೆಲ ರೌಡಿಗಳನ್ನು ಸೇರಿಸಿ ರುಪಿಯನ್ನು ಎಳೆತಂದಿದ್ದೇ ಚಪ್ಪಲಿ ತೂರಿಬಿಟ್ಟಳು. ಇಷ್ಟಾಗ್ಯೂ ರುಪಿ ಜಗ್ಗದೇ ಹೋದಾಗ ಸಂಜಯ್‌ನಗರ ಪೊಲೀಸ್ ಠಾಣೆಯೊಂದು ದೂರು ಕೊಟ್ಟು ರುಪಿ ತನಗೆ 25 ಲಕ್ಷ ಕೊಡಬೇಕೆಂದೂ, ಅದನ್ನು ಕೇಳಿದರೆ ಆಸಿಡ್ ಹಾಕ್ತೀನಿ ಎಂದು ಧಮಕಿ ಹಾಕಿದನೆಂದೂ ರೈಲು ಬಿಟ್ಟಳು.

ರುಪಿಯನ್ನು ಕರೆಸಿ ವಿಚಾರಿಸಿದ ಪೊಲೀಸರಿಗೆ ನಯನಾಳ ಬ್ಲಾಕ್‌ಮೇಲ್ ತಂತ್ರ ಗೊತ್ತಾಯಿತು. ಕರೆದು ಬುದ್ಧಿ ಹೇಳಿದ್ದಾರೆ. ಇನ್ನು ಇಡೀ ಚಿತ್ರವನ್ನು ಲಪಟಾಯಿಸುವುದು ಕಷ್ಟ ಎನ್ನಿಸಿರಬೇಕು. ಫೈನಾನ್ಸಿಯರ್‌ಗಳಾದ ವೆಂಕಟೇಶ್, ದಯಾನಂದ್ ಮೂಲಕ ಬೆದರಿಸಲೆತ್ನಿಸಿದ್ದಾಳೆ. ಟಿವಿಯವರನ್ನು ಕರೆಸಿ ರುಪಿ ತನ್ನನ್ನು ಮಂಚಕ್ಕೆ ಕರೆದ ಎಂದು ಕಣ್ಣೀರಿಟ್ಟಿದ್ದಾಳೆ. ಅದನ್ನೇ ಟಿವಿಗಳು ವಿಶೇಷ ಕಾರ್ಯಕ್ರಮವಾಗಿ ಬಿತ್ತರಿಸಿವೆ. ರುಪಿ ಓರ್ವ ಸ್ಯಾಡಿಸ್ಟ್, ಸೈಕೋ ಎಂದೆಲ್ಲ ನಯನಾ ಬಯ್ಯುವುದನ್ನು ನೋಡಿದ ಜನಕ್ಕೆ ಅರ್ಥವಾಗ[illegible] ಒಂದೇ ಪ್ರಶ್ನೆಯೆಂದರೆ, ಆಕೆ ಕೊಟ್ಟ ಪುಡಿಕಾಸಿಗೆ ರುಪಿ ತನ್ನ ಚಿತ್ರ ಬರೆದುಕೊಟ್ಟರೆ ನಯನಾ ಬಾಯಿ ಮುಚ್ಚಿಕೊಂಡಿರುತ್ತಿದ್ದಾಳಾ?

ಅಂತೂ ಬಿಡುಗಡೆಗೆ ಮೊದಲೇ 'ಕೊಟ್ಲಲ್ಲಪ್ಪೋ ಕೈ' ಸುದ್ದಿಯಾಗುತ್ತಿದೆ.

ಡರ್ಟಿ ಚಿತ್ರವೊಂದರ ಡರ್ಟಿ ಕಚ್ಚಾಟದಲ್ಲಿ ಯಾರ್‍ಯಾರೆಲ್ಲ ಚಳಿಕಾಯಿಸಿಕೊಳ್ಳುತ್ತಾರಲ್ಲವೆ?

• ರಾ. ಸೋಮನಾಥ್

ಉಡುಪಿ-ಚಿಕ್ಕಮಗಳೂರು ಉಪಚುನಾವಣೆ

ಭಜರಂಗಿ ಭೂತ V/s ಜನಪರ ಜೆಪಿ ಹಣಾಹಣಿ!!


ಸಜ್ಜನ ಜೆಪಿ.


ಭಜರಂಗಿ ಭೂಪ ಸುನಿಲ್

ಜಾತಿ ರಾಜಕಾರಣದ ಗಣಿತ, ಧರ್ಮಾಂಧ ತಂತ್ರಗಾರಿಕೆ ಮತ್ತು ಕ್ಯಾಂಡಿಡೇಟ್‌ಗಳ ಸಾಮರ್ಥ್ಯ, ಬಿಜೆಪಿಯೊಳಗಿನ ಗುದುಮುರಿಗೆ ಯಾವುದು ನೋಡಿದರೂ ಕಾಂಗ್ರೆಸ್‌ನ ಜಯಪ್ರಕಾಶ್ ಹೆಗ್ಡೆಯೇ ಸಶಕ್ತ ಮತ್ತು ಸಮರ್ಥ! ಬಿಜೆಪಿಯ ಬೂಟಾಟಿಕೆ ಭೂಪ ಸುನಿಲ್ ಕುಮಾರ್ ಸೋಲುವ ಸಾಧ್ಯತೆಯೇ ಹೆಚ್ಚು!! ಸಂಘ ಪರಿವಾರ ಈ ಬಾರಿ ವ್ಯಭಿಚಾರ-ಅನೈತಿಕ ಅನಾಚಾರ ಮತ್ತು ಭ್ರಷ್ಟಾಚಾರದ ರಾಜಕಾರಣಕ್ಕೆ ದೊಡ್ಡ ದಂಡ ತೆರಲೇಬೇಕಾಗಿದೆ!

ಉಡುಪಿ-ಚಿಕ್ಕಮಗಳೂರು ಮಂದಿಗೆ ಇದು ಬೇಡದ ಉಪಚುನಾವಣೆ ಉಸಾಬರಿ. ಆದರೂ ಈ ಅನಿವಾರ್ಯ ಅನಿಷ್ಟ ಕ್ಷೇತ್ರದಾದ್ಯಂತ ಭರ್ಜರಿ ರಂಗು-ಗುಂಗೇರಿಸಿಬಿಟ್ಟಿದೆ! ಹಾಲಿ ಸಿಎಂ ತೆರವುಗೊಳಿಸಿದ ಕ್ಷೇತ್ರದ ಬೈಇಲೆಕ್ಷನ್ ಅಂದರೆ ಕೇಳಬೇಕಾ? ಸಹಜವಾಗೇ ರಾಜ್ಯದ ದಶದಿಕ್ಕಲ್ಲೂ ಕದನ ಕುತೂಹಲ ಕೆರಳಿಬಿಟ್ಟಿದೆ! ಪರಂಪರಾಗದ ಎದುರಾಳಿಗಳಾದ ಕಾಂಗ್ರೆಸ್ ಮತ್ತು ಬಿಜೆಪಿಯಲ್ಲಂತೂ ಯುದ್ಧೋನ್ಮಾದ! ಕ್ಷೇತ್ರ ಖಾಲಿ ಮಾಡಿರುವ ಮುಖ್ಯಮಂತ್ರಿ ಡೀವಿಗೋ ಕಾಲೆಳೆವ ಸ್ವಪಕ್ಷೀಯರೆದುರು ಮಾನ ಕಾಪಾಡಿಕೊಳ್ಳಬೇಕಾದ ಪೀಕಲಾಟ.....

ತವರುಮನೆ (ಮಂಗಳೂರು)ಯಲ್ಲಿ ನೆಲೆ-ಬೆಲೆಯಿಲ್ಲದೆ ನೆರೆಮನೆ (ಉಡುಪಿ-ಚಿಕ್ಕಮಗಳೂರು)ಗೆ ನೆಗೆದಿದ್ದ ಡೀವಿ ಇಲ್ಲಿ ಎರಡೂವರೆ ವರ್ಷ ಎಂಪಿಯಾಗಿದ್ದರು. ಈ ಅವಧಿಯಲ್ಲಿ ಆತ ಕಡಿದು ಕಟ್ಟೆಹಾಕಿದ್ದು ಅಷ್ಟಕ್ಕಷ್ಟೇ. ಕ್ಷೇತ್ರದ ಮೀನುಗಾರರು-ಕಾಫಿ ಬೆಳೆಗಾರರು-ಅಡಿಕೆ ತೋಟಿಗರು ಸಂಕಷ್ಟಕ್ಕೆ ಸಿಲುಕಿ ಒದ್ದಾಡುತ್ತಿದ್ದರೂ. ಡೀವಿಗೆ ಸ್ಪಂದಿಸುವ ಹೃದಯವೇ ಇರಲಿಲ್ಲ, ಬ್ಲೂಜೆಪಿಯ ರಾಜ್ಯ-ರಾಷ್ಟ್ರ ಮಟ್ಟದ ಭಂಡ ರಾಜಕಾರಣದಲ್ಲೇ ಬಿಜಿಯಾಗಿರುತ್ತಿದ್ದ ಡೀವಿಯಿಂದಾಗಿ ಕ್ಷೇತ್ರದ ಜನರಿಗೆ ಎಂಪಿಯಾಗಿದ್ದೂ ಇಲ್ಲದಂತಾಗಿತ್ತು, ಇಂಥ ಹೋಪ್‌ಲೆಸ್ ಡೀವಿ ಆಳುವ ಬಿಜೆಪಿಯ ಬುರ್ನಾಸ್ ರಾಜಕಾರಣದ ದೆಸೆಯಿಂದ ಅಚಾನಕ್ ಸಿಎಂ ಪಟ್ಟವೇರಬೇಕಾಗಿ ಬಂದಾಗ ಉಡುಪಿ-ಚಿಕ್ಕಮಗಳೂರು. ಕ್ಷೇತ್ರ ಉಪಚುನಾವಣೆ ಎದುರಿಸಬೇಕಾದ 'ಅನಾಹುತ'ಕ್ಕೆ ಸಿಲುಕಿಬಿಟ್ಟಿತು.


• ನಹುಷ

ನೋಡು-ನೋಡುತ್ತಿದ್ದಂತೆಯೇ ಪಾರ್ಲಿಮೆಂಟರಿ ಅಖಾಡ ಸಿದ್ಧವಾಗೇ ಹೋಗಿದೆ! ಬಿಜೆಪಿ ಸುನಿಲ್‌ಕುಮಾರ್ ಎಂಬ ಅನಾಹುತಕಾರಿ ಭಜರಂಗಿಯನ್ನು ಕಣಕ್ಕಿಳಿಸಿದೆ; ಕಾಂಗ್ರೆಸ್‌ನಿಂದ ಜನಪರ ಕೆಲಸಗಾರ-ಸೆಕ್ಯುಲರ್ ಸ್ವಭಾವದ ಜಯಪ್ರಕಾಶ್ ಹೆಗ್ಡೆ ಸ್ಪರ್ಧೆಗಿಳಿದಿದ್ದಾರೆ. ಕಾಂಗ್ರೆಸ್-ಬಿಜೆಪಿಯ ಈ ನೇರ ಹಣಾಹಣಿಯ ನಡುವೆ ಭೋಜೇಗೌಡ ಎಂಬಾತನನ್ನು ಜೆಡಿಎಸ್ ಅಭ್ಯರ್ಥಿಯಾಗಿಸಿರುವುದು ಮಣ್ಣಿನ ಮಗ ಮತ್ತು ಮೊಮ್ಮಗನ ಬಗ್ಗೆ ಅನೇಕ ಅನುಮಾನಗಳನ್ನು ಮೂಡಿಸಿಬಿಟ್ಟಿದೆ! ದೇವೇಗೌಡ-ಕುಮಾರಸ್ವಾಮಿಗಳ ದು(ದೂ)ರಾಲೋಚನೆ ಏನೇ ಇರಲಿ, ಜೆಡಿಎಸ್ ಸ್ಪರ್ಧೆಯಿಂದ ಲಾಭ ಕಾಂಗ್ರೆಸಿಗೋ ಅಥವಾ ಬಿಜೆಪಿಗೋ ಎಂದು ಈಗಲೇ ಹೇಳಲಿಕ್ಕಾಗದು. ಈ ಲಾಸ್-ಲಾಭದ ನಿರ್ಧಾರವೇನಿದ್ದರೂ ಮತದಾನ ಹತ್ತಿರ ಬಂದಾಗಷ್ಟೇ!

ಜಯಪ್ರಕಾಶ್ ಹೆಗ್ಡೆ ಹೇಗೆ?

ಉಡುಪಿ-ಚಿಕ್ಕಮಗಳೂರಲ್ಲಿ ಮನೆ ಮಗನಂತಿರುವ ಕಾಂಗ್ರೆಸ್‌ನ ಜಯಪ್ರಕಾಶ್ ಹೆಗ್ಡೆ ಬಂಟರ ನಾಯಕ. ಕಳೆದ 2009 ರ ಪಾರ್ಲಿಮೆಂಟ್ ಇಲೆಕ್ಷನ್‌ನ ಹೊತ್ತಲ್ಲಿ ಬಲಾಢ್ಯ ಡೀವಿಯ ಎದುರು ಬರೀ 27,000 ಮತದಂತರದಿಂದ ಸೋತ ಧೀರನೀತ. ಡೀವಿ ಮೂರ್‍ನಾಲ್ಕು ತಿಂಗಳಿಂದ ಕ್ಷೇತ್ರ ಹದಗೊಳಿಸಿಕೊಂಡಿದ್ದರೆ, ಮತದಾನಕ್ಕೆ ಬರೀ ಹದಿನೈದೇ ದಿನವಿದ್ದಾಗ ರಣರಂಗ ಪ್ರವೇಶಿಸಿದ್ದ ಜೆಪಿ (ಜಯಪ್ರಕಾಶ್) ಆತನ ಬೆವರಿಳಿಸಿ ಬಿಟ್ಟಿದ್ದರು. ಬ್ರಹ್ಮಾವರ ಕ್ಷೇತ್ರದಿಂದ ಸತತ ಮೂರು ಸಲ ಶಾಸಕನಾಗಿದ್ದ ಜೆಪಿಗೆ ಇಲೆಕ್ಷನ್ ಎದುರಿಸುವ ಕಲೆ, ಬಿಜೆಪಿಯ ಕಮ್ಯುನಲ್ ಹಿಕಮತ್ತು ಕೌಂಟರ್ ಮಾಡುವ ಪ್ರತಿತಂತ್ರಗಾರಿಕೆ ಕರಗತವಾಗಿ ಹೋಗಿದೆ. ಅದರಲ್ಲೂ ಎರಡು ಬಾರಿ ಪಕ್ಷೇತರ ಶಾಸಕನಾಗಿ ಗೆದ್ದುಬಂದಿದ್ದ ಜೆಪಿ ಜನಪರ ಕೆಲಸಗಾರ ಎಂಬುದರಲ್ಲಿ ಎರಡು ಮಾತಿಲ್ಲ.

ವಿಜಯಾ ಬ್ಯಾಂಕಿನ ನೌಕರನಾಗಿದ್ದ ಈತ ಅಲ್ಲಿ ನೌಕರರ ಸಂಘದ ಅಧ್ಯಕ್ಷ ಆಗಿದ್ದರು. ಆ ಬಳಿಕ ಜನತಾ ಪರಿವಾರದ ಮೂಲಕ ರಾಜಕಾರಣ ಶುರುಹಚ್ಚಿಕೊಂಡಿದ್ದ ಜೆಪಿ ಬ್ರಹ್ಮಾವರದಲ್ಲಿ ಮೊದಲೆರಡು ಬಾರಿ ಸೋತು ಹೋಗಿದ್ದರು. ಆದರೂ ಆತ ಜನಸಂಪರ್ಕ ಬಿಡಲಿಲ್ಲ, 1994 ರಲ್ಲಿ ಜನತಾ ದಳದಿಂದ ಅಸೆಂಬ್ಲಿ ಪ್ರವೇಶಿಸಿದ ಜೆಪಿ ಮೊದಲ ಅವಧಿಯಲ್ಲೇ ಮಂತ್ರಿಯಾದ ಅದೃಷ್ಟಶಾಲಿ. ಜನಸಾಮಾನ್ಯರ ಕಷ್ಟಸುಖಕ್ಕೆ ಸ್ಪಂದಿಸುವ ಜನನಾಯಕನಾಗಿ ರೂಪುಗೊಂಡ ಜೆಪಿ ಶಾಸಕನಾಗಿ-ಮಂತ್ರಿಯಾಗಿ ಒಂದಿಷ್ಟು ಒಳ್ಳೆಯ ಕೆಲಸ-ಕಾರ್ಯ ಮಾಡಿ ಜನಪ್ರಿಯರಾಗಿದ್ದರು.


ಉಡುಪಿ-ಚಿಕ್ಕಮಗಳೂರನ್ನು ಎತ್ತಲಾದೀತೇ ಡೀವಿ?

ಬಂದರು-ಮೀನುಗಾರಿಕೆ ಮಂತ್ರಿಯಾಗಿ-ಜಿಲ್ಲಾ ಉಸ್ತುವಾರಿ ಮಂತ್ರಿಯಾಗಿ ಆತ ಒಳ್ಳೆಯದು ಮಾಡಲಾಗದಿದ್ದಾಗ ಕೆಟ್ಟದ್ದಂತೂ ಮಾಡಲಿಲ್ಲ.

ಮೀನುಗಾರಿಕಾ ಬಂದರು-ಜೆಟ್ಟಿ ನಿರ್ಮಾಣ, ಮೀನುಗಾರರಿಗೆ ಮನೆ, ಸಾಲ ಬಲೆ ಮುಂತಾದ ಸೌಲಭ್ಯಗಳನ್ನು ಒದಗಿಸಲು ಜೆಪಿ ಪ್ರಯತ್ನಿಸಿದ್ದರು. ಇವತ್ತಿಗೂ ಕರಾವಳಿಯ ಮೀನುಗಾರರಿಗೆ ಜೆಪಿಯೆಂದರೆ ಪ್ರೀತಿ-ವಿಶ್ವಾಸ. ಆತ ಪ್ರತಿನಿಧಿಸುತ್ತಿದ್ದ ಬ್ರಹ್ಮಾವರ ಅತೀ ಹಿಂದುಳಿದ ಗುಡ್ಡಗಾಡು ಕ್ಷೇತ್ರವಾಗಿತ್ತು. ಅಂಥ ಕ್ಷೇತ್ರದಲ್ಲಿ ಪ್ರಗತಿಯ ಮೈಲುಗಲ್ಲು ನೆಟ್ಟ ಸಾಹಸ ಜೆಪಿಯದು! ಹೀಗಾಗಿ ಜನತಾದಳ ಒಡೆದಾಗ ಆತ ಪಕ್ಷೇತರರಾಗಿ ಸ್ಪರ್ಧಿಸಿದರೂ ಬ್ರಹ್ಮಾವರದ ಜನತೆ ಕೈಬಿಡಲಿಲ್ಲ, ಒಂದಲ್ಲ ಎರಡು ಬಾರಿ ಆತ ಪಕ್ಷೇತರನಾಗಿ ಶಾಸಕನಾದರು. ಜೆಪಿ ಕ್ಷೇತ್ರ-ಜಿಲ್ಲೆ ಬಗ್ಗೆಯಷ್ಟೇ ಅಲ್ಲ, ಇಡೀ ರಾಜ್ಯದ ಆಗು-ಹೋಗುಗಳ ಬಗ್ಗೆಯೂ ಸದಾ ಎಚ್ಚರದಿಂದಿರುವ ರಾಜಕಾರಣಿ. ಇದಕ್ಕೆ ಆತ ಅಸೆಂಬ್ಲಿಯಲ್ಲಿ ನಡೆಯುತ್ತಿದ್ದ ಜನಪರ ಡಿಬೇಟ್‌ನಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದುದೇ ಸಾಕ್ಷಿ. ಮೂರನೇ ಬಾರಿ ಪಕ್ಷೇತರನಾಗಿ ಗೆದ್ದಾಗ ಜೆಪಿ ಅಸೆಂಬ್ಲಿಯ ಮೊದಲ ಸಾಲಿನ ವಿರೋಧಿ ಧುರೀಣನಾಗಿದ್ದರು. ಇಡೀ ದಿನ ಕಲಾಪದಲ್ಲಿ ಭಾಗವಹಿಸಿ ಆಳುವವರು ದಾರಿ ತಪ್ಪಿದಾಗ ಸಾತ್ವಿಕ ಸಿಟ್ಟಿನಿಂದ ಗುಡುಗುತ್ತಿದ್ದರು. ಅತ್ಯುತ್ತಮ ಸಂಸದೀಯ ಪಟುವಾಗಿ ರಾಜ್ಯಕ್ಕೆ ಪರಿಚಿತರಾಗಿದ್ದರು.

ಜೆಪಿಯ ಕೆಲಸ-ಕಾರ್ಯ-ಜನ ಪರ ನಡೆ-ನುಡಿಗಳ ಪ್ರೊಫೈಲ್ ನೋಡಿದರೆ ಆತ ಪಾರ್ಲಿಮೆಂಟ್ ಸದಸ್ಯನಾಗಲು ಅರ್ಹತೆಗಳಿರುವಾತನೆಂದು ಗೊತ್ತಾಗುತ್ತದೆ. ಆತ ಸಂಸದನಾದರೆ ಡೀವಿಯಂತೆ ಅಥವಾ ಅದಕ್ಕಿಂತ ಹಿಂದೆ ಚಿಕ್ಕಮಗಳೂರು ಎಂಪಿಯಾಗಿದ್ದ ಬಿಜೆಪಿಯ ಶ್ರೀಕಂಠಪ್ಪನಂತೆ ಖಂಡಿತ ನಿಷ್ಕ್ರಿಯ-ಜೋಭದ್ರಗೇಡಿ-ಮತಾಂಧ ಪೀಡೆಯಾಗಲಾರ. ಬದಲಿಗೆ ಕ್ಷೇತ್ರದ ಸಮಸ್ಯೆಗಳ ಜೊತೆಜೊತೆಗೇ ರಾಜ್ಯದ ನೋವು-ನಷ್ಟಗಳನ್ನು ಸಂಸತ್ತಿನಲ್ಲಿ ಸಮರ್ಥವಾಗಿ ಮಂಡಿಸುವ ಕ್ರಿಯಾಶೀಲ-ಜವಾಬ್ದಾರಿಯ ಸಂಸದನಾಗಬಲ್ಲ! ಎಂಪಿಗಿರಿಯ ಹೊಣೆಗಾರಿಕೆಯ ಅರಿವಿರುವ, ರಾಜಕೀಯ ಜಾಣ್ಮೆ, ಕೆಲಸ ಮಾಡುವ ತುಡಿತ ಮತ್ತು ವಿವಿಧ ಸ್ತರದ ಜನಪ್ರತಿನಿಧಿಯಾಗಿ ಅನುಭವ ಹೊಂದಿರುವ ಜೆಪಿ ಬಿಜೆಪಿ ಕ್ಯಾಂಡಿಡೇಟ್ ಸುನೀಲ್‌ಕುಮಾರ್ ಎಂಬ ಉಂಡಾಡಿಗುಂಡಣ್ಣನಿಗಿಂತ ಸಾವಿರ ಪಾಲು ಬೆಟರ್!


ಭಯೋತ್ಪಾದಕ ಭಜರಂಗಿ ಸುನಿಲ್ ಸಮಾಚಾರ

ಸಂಘಪರಿವಾರದ ಸೂತ್ರಧಾರರು ಬಿಜೆಪಿಯ ಹುರಿಯಾಳಾಗಿಸಿರುವ ಸುನಿಲ್ ಕುಮಾರ್ ಫರ್‌ಫೆಕ್ಟ್ ಚೆಡ್ಡಿ-ಕೇಸರಿ ಕೇಡರ್! ಕನಿಷ್ಠ ಮನುಷ್ಯತ್ವವೂ ಇಲ್ಲದ ಈ ಮತಾಂಧ ಮನೆಮುರುಕ ಪ್ರವರ್ಧಮಾನಕ್ಕೆ ಬಂದಿದ್ದೇ ಚಿಕ್ಕಮಗಳೂರಿನ ದಗಲುಬಾಜಿನ ದತ್ತಮಾಲೆ ಅಭಿಯಾನದಿಂದ! ಭಾವೈಕ್ಯತೆಯ ಬಾಬಾಬುಡನ್‌ಗಿರಿಯನ್ನು ಹಿಂದೂತ್ವದ ದತ್ತ ಅವಧೂತನ ಅಡ್ಡೆಯಾಗಿ ಮಾಡಲು ಈತ ಮಾಡಿದ ಪಾತಕ ಹೇಳತೀರದು. ಈ ದಗಾಕೋರ ಸುನಿಲ್ ಇವತ್ತಿಗೂ ಉಡುಪಿ ಮತ್ತು ಚಿಕ್ಕಮಗಳೂರು ಎರಡೂ ಜಿಲ್ಲೆಯ ಜನರನ್ನು ನೆಮ್ಮದಿಯಿಂದ ಬದುಕಲು ಬಿಟ್ಟವನೇ ಅಲ್ಲ, ಸಂಘ ಪರಿವಾರ ಪ್ರಣೀತ ಧರ್ಮಕಾರಣದ ಜೊತೆಗೇ ಜಾತಿ (ಬಿಲ್ಲವ)


ಜಯಪ್ರಕಾಶ್ ಹೆಗ್ಡೆ ಮತ್ತು ಕಾಂಗ್ರೆಸ್ ನಾಯಕರು



ಭಜರಂಗಿ ಸುನಿಲ್ ಜೊತೆ ಚೆಡ್ಡಿ ನಾಯಕರು

ರ್ಣಾ ಸಮೀಕರಿಸಿಕೊಂಡಿರುವ ಈ
ಗೆ ಎಂಪಿಗಿರಿಯಂಥ ವಜನಿನ
ಲಿ, ಕನಿಷ್ಠ ಗಾಮು ಪಂಚಾಯ್ತಿ
ಕಗೂ ಯೋಗ್ಯತೆಯಿಲ್ಲ.
ತಾಂಧ ಮಾತುಗಾರಿಕೆ ಬಿಟ್ಟರೆ ಈ
ಭಂಡನಿಗೆ ಮತ್ತೇನೂ ಗೊತ್ತಿಲ್ಲ!
ಪರಿವಾರದ ಬಂಡಲ್
ರಣ ಕಂಡು ತಲೆ ರೋಸಿಹೋಗಿದ್ದ
ದ ಜನರ ಮಧ್ಯೆ ಜಾತೀಯತೆಯ
ಪ್ರಯೋಗಿಸಿ ಆತ ಒಮ್ಮೆ ಅಲ್ಲಿಂದ
ಆಗಿಬಿಟ್ಟಿದ್ದ. ಕ್ಷೇತ್ರದ
ಂಖ್ಯಾತರಾದ ಬಿಲ್ಲವರಲ್ಲಿ 'ಜಾತಿ
ಗೆದ್ದಿದ್ದ ಸುನಿಲ್‌ನ ಬಣ್ಣ
ನಾದ ಕೆಲವೇ ದಿನದಲ್ಲಿ ಬಯಲಾಗಿ
ತ್ತು. ಎದುರು ಕಂಡದ್ದೆಲ್ಲ ನುಂಗಿ
ಕುಡಿದ ಈತನ ಚಹರೆ
ತಿರಲೇ ಇಲ್ಲ. ಪಕ್ಕಾ
ಣನಂತೆ ವರ್ತಿಸುತ್ತಿದ್ದ ಈತನ 'ಆಟ'
ಅಬ್ರಾಹ್ಮಣರಿಗೆ ಭ್ರಮನಿರಸನವಾಗಿ
ತ್ತು! ಸುನಿಲ್‌ನ ಹುಟ್ಟಿನ ಗುಟ್ಟು
ತ್ತು. ಈತನ ತಾಯಿ ಬಿಲ್ಲವ
) ಸಮುದಾಯದವರಾಗಿದ್ದರೆ, ತಂದೆ
ಬ್ರಾಹ್ಮಣ. ಹೀಗಾಗಿ ಈ
ಖಕೋರ ಸುನಿಲ್ ಶಾಸಕನಾಗಲು
ಯ ಶೂದ್ರತ್ವ ಬಳಸಿಕೊಂಡರೆ,
ಮೇಲೆ ಅಪ್ಪನ ಬ್ರಾಹ್ಮಣಿಕೆಯಲ್ಲಿ
ರು ನಡೆಸಿದ್ದ!
ಂದೊತ್ತಿನ ಬುತ್ತಿ ತಿನ್ನುವ ಆರೆಸ್ಸೆಸ್
ಆಗಿದ್ದ ಸುನಿಲ್ ಶಾಸಕನಾಗಿದ್ದೇ
ಡುದರ್ ಬದಲಾಯಿಸಿಕೊಂಡು
ಸರ್ಕಾರಿ ಕಾಮಗಾರಿಗಳಲ್ಲಿ
ಟೇಜು, ಕಿಕ್‌ಬ್ಯಾಕ್ ಪುಷ್ಕಳವಾಗಿ
ಮಾಮೂಲಿ ಕೊಡದ
ರಿ-ಕಂಟ್ರಾಕ್ಟರ್‌ಗಳ ಸತಾಯಿಸಿದ.
ಡು-ನೋಡುತ್ತಿದ್ದಂತೆಯೇ ಹತ್ತಾರು
ಳ ಓನರ್ ಆಗಿಹೋದ.
ಯ ಕಬ್ಬಿಣದ ಅದಿರು ಸಾಗಿಸುವ
ಮಾಫಿಯಾದ ಸದಸ್ಯನಾಗಿ
ತ. ಕಾರ್ಕಳದ ಜನರ
-ಬೇಡಗಳನ್ನೆಲ್ಲ ಕಡೆಗಣಿಸಿ
ಧ ಮಸಲತ್ತು, ಕಾಸು ಕೂಡಿಸುವ
ತ್ತಿನಲ್ಲಿ ತಲ್ಲೀನನಾಗಿ ಹೋದ.
ಾಮವಾಗಿ ಕಳೆದ ಅಸೆಂಬ್ಲಿ
ನ್ ಹೊತ್ತಲ್ಲಿ ಇಡೀ ಕರಾವಳಿಯಲ್ಲಿ
ಗಾಳಿ ಬೀಸಿದರೂ ಈತನೊಬ್ಬನೇ
ಮುಕ್ಕಬೇಕಾಗಿ ಬಂತು!!
ಕ್ತ ಬೀಜಾಸುರ ವಂಶಸ್ಥ ಸುನಿಲ್
ರ್ ಕಳಪೆ ದರ್ಜೆಯ ಗೂಂಡಾ!
ಾರ-ಸಜ್ಜನಿಕೆ-ಮಾನವೀಯತೆ
ೇನೆಂದೇ ಈತನಿಗೆ ಗೊತ್ತಿಲ್ಲ.
ಲು ಎಷ್ಟು ಚಂದ
ತ್ತಾನೋ ಅಷ್ಟೇ ವಿಕಾರ ಈತನ
ಧರ್ಮ! ಬಿಜೆಪಿಯ ರಾಜ್ಯ
ಮೋರ್ಚಾದ ಅಧ್ಯಕ್ಷನಾಗಿರುವ
ಅಂಕೋಲೆಯಲ್ಲೊಂದು ಬೀಚ್
ರ್ಟ್ ಮಾಡಿಕೊಂಡಿದ್ದಾನೆ. ಸರ್ಕಾರಿ
ನ್ನೆಲ್ಲ ಕಬಳಿಸಿ ರೆಸಾರ್ಟ್
ನ್ನು ಈತ ನಡೆಸುತ್ತಿದ್ದಾನೆ.
! ಬಿಜೆಪಿಯ ಪವರ್‌ಫುಲ್
ಿಯ ಅಕ್ರಮ-ಅನ್ಯಾಯಕ್ಕೆ
ಕುವ ತಾಕತ್ತು ಯಾರಿಗಿದೆ?
ತ್ತದ ಈ ಹಿರೇಮಣಿಗೆ
ಪಿ-ಚಿಕ್ಕಮಗಳೂರು ಕ್ಷೇತ್ರದ
ೀಳಿಕ ಪರಿಚಯವೇ ಇಲ್ಲ.
ಕಾಫಿ-ಅಡಿಕೆ-ಮೀನು-ಭತ್ತದ
ರರ ಸಮಸ್ಯೆ-ಸಂಕಷ್ಟಗಳ ಅರಿವಿಲ್ಲ.
ುವುದು ಹಿಂದೂತ್ವ ಹಿಡನ್ ಅಜೆಂಡಾ!
ೂ ಹೆಣ್ಣಿನ ಪ್ರಾಣ-ಗೋಪ್ರಾಣದ ಹೆಸರಲ್ಲಿ
ಸು ರಾಜಕಾರಣ ಮಾತ್ರ!! ಇಂಥವನು
ಾದರೆ ಏನಾದೀತು?
ಿಲ್ ಕುಮಾರ್ ಅದೆಂಥ ಅನಾಹುತಕಾರಿ
ುದೆಂದರೆ ಕಾರ್ಕಳ ಭಾಗದ ಖತರ್‌ನಾಕ್
ಕಳ್ಳ ಸಾಗಾಣಿಕೆದಾರರೆಲ್ಲ ಈತನ
ಲಕರು. ಉಡುಪಿಯ ಕಚ್ಚೆಹರುಕ ಬಿಜೆಪಿ
ರಘುಪತಿ ಭಟ್ಟ ಈತನ ಜೀವದ ಗೆಳೆಯ.
ಮೋಜು-ಮಸ್ತಿ ಅಡ್ಡೆಗಳ ಗಿರಾಕಿ. ರಘುಪತಿ
ಹೆಂಡತಿ ಪದ್ಮಪ್ರಿಯಾ ಭಟ್‌ಳ











ಸಂಶಯಾಸ್ಪದ ಸಾವಿನಲ್ಲಿ ಸುನಿಲ್‌ನ ಪಾತ್ರವೂ ಇರುವುದು ಇಡೀ ಲೋಕಕ್ಕೇ ಗೊತ್ತಿರುವ ಸತ್ಯ. ಇವತ್ತಿಗೂ ಪದ್ಮಪ್ರಿಯಾ ಸಾವಿನ ತನಿಖೆ ನಡೆಸುತ್ತಿರುವ ಸಿಓಡಿ ವರದಿ ಬರದಂತೆ ಈ ಸುನಿಲ್-ಭಟ್ಟ ಕರಾಮತ್ತು ನಡೆಸುತ್ತಿದ್ದಾರೆ. ಇಂಥ ಕರ್ಮಗೇಡಿಗೀಗ ಎಂಪಿ ಆಗುವ ಹುಕ್ಕಿ ಬಂದಿದೆ. ಆದರೆ ಈ ಅಯೋಗ್ಯನಿಗೆ ಟಿಕೆಟ್ ಕೊಟ್ಟಿರುವ ಬಗ್ಗೆ ಬಿಜೆಪಿಯಲ್ಲೇ ಅಸಮಾಧಾನ ಎದ್ದಿದೆ. ಕರಾವಳಿ ಬಿಜೆಪಿ ಡಾನ್ ಕಲ್ಲಡ್ಕ ಭಟ್ಟನಿಗೂ ಸುನಿಲ್‌ಗೆ ಅಭ್ಯರ್ಥಿ ಮಾಡುವ ಮನಸ್ಸಿರಲಿಲ್ಲ. ಗತಿಯಿಲ್ಲದೆ ಆರ್‌ಎಸ್‌ಎಸ್ ಪುರೋಹಿತರು ಸಮ್ಮತಿ ಕೊಟ್ಟಿದ್ದಾರೆ. ಬಿಜೆಪಿಗೆ ಸರಿಯಾದ ಕ್ಯಾಂಡಿಡೇಟೇ ಕ್ಷೇತ್ರದಲ್ಲಿ ಇರಲಿಲ್ಲ. ಕಾಂಗ್ರೆಸ್‌ನ ಮಾಜಿ ಎಂಪಿ ವಿನಯಕುಮಾರ್ ಸೊರಕೆ ಎಂಬ ಬಿಲ್ಲವರ ನಾಯಕನಿಗೆ ಭೂತನಿಗೆ ಗಾಳ ಹಾಕಿದ್ದ ಸಂಘಪರಿವಾರದ ಯಜಮಾನರು, ಅದು ವಿಫಲವಾದಾಗ ಅನಿವಾರ್ಯವಾಗಿ ಸೋಗಲಾಡಿ ಸುನಿಲ್‌ಗೆ ಛಾನ್ಸ್ ಕೊಟ್ಟಿದ್ದಾರೆ.

'ಪಿಚ್' ಪುರಾಣ

ಎತ್ತಿಂದೆತ್ತ ಲೆಕ್ಕ ಹಾಕಿ ತಾಳೆ ನೋಡಿದರೂ ಕಾಂಗ್ರೆಸ್ ಉಮೇದುವಾರ ಜಯಪ್ರಕಾಶ್ ಹೆಗ್ಡೆಯೇ ಚೆಡ್ಡಿಗಳ ಧರ್ಮಕಾರಣದಿಂದ ಬರಡು ಬಿದ್ದಿರುವ ಚಿಕ್ಕಮಗಳೂರು-ಉಡುಪಿ ಜಿಲ್ಲೆಯ ಎಂಪಿಯಾಗುವ ಜರೂರತ್ತಿದೆ. ಬಿಜೆಪಿಯ ಸುನಿಲ್ ಜನರ ನಿದ್ದೆಗೆಡಿಸುವ ಕೋಮು ಕಿತಾಪತಿಗಾರನಾದರೆ, ಜೆಪಿ ಸೌಹಾರ್ದತೆ ಬಯಸುವ ಸೆಕ್ಯುಲರ್ ಮನುಷ್ಯ. ವ್ಯಕ್ತಿತ್ವದಲ್ಲೂ ಜೆಪಿ-ಸುನಿಲ್‌ಗೆ ಅಜಗಜಾಂತರ. ಜೆಪಿ ಜಂಟಲ್‌ಮ್ಯಾನ್. ಸುನಿಲ್‌ಗೆ ಕನಿಷ್ಠ ನಾಗರಿಕ ಶಿಷ್ಟಾಚಾರ-ನೈತಿಕ ಪ್ರಜ್ಞೆ-ಲಜ್ಜೆಯೂ ಇಲ್ಲ. ಮೋಜು-ಮಸ್ತಿಯ-ಸ್ವಾರ್ಥ ಲಾಲಸೆಯಲ್ಲಿ ಕಾಲಕಳೆವ ಸುನಿಲ್‌ಗಿಂತ ಕ್ಷೇತ್ರದ ಕ್ಷೇಮಾಭಿವೃದ್ಧಿಯ ಪರಿಕಲ್ಪನೆ ಇರುವ ಜಯಪ್ರಕಾಶ್ ಹೆಗ್ಡೆಯೇ ಬೆಟರ್!

ಈ ಕ್ಷೇತ್ರ ಕರಾವಳಿ-ಮಲೆನಾಡು ಮತ್ತು ಬಯಲುಸೀಮೆಗಳ ಸಮ್ಮಿಶ್ರಣ. ಕರಾವಳಿಯಲ್ಲಿ ಬಿಲ್ಲವ (ಈಡಿಗ), ಬಂಟ, ಮೀನುಗಾರರ ಪ್ರಾಬಲ್ಯವಿದ್ದರೆ, ಮಲೆನಾಡು-ಬಯಲುಸೀಮೆಯಲ್ಲಿ ಲಿಂಗಾಯತ, ಒಕ್ಕಲಿಗರು ಬಲಾಢ್ಯರು. ಕರಾವಳಿಯ ಬಂಟರ ಹಲವು ಕುಟುಂಬಗಳು ಕೊಪ್ಪ, ಶೃಂಗೇರಿ, ಮೂಡಿಗೆರೆಗೆ ವಲಸೆ ಬಂದು ಕಾಫಿ ಪ್ಲಾಂಟೇಷನ್ ಮಾಡಿಕೊಂಡಿದ್ದಾರೆ. ಈ ಪ್ಲಾಂಟೇಷನ್ ಧಣಿಗಳಿಗೆ ತಮ್ಮ ತೋಟದ ಕಾರ್ಮಿಕರ ಮೇಲೆ ಪ್ರಭಾವ ಬೀರುವ 'ಶಕ್ತಿ' ಇದೆ. ಈ ಬಂಟರು ಇಡೀ ಕ್ಷೇತ್ರದಲ್ಲಿ ಎರಡು ಲಕ್ಷಕ್ಕಿಂತ ಹೆಚ್ಚಿದ್ದಾರೆ.

ಕಾಂಗ್ರೆಸ್ ಕ್ಯಾಂಡಿಡೇಟ್ ಜೆಪಿ ಈ ಬಂಟ ಸಮುದಾಯದ ವರ್ಚಸ್ವಿ ನಾಯಕ. ಹಾಗೆ ಆತ ಇಲೆಕ್ಷನ್‌ಗಳನ್ನು ಎದುರಿಸುವ ಸಮರ ತಂತ್ರ ಪ್ರವೀಣನೂ ಹೌದು. ಬಿಜೆಪಿಯ ಸುನಿಲ್ ಕುಮಾರ ಎಂಬ ಅರೆಬ್ರಾಹ್ಮಣ ತಾನು ಸಂಪೂರ್ಣ ಬಿಲ್ಲವ ಎನ್ನುತ್ತ ಆ ಸಮುದಾಯದ ಓಟುಗಳನ್ನು ಸಾರಾಸಗಟಾಗಿ ಪಡೆಯುವ ಹಿಕಮತ್ತು ಮಾಡುತ್ತಿದ್ದಾನೆ. ಈ ಜಾತಿಯ ಎರಡು ಲಕ್ಷದಷ್ಟು ಮತಗಳಿವೆ. ಜೊತೆಗೆ ಅಧಿಕಾರಸ್ಥ ಪಕ್ಷವಾದ್ದರಿಂದ ಬಿಜೆಪಿ ಬಳಿ ಕೊಪ್ಪರಿಗೆ ಕಳ್ಳ ಕಾಸಿದೆ; ಮತಾಂಧ ಮಸಲತ್ತಲ್ಲಿ ಪಳಗಿದ ಚೆಡ್ಡಿ ಪಡೆಯಿದೆ. ಕರಾವಳಿಯಲ್ಲಿ ಪಬ್ ದಾಳಿ, ಚರ್ಚ್ ದಾಳಿ, ರೇವ್ ಪಾರ್ಟಿ, ಬ್ಲೂಫಿಲಂ ಛಾನ್ಗಡಿ, ಅನೈತಿಕ ಆಪರೇಷನ್ ಕಮಲ, ಯಡ್ಡಿ ರಾದ್ಧಾಂತದಿಂದ ಸಂಘ ಪರಿವಾರದ ಕಳೆಗುಂದಿದರೂ ಮತಾಂಧ ನೆಲೆ ಇದ್ದೇ ಇದೆ! ಸಿಎಂ ಡೀವಿಗಂತೂ ತಾನೇ ಪ್ರತಿನಿಧಿಸಿದ ಕ್ಷೇತ್ರದಲ್ಲಿ ಗೆಲ್ಲೋದು 'ಜೀವನ್ಮರಣ'ದ ಹೋರಾಟ. ಯಡ್ಡಿ ಅಡ್ಡಗಾಲಿನ ನಡುವೆಯೂ ಗೆಲ್ಲಬೇಕಾದ ಸಂಕಟ ಡೀವಿಗೆ. ಹೀಗಾಗಿ ಈ ಉಪಚುನಾವಣೆ ಯುದ್ಧಕ್ಕೆ ರೋಚಕ ಆಯಾಮ ಬಂದುಬಿಟ್ಟಿದೆ!

ಕ್ಷೇತ್ರದಲ್ಲಿನ ಜಾತಿ ಸಮೀಕರಣ, ಕ್ಯಾಂಡಿಡೇಟ್‌ಗಳ ಕ್ಯಾಲಿಬರ್ ಗಮನಿಸಿದರೆ, ಕಾಂಗ್ರೆಸ್‌ನ ಜೆಪಿಗೇ ಗೆಲ್ಲುವ ಅವಕಾಶ ಜಾಸ್ತಿ ಅನ್ನಿಸ್ತದೆ. ಸ್ವಜಾತಿ ಬಂಟರ ಮತದೊಂದಿಗೆ ಜೆಪಿ ಕರಾವಳಿಯ ಬೆಸ್ತರ ಓಟೂ ಗಿಟ್ಟಿಸಲಿದ್ದಾರೆ. ಆತ ಮೀನುಗಾರಿಕಾ ಮಂತ್ರಿಯಾಗಿದ್ದಾಗ ನೆರವಾದದ್ದನ್ನು ಮೀನುಗಾರರು ಇವತ್ತಿಗೂ ಮರೆತಿಲ್ಲ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಾಂಗ್ರೆಸ್‌ನ ಸಾಂಪ್ರದಾಯಿಕ ಓಟು ಮತ್ತು ಅಲ್ಪಸಂಖ್ಯಾತರ ಮತವಂತೂ ಬರುತ್ತದೆ. ಮಲೆನಾಡು-ಬಯಲು ಸೀಮೆಯಲ್ಲಿ ಒಕ್ಕಲಿಗ ಮತ ಎರಡು ಲಕ್ಷದಷ್ಟಿದೆ. ಈ ಮತ 'ದೇವಪಿತೃ' ದೇವೇಗೌಡರ ರಹಸ್ಯ ಸಹಕಾರದಿಂದ ಪಡೆಯುವ ಲೆಕ್ಕಾಚಾರ ಸಿಎಂ ಡೀವಿಯದು. ಯಡ್ಡಿಯ ಹೊಟ್ಟೆಕಿಚ್ಚಿಂದ ಲಿಂಗಾಯತರ ಮತ ಬರುವ ಬಗ್ಗೆ ಬಿಜೆಪಿ ಭೂಪರಿಗೆ ಅನುಮಾನವಿದೆ. ಇದೂ ಎರಡು ಲಕ್ಷದಷ್ಟಿದೆ. ಕರಾವಳಿಯ ಬಿಜೆಪಿ ಓಟರ್ಸ್‌ಗಳಾದ ಬ್ರಾಹ್ಮಣರು ಮತ್ತು ಕೊಂಕಣಿಗರೂ ಈ ಬಾರಿ ಕಾಂಗ್ರೆಸ್‌ನ ಜೆಪಿಗೆ ಒಲಿವ ಯೋಚನೆಯಲ್ಲಿದ್ದಾರೆ. ಇದು ಬಿಜೆಪಿಗೆ ಮೈನಸ್.

ಕ್ಷೇತ್ರದಲ್ಲಿ ಬಿಜೆಪಿಯ ಏಳು ಶಾಸಕರಿದ್ದರೂ ಸುನಿಲ್‌ಗೆ ಅದರಿಂದ ಪ್ಲಸ್ ಆಗುವ ಲಕ್ಷಣಗಳಿಲ್ಲ. ಶಾಸಕರೆಲ್ಲ ಅಹಂಕಾರ-ಅಕ್ರಮ-ಅನ್ಯಾಯ-ಅವಾಂತರಗಳಿಂದ ಜನರ ಸಿಟ್ಟಿಗೆ ತುತ್ತಾಗಿದ್ದಾರೆ. ಕಳೆದ ಬಾರಿ ಬಿಜೆಪಿಗೆ ಕೆಲಸ ಮಾಡಿದ್ದ ದಕ್ಷಿಣ ಕನ್ನಡ ಡಿಸಿಸಿ ಬ್ಯಾಂಕ್ ಅಧ್ಯಕ್ಷ ರಾಜೇಂದ್ರ ಕುಮಾರನಂಥವರು ಈ ಬಾರಿ ಕಾಂಗ್ರೆಸ್ ಪರ ನಿಂತಿದ್ದಾರೆ. ಕರಾವಳಿಯಲ್ಲಿ ಹಿಂದೂ ಹೆಣ್ಣಿನ ಮಾನ-ಗೋ ಪ್ರಾಣ-ಅನೈತಿಕ ಪೊಲೀಸ್‌ಗಿರಿ ಅಸ್ತ್ರಗಳೇ ತಿರುಗುಬಾಣವಾಗಿದೆ ಚೆಡ್ಡಿ ಚತುರರಿಗೆ. ಇತ್ತ ಮಲೆನಾಡಿನಲ್ಲಿ ದತ್ತ ಅವಧೂತನ ಕೃಪೆಯೂ ಇಲ್ಲದಂತಾಗಿದೆ. ಭಜರಂಗಿ-ಶ್ರೀರಾಮ ಸೇನೆಗಳ ದತ್ತನ ವಾರಸುದಾರಿಕೆಗಾಗಿ ಕ್ಯಾತೆ ತೆಗೆದು ಕಚ್ಚಾಡುವುದು ಬಿಜೆಪಿಗೆ ದೊಡ್ಡ ಡ್ಯಾಮೇಜ್ ಮಾಡಿದೆ. ಕಳೆದ ಅಸೆಂಬ್ಲಿ ಅಥವಾ ಪಾರ್ಲಿಮೆಂಟ್ ಚುನಾವಣೆ ಹೊತ್ತಲ್ಲಿದ್ದ ಅನುಕೂಲ ಬಿಜೆಪಿಗೆ ಈಗಿಲ್ಲ.

ಕರಾವಳಿಯ ಉಡುಪಿ, ಕಾಪು, ಕುಂದಾಪುರದಲ್ಲಿ ಬಿಜೆಪಿಗೆ ಈ ಬಾರಿ ಹಿಂದಿನದಕ್ಕಿಂತ ಹೆಚ್ಚು ಹಾನಿ ಗ್ಯಾರಂಟಿ. ಉಡುಪಿಯಲ್ಲಿ ಶಾಸಕ ಭಟ್ಟನ ಹೆಂಡತಿಯ ಹತ್ಯೆ, ರೇವ್ ಪಾರ್ಟಿ, ರಂಗೀಲಾ ರಗಳೆ, ಭ್ರಷ್ಟಾಚಾರದಿಂದ ಬಿಜೆಪಿ ಬರ್ಬಾದ್ ಆಗಿದೆ. ಕುಂದಾಪುರದಲ್ಲಿ ಹಾಲಾಡಿ ಶ್ರೀನಿವಾಸ್ ಶೆಟ್ಟಿಗೆ ಬಿಜೆಪಿ ಮೋಸ ಮಾಡಿದೆ ಎಂಬ ಭಾವನೆಯಿದೆ. ಈ ಸಲ ಇದು ಕಾಂಗ್ರೆಸ್‌ನ ಜೆಪಿಗೆ ಸ್ವಜಾತಿ ಬಂಟರ ಮತ ಪಡೆಯಲು ಅನುಕೂಲ ಮಾಡಿಕೊಡಲಿದೆ. ಕಾರ್ಕಳದಲ್ಲಿ ಬಿಜೆಪಿಗೆ ಒಂದಿಷ್ಟು ಮತ ಬರಲಿದೆ. ಅದಕ್ಕೆ ಕಾರಣ ಸುನಿಲ್ ಸ್ಥಳೀಯನೆಂಬುದು. ಆದರೆ ಕೇಂದ್ರ ಮಂತ್ರಿ ವೀರಪ್ಪ ಮೊಯ್ಲಿ ಪ್ರಾಮಾಣಿಕವಾಗಿ ತೊಡಗಿಕೊಂಡರೆ ಕಾರ್ಕಳದಲ್ಲೂ ಕಾಂಗ್ರೆಸ್‌ಗೆ ಹೆಚ್ಚು ಮತಬರುವುದರಲ್ಲಿ ಅನುಮಾನವಿಲ್ಲ.

ಚಿಕ್ಕಮಗಳೂರಿನ ನಾಲ್ಕೂ ಅಸೆಂಬ್ಲಿ ಸೆಗ್ಮೆಂಟುಗಳಲ್ಲಿ ಕಮಲ ಕಮರುತ್ತಿದೆ. ಆ ಕಮಲಕ್ಕೀಗ ಮತಾಂಧ ಗೊಬ್ಬರ ಸಿಗುತ್ತಿಲ್ಲ. ದತ್ತ ಅವಧೂತನ ಹೆಸರಲ್ಲಿ ಶಾಸಕ ಸಿ.ಟಿ. ರವಿ ಬಳಗ ಮಾಡಿದ ಲೂಟಿ, ಅಧಿಕಾರ ದುರುಪಯೋಗ, ದ್ರೋಹ, ದೊಂಬಿ ಜನರಿಗೆ ಅರ್ಥವಾಗಿದೆ. ರವಿ ಮತ್ತವನ ಭಾವ ಸುದರ್ಶನ್‌ನ ಗೋಲ್‌ಮಾಲ್, ಸೈಟ್ ಸ್ವಾಹಾದಿಂದ ಬಿಜೆಪಿಗೆ ದೊಡ್ಡ ಹೊಡೆತ ಬಿದ್ದಿದೆ. ಈ ರವಿ ಮತ್ತು ಸಿಎಂ ಡೀವಿ ಬದ್ಧಶತ್ರುಗಳು. ರವಿಯೇ ಬಿಜೆಪಿಗೆ ದೋಖಾ ಕೊಡುವ ಸಾಧ್ಯತೆಯಿದೆ. ಅತ್ತ ಮೂಡಿಗೆರೆ, ಶೃಂಗೇರಿಯಲ್ಲೂ ಸ್ಥಳೀಯ ಶಾಸಕರ ಅವಾಂತರ-ಅವ್ಯವಹಾರ ಬಿಜೆಪಿಗೆ ಗಂಡಾಂತರಕಾರಿಯಾಗಿದೆ. ವೇಸ್ಟ್‌ಬಾಡಿಯಂತಿದ್ದ ಡಿ.ಬಿ. ಚಂದ್ರೇಗೌಡ ಬಿಜೆಪಿಗೆ ಹೋಗಿರುವುದರಿಂದ ಕಾಂಗ್ರೆಸ್‌ನಲ್ಲಿ ಹೊಂದಾಣಿಕೆ-ಸಾಮರಸ್ಯ ಮೂಡಿದೆ. ಈ ಡಿಬಿಸಿಯಿಂದಾಗಿಯೇ ಚಿಕ್ಕಮಗಳೂರು ಕಾಂಗ್ರೆಸ್ ಒಡೆದ ಮನೆಯಂತಾಗಿತ್ತು. ಈಗ ಬಿ.ಎಲ್. ಶಂಕರ್, ಡಿ.ಕೆ. ತಾರಾದೇವಿ, ಮಾಜಿ ಮಂತ್ರಿ ಗೋವಿಂದೇಗೌಡರ ಮಗ ವೆಂಕಟೇಶ್ ಎಲ್ಲ ಒಗ್ಗಟ್ಟಾಗಿ ಕಾಂಗ್ರೆಸ್ ಪರ ಕೆಲಸ ಮಾಡುತ್ತಿದ್ದಾರೆ. ಇದಕ್ಕೆ ಕ್ಯಾಂಡಿಡೇಟ್ ಜೆಪಿಯ 'ಫ್ಲೆಕ್ಸಿಬಲಿಟಿ'ಯೂ ಇನ್ನೊಂದು ಕಾರಣ.







ಇಷ್ಟೆಲ್ಲ ಸೂತ್ರ-ಸಮೀಕರಣದಿಂದ ಹದಗೊಂಡಿರುವ ಇಡೀ ಕ್ಷೇತ್ರದಲ್ಲಿ ಪರಿಣಾಮ ಬೀರುವ ಇನ್ನೊಂದು ಅಂಶವೆಂದರೆ ಯಡ್ಡಿ ಮತ್ತು ದೇವೇಗೌಡರ ಜಾತಿ ಆಧಾರಿತ ಈರ್ಜೆ-ಜಿದ್ದಾಜಿದ್ದಿ! ಡೀವಿಗೆ ಮುಖಭಂಗ ಮಾಡಲು ಯಡ್ಡಿ ಸ್ವಜಾತಿ ಲಿಂಗಾಯತರ ಓಟು ಕಾಂಗ್ರೆಸ್‌ಗೆ ಹೋಗುವಂತೆ ಮಾಡುವ ಸಾಧ್ಯತೆ ಇದೆ. ಹಾಗಯೇ ತನ್ನ ಮಾತು ಶಿರಸಾ ಪಾಲಿಸುವ ಸಿಎಂ ಡೀವಿಯ ಕುರ್ಚಿ ಉಳಿಸಿ ತನ್ನ ಬೇಳೆ ಬೇಯಿಸಿಕೊಳ್ಳಲು ಜೆಡಿಎಸ್ ದೊರೆ ದೇವೇಗೌಡ ತನ್ನ ಕ್ಯಾಂಡಿಡೇಟನ್ನೇ ಬಲಿ ಪಡೆದು ಒಕ್ಕಲಿಗರ ಮತ ಬಿಜೆಪಿಗೆ ಹೋಗುವಂತೆ ಮಾಡಿದರೂ ಆಶ್ಚರ್ಯವಿಲ್ಲ. ಡೀವಿ-ಎಚ್‌ಡಿಡಿ ಒಳಸಬ್ಬಾದ ಸುಳಿ ಅಂತಿಮವಾಗಿ ಕಾಂಗ್ರೆಸ್‌ಗೆ ಅನುಕೂಲ ಮಾಡುತ್ತದೆಂಬ ಅಭಿಪ್ರಾಯ ರಾಜಕೀಯ ಪಂಡಿತರದು.

ಒಟ್ಟಿನಲ್ಲಿ ಕ್ಷೇತ್ರದಲ್ಲಿನ ಜಾತಿ ರಾಜಕಾರಣದ ಗಣಿತ, ಧರ್ಮಾಂಧ ತಂತ್ರಗಾರಿಕೆ ಮತ್ತು ಕ್ಯಾಂಡಿಡೇಟ್‌ಗಳ ಸಾಮರ್ಥ್ಯ, ಬಿಜೆಪಿಯೊಳಗಿನ ಗುದುಮುರಿಗೆ ಯಾವುದು ನೋಡಿದರೂ ಕಾಂಗ್ರೆಸ್‌ನ ಜಯಪ್ರಕಾಶ್ ಹೆಗ್ಡೆಯೇ ಸಶಕ್ತ ಮತ್ತು ಸಮರ್ಥ! ಬಿಜೆಪಿಯ ಬೂಟಾಟಿಕೆ ಭೂಪ ಸುನಿಲ್ ಕುಮಾರ್ ಸೋಲುವ ಸಾಧ್ಯತೆಯೇ ಹೆಚ್ಚು!! ಸಂಘ ಪರಿವಾರ ಈ ಬಾರಿ ವ್ಯಭಿಚಾರ-ಅನೈತಿಕ ಅನಾಚಾರ ಮತ್ತು ಭ್ರಷ್ಟಾಚಾರದ ರಾಜಕಾರಣಕ್ಕೆ ದೊಡ್ಡ ದಂಡ ತೆರಲೇ ಬೇಕಾಗಿದೆ!



ಕಿಂಗ್‌ಫಿಷರ್ ದಿವಾಳಿ

ಸದಾ ಒಂದಲ್ಲ ಒಂದು ರೀತಿಯಲ್ಲಿ ಸುದ್ದಿಯಲ್ಲಿರುವ ಹೆಂಡದ ದೊರೆ ವಿಜಯ ಮಲ್ಯ ಈಗ ಕಳೆದ ಎರಡು ವಾರದಿಂದ ಮತ್ತೆ ಸುದ್ದಿಯಲ್ಲಿದ್ದಾನೆ. ಆದರೆ ಈ ಸಲದ ಸುದ್ದಿ ಮಾಮೂಲಿಯದಲ್ಲ, ಮಲ್ಯನ ಇತಿಹಾಸದಲ್ಲಿ ವಿಶೇಷವಾದುದು. ಮಲ್ಯ ಒಡೆತನದ ಕಿಂಗ್‌ಫಿಷರ್ ಕಂಪನಿ ದಿವಾಳಿಯೆದ್ದಿರುವುದರಿಂದ ಮಲ್ಯ ಮತ್ತೊಮ್ಮೆ ಸಾರ್ವಜನಿಕ ಚರ್ಚೆಯ ವಸ್ತುವಾಗಿದ್ದಾರೆ.

ಕಳೆದ ಫೆಬ್ರವರಿ 20 ನೇ ತಾರೀಖಿನಿಂದ ಮೊದಲ್ಗೊಂಡು ಇಲ್ಲಿಯವರೆಗೆ ಭಾರತದಾದ್ಯಂತ ಕಿಂಗ್‌ಫಿಷರ್ ಏರ್‌ಲೈನ್ಸ್‌ನದೇ ಸುದ್ದಿ. ಅವತ್ತು ಶುರುವಾದ ಕಿಂಗ್‌ಫಿಷರ್ ಸಮಸ್ಯೆ ಬಗೆಹರಿಯದೇ ದಿನೇದಿನೇ ಕಗ್ಗಂಟಾಗುತ್ತಾ ಸಾಗುತ್ತಿದೆ. ಏನಿದು ಕಿಂಗ್‌ಫಿಷರ್ ಏರ್‌ಲೈನ್ಸ್‌ನ ಸಮಸ್ಯೆ? ಅದು ಹೀಗೆ ವಿವಾದಗ್ರಸ್ತವಾಗಲು ಕಾರಣವಾದರೂ ಏನು? ಎಂದು ಹುಡುಕುತ್ತಾ ಹೊರಟರೆ ಆಘಾತಕಾರಿ ಅಂಶಗಳು ಬೆಳಕಿಗೆ ಬರುತ್ತವೆ. ಪ್ರಜಾಪ್ರಭುತ್ವ ಎತ್ತ ಸಾಗುತ್ತಿದೆ ಎಂಬುದಕ್ಕೆ ಒಂದು ನಿದರ್ಶನ ಸಿಗುತ್ತದೆ.

ಕಳೆದ ದಶಕದಲ್ಲಿ ಆರ್ಥಿಕ ಉದಾರೀಕರಣ ನೀತಿಗಳು ಜಾರಿಗೆ ಬಂದನಂತರ ವಿಮಾನಯಾನ ಕ್ಷೇತ್ರಕ್ಕೆ ಹಲವಾರು ಖಾಸಗಿ ಕಂಪನಿಗಳು ತಾಮುಂದು, ನಾಮುಂದು ಎಂದು ಮುಗಿಬಿದ್ದವು. ಹೀಗೆ ವಿಮಾನಯಾನಕ್ಕೆ ಮುಂದೆ ಬಂದ ಉದ್ಯಮಿಗಳಲ್ಲಿ ಹೆಂಡದ ದೊರೆ ವಿಜಯ ಮಲ್ಯನೂ ಒಬ್ಬ. ರಾಷ್ಟ್ರೀಯ-ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಭಾರೀ ಜೋರಾಗಿ ಖರ್ಚಾಗುತ್ತಿರುವ ಮಲ್ಯನ ಬಿಯರ್ ಬ್ರಾಂಡ್ ಯಾವುದೆಂದರೆ ಕಿಂಗ್‌ಫಿಷರ್. ಹೀಗೆ ಮಲ್ಯನಿಗೆ ಸಾವಿರಾರು ಕೋಟಿಗಳ ಲಾಭವನ್ನು ತಂದುಕೊಡುತ್ತಿರುವ ಕಿಂಗ್‌ಫಿಷರ್‌ನ ಹೆಸರಿನಲ್ಲೇ ಮಲ್ಯ ವಿಮಾನ ಸಂಸ್ಥೆ ಆರಂಭಿಸಿದ.

ಕಿಂಗ್‌ಫಿಷರ್ ಏರ್‌ಲೈನ್ಸ್ ಇತರ ಸಂಸ್ಥೆಗಳೊಂದಿಗೆ ಪೈಪೋಟಿಗಿಳಿಯಿತು. ವಿಮಾನ ಓಡಿಸುವ ಕಂಪನಿಗಳಿಗೆ ಪ್ರಯಾಣಿಕರನ್ನು ಸೆಳೆಯುವುದು ಒಂದು ದೊಡ್ಡ ಸವಾಲು. ಈ ನಿಟ್ಟಿನಲ್ಲಿ ಕಿಂಗ್‌ಫಿಷರ್ ಅಳವಡಿಸಿದ ತಂತ್ರವೇನೆಂದರೆ ತಿಂಗಳುಗಟ್ಟಲೆ ಮುಂಚಿತವಾಗಿ ಟಿಕೆಟ್ ಕಾದಿರಿಸುವ ಪ್ರಯಾಣಿಕರಿಗೆ ಭಾರೀ ರಿಯಾಯಿತಿ ಕೊಡುವುದು. ಹೀಗಾಗಿ ಮುಂಗಡ ಬುಕಿಂಗ್‌ನಲ್ಲಿ ವಿಮಾನ ಪ್ರಯಾಣದರಗಳು ಹೆಚ್ಚೂಕಡಿಮೆ ಬಸ್ಸು-ರೈಲು ಪ್ರಯಾಣ ದರಗಳ ಮಟ್ಟಕ್ಕೆ ಇಳಿದವು. ಹೀಗಾಗಿ ಸರ್ಕಾರಿ ಬಸ್‌ನಲ್ಲಿ ಪ್ರಯಾಣ ಮಾಡುವ ಬಡಪಾಯಿಗಳೂ ಸಹ ವಿಮಾನದಲ್ಲಿ ಪಯಣಿಸುವ ಕನಸುಗಳನ್ನು ಕಾಣುವಂತಾಯಿತು. ಕೆಲವರು ಆ ಕನಸನ್ನು ನನಸು ಮಾಡಿಕೊಂಡದ್ದು ಸುಳ್ಳಲ್ಲ.

ಈ ಪೈಪೋಟಿಯ ಮುಂದುವರೆದ ಭಾಗವಾಗಿ ವಿಮಾನಗಳ ಸಂಖ್ಯೆಯಲ್ಲೂ, ಮಾರ್ಗಗಳ ಸಂಖ್ಯೆಯಲ್ಲೂ ಭಾರೀ ಹೆಚ್ಚಳವಾಯ್ತು. ದೇಶದಾದ್ಯಂತ ಹತ್ತು ಹಲವು ನಗರಗಳಲ್ಲಿ ದೇಶಿಯ ಹಾಗೂ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳನ್ನು ನಿರ್ಮಿಸಲಾಯ್ತು. ಹೀಗೆ ದೇಶಾದ್ಯಂತ ಲಕ್ಷಾಂತರ ಎಕರೆ ರೈತರ ಭೂಮಿಯನ್ನೂ, ಲಕ್ಷಾಂತರ ಕೋಟಿಗಳ ಸಾರ್ವಜನಿಕ ಹಣವನ್ನು ಆಪೋಶನ ತೆಗೆದುಕೊಂಡ ವಿಮಾನ ನಿಲ್ದಾಣಗಳು ಧಾರಾಳವಾಗಿ ಅಭಿವೃದ್ಧಿಯಾದವು. ಜೀವಮಾನದಲ್ಲಿ ಒಮ್ಮೆಯಾದರೂ ವಿಮಾನದಲ್ಲಿ ಹಾರುವ ಭಾಗ್ಯ ಬಂದೊದಗಿದ್ದಕ್ಕಾಗಿ ಭಾರತದ ಮಧ್ಯಮ ವರ್ಗಗಳು ಅಭಿವೃದ್ಧಿಯನ್ನು ಹಾಡಿ ಹೊಗಳಿದವು.



ಹೀಗಿದ್ದ ವಿಮಾನಯಾನದ ಯಶೋಗಾಥೆ ಈಗ ಮುಗ್ಗರಿಸಿ ಮಕಾಡೆ ಬೀಳುವ ಸ್ಥಿತಿಗೆ ಬಂದಿದೆ. ಅದರ ಮೊದಲ ಕಂತೇ ಕಿಂಗ್‌ಫಿಷರ್ ಏರ್‌ಲೈನ್ಸ್‌ನ ದಿವಾಳಿ.

ಈ ಕಿಂಗ್‌ಫಿಷರ್ ಕಳೆದ ಕೆಲವಾರು ತಿಂಗಳುಗಳಿಂದ ತನ್ನ ಸಿಬ್ಬಂದಿಗೆ ಸಂಬಳ ಕೊಟ್ಟಿಲ್ಲ, ವಿಮಾನಕ್ಕೆ ಪೆಟ್ರೋಲ್ ಸರಬರಾಜು ಮಾಡಿದ ಕಂಪೆನಿಗಳ ಬಿಲ್ ಪಾವತಿಸಿಲ್ಲ, ಅಷ್ಟೇ ಏಕೆ, ಸರ್ಕಾರಕ್ಕೆ ಸಲ್ಲಿಸಬೇಕಿರುವ ಸುಮಾರು 35 ರಿಂದ 40 ಕೋಟಿ ಸೇವಾ ತೆರಿಗೆಯನ್ನು ಪಾವತಿಸಿಲ್ಲ.

ಈ ಹಿನ್ನೆಲೆಯಲ್ಲಿ ಆದಾಯ ತೆರಿಗೆ ಇಲಾಖೆ ಹಲವಾರು ಬಾರಿ ಎಚ್ಚರಿಸಿ ನೋಟಿಸ್ ಜಾರಿ ಮಾಡಿದರೂ ಮಲ್ಯನ ಕಂಪನಿ ಸರಿಯಾಗಿ ಸ್ಪಂದಿಸಿಲ್ಲ, ಕೊನೆಗೆ ಬೇರೆ ವಿಧಿಯಿಲ್ಲದೆ ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ಕಿಂಗ್‌ಫಿಷರ್ ಏರ್‌ಲೈನ್ಸ್‌ನ ಬ್ಯಾಂಕ್ ಖಾತೆಯನ್ನು ಮುಟ್ಟುಗೋಲು ಹಾಕಿಕೊಂಡರು.

ಸರ್ಕಾರದ ಇಂಥಾ ಕಠಿಣ ಕ್ರಮಕ್ಕೆ ಹೆದರಿ ಮಲ್ಯ ತೆರಿಗೆ ಪಾವತಿಸಿರಬಹುದು ಎಂದು ಯಾರಾದರೂ ಊಹಿಸಬಹುದು. ಆದರೆ ಸಿಬ್ಬಂದಿಗೆ ಸಂಬಳ ಕೊಡದೇ, ಪ್ರಾವಿಡೆಂಟ್ ಫಂಡ್ ಪಾವತಿಸದೆ, ಸರ್ಕಾರಕ್ಕೆ ತೆರಿಗೆ ಪಾವತಿಸದೇ, ಎಲ್ಲಾ ರೀತಿಯ ಕಾನೂನುಗಳನ್ನು ಕಾಲಕಸವಾಗಿಸಿಕೊಂಡಿರುವ ಮಲ್ಯ ಮಾಡಿದ್ದೇನು ಗೊತ್ತೆ? ಪ್ರತಿನಿತ್ಯ ಹಾರಾಟ ನಡೆಸುತ್ತಿದ್ದ ಕಿಂಗ್‌ಫಿಷರ್ ಏರ್‌ಲೈನ್ಸ್‌ನ ಸುಮಾರು 80ಕ್ಕೂ ಹೆಚ್ಚು ವಿಮಾನಗಳನ್ನು ಏಕಾಏಕಿ ಸ್ಥಗಿತಗೊಳಿಸಿದ್ದು. ಈ ಬಗ್ಗೆ ವಿಮಾನಯಾನ ಇಲಾಖೆಗಾಗಲಿ, ವಿಮಾನಯಾನ ನಿಯಂತ್ರಣ ಪ್ರಾಧಿಕಾರಕ್ಕಾಗಲಿ ಕನಿಷ್ಠ ಮಾಹಿತಿಯನ್ನು ಒದಗಿಸುವ ಗೋಜಿಗೂ ಹೋಗದೆ ಎಂದಿನಂತೆ ತನ್ನ ವಿಲಾಸಿ ರಂಗೀಲಾ ಜೀವನದಲ್ಲಿ ತಲ್ಲೀನನಾಗಿದ್ದ.

ಆದರೆ ವಿಮಾನಗಳು ರದ್ದಾಗುವ ಯಾವ ಮುನ್ಸೂಚನೆಯೂ ಇಲ್ಲದ ಪ್ರಯಾಣಿಕರು ತಮ್ಮ ಲಗೇಜುಗಳೊಂದಿಗೆ ವಿಮಾನ ನಿಲ್ದಾಣಗಳಲ್ಲಿ ಪರದಾಡುವಂತಾಯಿತು. ಸಾಮಾನ್ಯವಾಗಿ ವಿಮಾನ ಪ್ರಯಾಣಿಕರೆಂದರೆ ಶ್ರೀಮಂತ ಉದ್ಯಮಿಗಳು, ವ್ಯಾಪಾರಿಗಳು, ರಾಜಕಾರಣಿಗಳು, ಉನ್ನತ ಅಧಿಕಾರಿಗಳು ಇವರನ್ನು ಬಿಟ್ಟರೆ ಕಾರ್ಪೋರೇಟ್ ಕಂಪನಿಗಳ ಕೆಲವು ಉನ್ನತ ಸ್ತರದ ಉದ್ಯೋಗಿಗಳೇ ಆಗಿರುತ್ತಾರೆ. ಹೀಗಾಗಿ ಈ ವಿಮಾನ ರದ್ಧತಿಯ ಬಿಸಿ ಬಹಳ ಬೇಗನೇ ಕೇಂದ್ರ ಸರ್ಕಾರವನ್ನು ಮುಟ್ಟಿತು. ಅಂಥಾ ಬಿಸಿ ಮುಟ್ಟಲೆಂದೇ ಮಲ್ಯನ ಕಿಂಗ್‌ಫಿಷರ್ ವ್ಯವಸ್ಥಿತವಾಗಿ ತಂತ್ರ ರೂಪಿಸಿತ್ತು. ಹೇಗೆಂದರೆ ಸ್ಥಗಿತಗೊಂಡ ವಿಮಾನಗಳಲ್ಲಿ ಬಹುಪಾಲು ದೇಶದ ರಾಜಧಾನಿ ನವದೆಹಲಿ ಮತ್ತು ಆರ್ಥಿಕ ನಗರಿ ಮುಂಬೈನ ನಡುವೆ ಸಂಚರಿಸುತ್ತಿದ್ದ ವಿಮಾನಗಳಾಗಿದ್ದವು ಎಂದರೆ ಮಲ್ಯ ಸರ್ಕಾರಕ್ಕೆ ಯಾವ ರೀತಿ ಸೆಡ್ಡುಹೊಡೆದಿದ್ದಾನೆ ಎಂಬುದು ಅರ್ಥವಾಗುತ್ತದೆ. ಈ ವಿಷಯವನ್ನು ಬೇರೊಂದು ರೀತಿಯಲ್ಲಿ ಕಂಪನಿಯ ಅಧಿಕೃತ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಹೆಂಡದ ದೊರೆಯ ವಿಮಾನ ಮುಷ್ಕರ ಸುದ್ದಿ ಮಾಧ್ಯಮಗಳಲ್ಲಿ ಪ್ರಮುಖ ಸುದ್ದಿಯಾಗಿಬಿಟ್ಟಿತು. ಮಾಧ್ಯಮಗಳು ಸರ್ಕಾರವನ್ನು ಇನ್ನಿಲ್ಲದಂತೆ ಖಂಡಿಸಿದವು. ಇದರಿಂದ ಎಚ್ಚೆತ್ತುಕೊಂಡಂತೆ ಕಂಡ ಸರ್ಕಾರ ಕೆಲವು ಕ್ರಮಗಳಿಗೆ ಮುಂದಾಯಿತು. ಮೊದಲಿಗೆ ವಿಮಾನಯಾನ ನಿಯಂತ್ರಣ ನಿರ್ದೇಶನಾಲಯ ಕಿಂಗ್‌ಫಿಷರ್ ಕಂಪನಿಗೆ ನೋಟಿಸ್ ಜಾರಿಗೊಳಿಸಿ ಹೀಗೆ ಅಕ್ರಮವಾಗಿ ಯಾವುದೇ ಮುನ್ಸೂಚನೆ ಇಲ್ಲದೆ ವಿಮಾನಗಳನ್ನು ರದ್ದುಪಡಿಸಿದ್ದಕ್ಕೆ ಕಾರಣಗಳನ್ನು ವಿವರಿಸುವಂತೆ ಸೂಚಿಸಿತು. ಈ ಸೂಚನೆಗೆ ಪ್ರತಿಯಾಗಿ ಮಲ್ಯ ಮಾಡಿದ್ದೇನು ಗೊತ್ತೆ? ಮತ್ತಷ್ಟು ವಿಮಾನಗಳನ್ನು ರದ್ದುಪಡಿಸಿದ್ದು! ಶಹಬ್ಬಾಸ್...! ಮಲ್ಯನ ದಾರ್ಷ್ಟ್ಯವನ್ನು ಯಾರಾದರೂ ಮೆಚ್ಚಲೇ ಬೇಕು.

ಅಷ್ಟರಲ್ಲಾಗಲೇ ಸಾಲದಲ್ಲಿ ಸಿಕ್ಕಿಬಿದ್ದಿರುವ ಕಿಂಗ್‌ಫಿಷರ್ ಕಂಪನಿಯನ್ನು ಉಳಿಸಲು ಸರ್ಕಾರ ಸರ್ವ ಪ್ರಯತ್ನವನ್ನು ಮಾಡಬೇಕೆಂದೂ, ಬ್ಯಾಂಕ್‌ಗಳಿಂದ ಹೊಸ ಸಾಲಗಳನ್ನು ನೀಡಬೇಕೆಂದೂ, ತೆರಿಗೆ ಇಲಾಖೆಯವರು ಮುಟ್ಟುಗೋಲು ಹಾಕಿಕೊಂಡಿರುವ ಬ್ಯಾಂಕ್ ಖಾತೆಯನ್ನು ಅವರಿಗೆ ಮರಳಿಸಬೇಕೆಂದೂ ಮುಂತಾದ ಕಿಂಗ್‌ಫಿಷರ್ ಪರವಾದ ವಾದಗಳನ್ನು ಆರ್ಥಿಕ ತಜ್ಞರು ಮಂಡಿಸಲು ಪ್ರಾರಂಭಿಸಿದರು. ಈ ಸಮಸ್ಯೆಯ ಬಗ್ಗೆ ಪತ್ರಿಕೆಗಳು ವಿಶೇಷ ಲೇಖನಗಳ ಸರಮಾಲೆಯನ್ನೇ ಪ್ರಕಟಿಸಿದವು.

ಈಗ ಇಲ್ಲೊಂದು ಅಸಲಿ ಪ್ರಶ್ನೆ ಉದ್ಭವಿಸುತ್ತದೆ. ದೇಶದಲ್ಲಿ ಚಾಲ್ತಿಯಲ್ಲಿರುವ ಕಾನೂನುಗಳ ಪ್ರಕಾರ ಯಾವುದೇ ವ್ಯಕ್ತಿ ಅಥವಾ ಕಂಪನಿ ತನಗೆ ಆಸಕ್ತಿಯಿರುವ ಲಾಭದಾಯಕವೆಂದು ಕಂಡುಬಂದ ಉದ್ದಿಮೆ ವ್ಯಾಪಾರ ಮಾಡಲು ಮುಕ್ತ ಅವಕಾಶವಿದೆ. ಆ ರೀತಿ ನಾನಾ ಉದ್ದಿಮೆಗಳನ್ನು ಸ್ಥಾಪಿಸಿ ಸಾವಿರಾರು ಕೋಟಿಗಳನ್ನು ಬಾಚಿರುವವರ ದೊಡ್ಡ ಪಟ್ಟಿಯೇ ಇದೆ.

ಹೀಗೆ ಸಕ್ರಮವಾಗಿಯೋ, ಅಕ್ರಮವಾಗಿಯೋ ಗಳಿಸಿ[illegible] ಲಾಭವನ್ನು ಗಳಿಸುವ ಯಾವೊಬ್ಬ ಬಂಡವಾಳಿಗನ[illegible] ಸರ್ಕಾರಕ್ಕಾಗಲೀ, ಸಮಾಜಕ್ಕಾಗಲೀ ಕೊಟ್ಟ ಒಂದೇಒಂದ[illegible] ಉದಾಹರಣೆಯನ್ನು ನಾವು ಕೇಳಿಲ್ಲ. ಹಾಗಾದರೆ ನ[illegible] ಅನುಭವಿಸಿದಾಗ ಅವರಿಗೆ ಸರ್ಕಾರ ನಷ್ಟ ಪರಿಹಾ[illegible] ಕೊಡಬೇಕೆಂಬ ತರ್ಕವನ್ನು ನಾವು ಒಪ್ಪುವುದಾದರೂ ಹೇಗೆ[illegible] ಆದರೆ ನಮ್ಮನ್ನಾಳುತ್ತಿರುವ ಸರ್ಕಾರದ ದೇಶದ್ರೋಹಿ ನಿ[illegible] ಹೇಗಿದೆ ನೋಡಿ. ಕಿಂಗ್‌ಫಿಷರ್ ಕಂಪನಿಯ ನಷ್ಟವನ[illegible] ಸರ್ಕಾರ ವಹಿಸಿಕೊಳ್ಳುವ ಬಗ್ಗೆ ತೀವ್ರ ವಿರೋಧ ವ್ಯಕ್ತವಾ[illegible] ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ತೋರಿಕೆಗೆ ಯಾ[illegible] ನೆರವನ್ನು ನೀಡಲು ಸಾಧ್ಯವಿಲ್ಲವೆಂದೂ ಹೇಳುತ್ತಿದ್ದರ[illegible] ಹಿಂಬಾಗಿಲಿನ ಮಾರ್ಗಗಳ ಮೂಲಕ ಮಲ್ಯನ ಬಾಯಿ[illegible] ಸಾವಿರಾರು ಕೋಟಿ ರೂಪಾಯಿಗಳನ್ನು ಸುರಿಯಲ[illegible] ಹೊರಟಿದೆ.

ಈಗಾಗಲೇ ಸುಮಾರು 7000 ಕೋಟಿಗಳಷ್ಟು ಬೃಹ[illegible] ಮೊತ್ತವನ್ನು ಬ್ಯಾಂಕ್‌ಗಳಿಂದ ಸಾಲದ ರೂಪದ[illegible] ಕಿಂಗ್‌ಫಿಷರ್ ಪಡೆದುಕೊಂಡಿದೆ. ಈಗಿನ ಸನ್ನಿವೇಶವನ[illegible] ವಿಶ್ಲೇಷಿಸುವುದಾದರೆ ಈ ಮೊತ್ತವೂ ಸಹ ಬ್ಯಾಂಕ್‌ಗಳಿ[illegible] ಮರುಪಾವತಿಯಾಗುವ ಲಕ್ಷಣಗಳು ಕಾಣುತ್ತಿಲ್ಲ. ಈಗಾಗಲ[illegible] ಲಕ್ಷಾಂತರ ಕೋಟಿಗಳಷ್ಟಿರುವ ವಸೂಲಿಯಾಗದ ಸಾ[illegible] (NPA) ಜೊತೆ ಮಲ್ಯನಿಗೆ ಕೊಟ್ಟಿರುವ 7000 ಕೋ[illegible] ರೂ ಸೇರುವ ಎಲ್ಲಾ ಲಕ್ಷಣಗಳೂ ಇವೆ. ಯಾಕೆಂದ[illegible] ಸತತ ಪ್ರಯತ್ನಗಳ ಹೊರತಾಗಿ ದೇಶೀಯವಾಗಿ ಅಥವ[illegible] ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಿಂಗ್‌ಫಿಷರ್‌ನಲ್ಲಿ ಬಂಡವಾ[illegible] ವನ್ನು ಹೂಡಲು ಯಾವುದೇ ಕಂಪನಿ ಮುಂದೆ ಬರುತ್ತಿಲ[illegible]

ಪರಿಸ್ಥಿತಿ ಹೀಗಿರುವಾಗ ಕೇಂದ್ರ ಸರ್ಕಾರ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಮೂಲಕ ಹೊಸದಾಗಿ 160[illegible] ಕೋಟಿ ರೂಪಾಯಿಗಳ ಭಾರೀ ಮೊತ್ತವನ್ನು ಸಾಲದ ಹೆಸರಿನ[illegible] ನೀಡಲು ಮುಂದಾಗಿದೆ. ಈ ಉದ್ದೇಶಕ್ಕಾಗಿ SBI [illegible] ನೇತೃತ್ವದಲ್ಲಿ ಹತ್ತಾರು ಬ್ಯಾಂಕ್‌ಗಳ ಪ್ರತಿನಿಧಿಗಳು ಸ[illegible] ಸೇರಿ ಚರ್ಚಿಸಿದ್ದಾರೆ. ಹಣಕಾಸು ಸಚಿವಾಲಯದಿಂದಲ[illegible] ಹಸಿರು ನಿಶಾನೆ ಸಿಕ್ಕಿರುವುದಾಗಿ ತಿಳಿದು ಬಂದಿದೆ.

ಇಷ್ಟು ಮಾತ್ರವಲ್ಲದೇ ಕೇಂದ್ರ ಸರ್ಕಾರ ವಿಮಾನಯಾ[illegible] ಉದ್ಯಮಕ್ಕೆ ನಾನಾ ರಿಯಾಯಿತಿಗಳನ್ನು ಘೋಷಿಸಿ[illegible] ಅದರಂತೆ ಈ ಕ್ಷೇತ್ರದಲ್ಲಿ ವಿದೇಶಿ ನೇರ ಹೂಡಿಕೆಯ[illegible] ಪ್ರಮಾಣ ಶೇ. 49 ಕ್ಕೇರಿದೆ. ಜೊತೆಗೆ ವಿಮಾನಯಾ[illegible] ಕಂಪನಿಗಳು ತಮಗೆ ಬೇಕಾದ ಇಂಧನವನ್ನು ಅಗ್ಗ[illegible] ಬೆಲೆಗೆ ಆಮದು ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದ[illegible] ಬಾಕಿ ಇರುವ ತೆರಿಗೆಯನ್ನು ಕಂತುಗಳಲ್ಲಿ ಪಾವತಿಸ[illegible] ವಂತೆಯೂ ತಿಳಿಸಲಾಗಿದೆ. ವಾಸ್ತವ ಹೀಗಿರುವಾ[illegible] ನಾವು ಕಿಂಗ್‌ಫಿಷರ್‌ಗೆ ನಷ್ಟ ಭರ್ತಿ ಮಾಡಿಕೊಡು[illegible] ಪ್ರಶ್ನೆಯೇ ಇಲ್ಲ ಎಂದು ವಿಮಾನಯಾನ ಖಾತೆ ಸಚಿ[illegible] ಅಜಿತ್ ಸಿಂಗ್ ನಿತ್ಯವೂ ಪ್ರಲಾಪಿಸುತ್ತಿದ್ದಾನೆ. ಇದಕ್ಕಿಂ[illegible] ದೊಡ್ಡ ಡಬಲ್ ಡೀಲಿಂಗ್ ಬೇರೆ ಯಾವುದಿದೆ?

ಪ್ರಪಂಚದ ಅತಿದೊಡ್ಡ ಪ್ರಜಾಪ್ರಭುತ್ವ ದೇಶವಾ[illegible] ಭಾರತದಲ್ಲಿ ಪ್ರಜೆಗಳು ಮತ್ತು ಪ್ರಭುಗಳ ನಡುವಿನ ಸಂಬಂ[illegible] ಹೇಗಿದೆ ನೋಡಿ. ಬಡಪಾಯಿ ರೈತರು ಅತ್ಯಂ[illegible] ಸಕಾರಣಗಳಿಗಾಗಿ ಸಾಲ ಕಟ್ಟಲಾಗದಿದ್ದರೆ ಅಂಥ ರೈತ[illegible] ಜಮೀನನ್ನು ಬ್ಯಾಂಕ್‌ಗಳು ಜಪ್ತಿ ಮಾಡುತ್ತವೆ. ಮಧ್ಯಮ[illegible] ವರ್ಗದವರೋ ಅಥವಾ ಸಣ್ಣಪುಟ್ಟ ವ್ಯಾಪಾರಿಗಳೋ ಸಾ[illegible] ಕೇಳಲು ಬ್ಯಾಂಕ್‌ಗಳಿಗೆ ಹೋದರೆ ನಮ್ಮ ಬಳಿಯಿರು[illegible] ಆಸ್ತಿಪಾಸ್ತಿಗಳನ್ನು ಅಡಮಾನ ಇಟ್ಟುಕೊಂಡೇ ಒಂದೊ[illegible] ಎರಡೋ ಲಕ್ಷ ಸಾಲ ಕೊಡುತ್ತವೆ. ಒಂದು ವೇಳೆ ನಿಮ[illegible] ವ್ಯವಹಾರದಲ್ಲಿ ನಷ್ಟವುಂಟಾಗಿ ಸಾಲ ಮರುಪಾವತಿಸಲ[illegible] ಸಾಧ್ಯವಾಗದೆ ಹೋದ ಪಕ್ಷದಲ್ಲಿ ನಿಮ್ಮ ಮನೆಮಠವನ[illegible] ಹರಾಜು ಹಾಕಿ ತಮ್ಮ ಸಾಲವನ್ನು ವಸೂಲಿ ಮಾಡಿಕೊಳ[illegible] ತ್ತಾರೆ. ಆದರೆ ಸಾವಿರಾರು ಕೋಟಿಗಳಷ್ಟು ಹಣವನ[illegible] ಪಡೆದುಕೊಂಡ ಬೃಹತ್ ಶ್ರೀಮಂತರಿಗೆ ಮಾತ್ರ ಮತ್ತಮ[illegible] ಸಾವಿರಾರು ಕೋಟಿಗಳ ಸರ್ಕಾರಿ ಹಣವನ್ನು ಸುರಿಯ[illegible] ಲಾಗುತ್ತಿದೆ. ಇದು 1947 ರಿಂದಲೂ ಅನೂಚಾನವಾಗಿ[illegible] ನಡೆದು ಬಂದ ಸಂಪ್ರದಾಯ. ಆದ್ದರಿಂದ ನಮ್ಮ ವ್ಯವಸ್ಥೆಯನ[illegible] ಪ್ರಜೆಗಳಿಂದ ಪ್ರಭುಗಳಿಗಾಗಿ ಇರುವ ಪ್ರಜಾಪ್ರಭುತ್ವವೆಂದ[illegible] ಕರೆಯುವುದು ಸರ್ವರೀತಿಯಿಂದಲೂ ಉತ್ತಮ ಅಲ್ಲವೇ[illegible]

ವಿಜಯ್ ಮಲ್ಯನ ವಿಜಯ ವಿಲಾಸ

ಈ ವಿಜಯ್ ಮಲ್ಯನ ಬಗ್ಗೆ ನಮ್ಮ ಸರ್ಕಾರಕ್ಕೆ ಪ್ರೀತಿ, ಅನುಕಂಪ ಉಕ್ಕಿಹರಿಯುತ್ತಿದೆ. ಈತ ಸಂಪೂರ್ಣ ಪಾಪರ್ ಆಗಿಬಿಟ್ಟು ಇನ್ನೆಲ್ಲಿ ಬಿಪಿಎಲ್ ಪಟ್ಟಿಗೆ ಸೇರಿಬಿಡುತ್ತಾನೋ ಎಂಬ ಆತಂಕ ಸರ್ಕಾರಗಳನ್ನು ಕಾಡುತ್ತಿರುವಂತಿದೆ. ಆದರೆ ವಾಸ್ತವದಲ್ಲಿ ಈತ ಭಾರತದ ಅತ್ಯಂತ ಶ್ರೀಮಂತರ ಪಟ್ಟಿಯಲ್ಲಿದ್ದಾನೆ. ಇತ್ತೀಚೆಗೆ ವಿಶ್ವದ ಶ್ರೀಮಂತರ ಪಟ್ಟಿಯನ್ನು ದಾಖಲಿಸುವ ಫೋರ್ಬ್ಸ್ ಪಟ್ಟಿಯಲ್ಲಿ ಸ್ಥಾನಗಿಟ್ಟಿಸಿದ್ದಾನೆ. ಈತನ ಮಾಲೀಕತ್ವದ ಯುಬಿ ಗ್ರೂಪ್ ಪ್ರತಿವರ್ಷ ಸಾವಿರಾರು ಕೋಟಿ ಲಾಭ ಗಳಿಸುತ್ತಿದೆ. ಯುಬಿ ಕಂಪನಿ ಮದ್ಯ ತಯಾರಿಕೆಯಲ್ಲಿ ವಿಶ್ವದಲ್ಲೇ ಮೂರನೇ ಸ್ಥಾನ ಗಳಿಸಿದೆ.



ಈ ವಿಜಯ್ ಮಲ್ಯ ಇತರ ಉದ್ಯಮಿಗಳಂತಲ್ಲ, ತನ್ನ ವಿಕೃತವಿಲಾಸೀ ಜೀವನಕ್ಕೆ ಹೆಸರುವಾಸಿಯಾದವನು. ಈತನಿಗೆ ಜಗತ್ತಿನ ನಾನಾ ದೇಶಗಳಲ್ಲಿ 26 ವೈಭವೋಪೇತ ಬಂಗಲೆಗಳಿವೆ. ಈತನ ಬಳಿ ಸುಮಾರು 200 ವಿಲಾಸಿ ಕಾರುಗಳಿವೆ. ಕುದುರೆ ರೇಸಿನಲ್ಲಿ ಈತನದು ಎತ್ತಿದ ಕೈ. ದೇಶದ ವಿವಿಧ ನಗರಗಳಲ್ಲಿ ಕುದುರೆ ಫಾರಂಗಳನ್ನು ಹೊಂದಿದ್ದಾನೆ. ಇನ್ನು ಈತ ಐಪಿಎಲ್ ಕ್ರಿಕೆಟ್‌ನಲ್ಲಿ ತನ್ನದೇ ಮಾಲೀಕತ್ವದ ತಂಡವನ್ನು ಹೊಂದಿದ್ದು ಅದಕ್ಕಾಗಿ ನೂರಾರು ಕೋಟಿಗಳನ್ನು ವ್ಯಯಿಸುತ್ತಿದ್ದಾನೆ. ಆತನ ಕಿಂಗ್‌ಫಿಷರ್ ಕ್ಯಾಲೆಂಡರ್ ಹಾಗೂ ಚಿಯರ್‌ಗರ್ಲ್ಸ್ ಹುಚ್ಚು ಜಗಜ್ಜಾಹೀರಾಗಿದೆ. ಬೆಂಗಳೂರು ನಗರದ ಹೃದಯಭಾಗದಲ್ಲಿ ಸಾವಿರಾರು ಕೋಟಿ ಬೆಲೆಬಾಳುವ ಆಸ್ತಿಪಾಸ್ತಿಗಳಿವೆ. ಒಟ್ಟಾರೆ ಈ ವಿಜಯ್ ಮಲ್ಯ ಸರಿಸುಮಾರು 50 ಸಾವಿರ ಕೋಟಿಗಳ ಒಡೆಯ ಎಂದು ಒಂದು ಅಂದಾಜು.

ಹೀಗಿರುವಾಗ ಈ ಕಿಂಗ್‌ಫಿಷರ್ ನಷ್ಟಕ್ಕೆ ತನ್ನದೇ ಹಣವನ್ನು ತೊಡಗಿಸುವಂತೆ ಆದೇಶಿಸುವುದು ಹಾಗಿರಲಿ, ಕನಿಷ್ಠ ವಿನಮ್ರ ವಿನಂತಿಯನ್ನಾದರೂ ಮಾಡಿಲ್ಲವೆಂದರೆ ಈ ಪ್ರಭುಗಳ ಸಾಮರ್ಥ್ಯವನ್ನು ನಾವು ಅರಿಯಬಹುದು. ಹೋಗಲಿ ವಿರೋಧ ಪಕ್ಷಗಳು ಈ ವಿಷಯವನ್ನು ಗಂಭೀರವಾಗಿ ಆಗ್ರಹಿಸಬಹುದಿತ್ತು, ಆದರೆ ನಮ್ಮ ರಾಜಕೀಯ ಪಕ್ಷಗಳಿಗೆ ಬಾವುಟಗಳು ಬೇರೆಬೇರೆ. ಆದರೆ ನೀತಿ ಮಾತ್ರ ಒಂದೇ. ಇದೂ ಒಂದು ರೀತಿಯಲ್ಲಿ ವಿವಿಧತೆಯಲ್ಲಿ ಏಕತೆಯೇ ಸರಿ. ಇವೆಲ್ಲಾ ಒತ್ತಟ್ಟಿಗಿರಲಿ ಈ ವಿಷಯದಲ್ಲಿ ಮಾಧ್ಯಮಗಳಾದರೂ ಜವಾಬ್ದಾರಿಯುತವಾದ ಚರ್ಚೆಗೆ ತೊಡಗಿಕೊಳ್ಳದೇ [illegible] ಸುತ್ತ ವೈಭವೀಕರಣ ಮಾಡುತ್ತಿರುವುದು ಇಂದಿನ ದೊಡ್ಡ ದುರಂತ.

ಬಿಜೆಪಿ V/s ಬಿಜೆಪಿ

ಜಯಧರನಿಂದ ಜಮಖಂಡಿ ಜಖಮ್!

ಈ ಜಯಧರ ಮಹಾನ್ ಭ್ರಷ್ಟ. ಹೋದಕಡೆಯಲ್ಲೆಲ್ಲ ಗೆಬರಲು ಹೋಗಿ ನೆತ್ತಿಗೆ ಕುಕ್ಕಿಸಿಕೊಂಡು ಬಂದ ಅಧಿಕಾರಿ. ಹಣ ಮಾಡುವ ಖಯಾಲಿಗೆ ಬಿದ್ದಿರುವ ಈತ ತನ್ನ ಮಾತೃ ಇಲಾಖೆಯಾದ ಕಮಾಯಿ ಇಲ್ಲದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗಿಂತ ಬೇರೆ ಭರಪೂರ ಇಲಾಖೆಗಳಲ್ಲಿ ಕೆಲಸ ಮಾಡಿದ್ದೇ ಹೆಚ್ಚು. ಬ್ರಹ್ಮಕುಮಾರಿಯ ಬ್ರ್ಯಾಂಡ್ ಅಂಬಾಸಿಡರ್‌ನಂತೆ ಪೋಷಾಕು ಧರಿಸುವ ಈತ ತನ್ನ ಬ್ಲ್ಯಾಕ್‌ಮನಿ ಇಡಲು ಉಪಯೋಗಿಸುತ್ತಿರುವುದೂ ಅದೇ ವೈಟ್ ಸಮವಸ್ತ್ರದ ಮೂಲವನ್ನು ಎಂಬ ಪುಕಾರೂ ಇದೆ.

...ಎತದ್ದೂರ್ ಬಿಜೆಪಿಗಳ ಜಟಾಪಟಿಯಲ್ಲಿ ಜಮಖಂಡಿ ...ಸಭೆ ತತ್ತಾರು ಆವಾಂತರಗಳಿಂದ ತೊಪ್ಪನೆ ತೊಯ್ದು ...ಗಿದೆ. ತೇರದಾಳ ಕ್ಷೇತ್ರದ ಸಿದ್ದು ಸವದಿ ಮತ್ತು ...ಖಂಡಿಯ ಬಿಜೆಪಿ ಎಂ.ಎಲ್.ಎ ಶ್ರೀಕಾಂತ ...ರ್ಣಿಯ ನಡುವಿನ ಜಂಗೀಕುಸ್ತಿಯ ಲಾಭ ...ಮುತ್ತಿರುವುದು ಪೌರಾಯುಕ್ತ ಜಯಧರನೆಂಬ ಆಸಾಮಿ. ...ನೂರು ಮುತ್ತುಗಳ ಆಮೋಘ ಅವ್ಯವಹಾರದಿಂದ ...ನಾನ ಪ್ರೈವೇಟ್ ಅಕೌಂಟ್ ಸೇರುತ್ತಿದ್ದರೆ ಬೋಗಸ್ ...ಗಳು ಕಡತ ಸೇರುತ್ತಿವೆ. ಇನ್ನು ನಗರಸಭೆ ವ್ಯಾಪ್ತಿಯ ...ವೃದ್ಧಿಯಂತು ಇಲ್ಲೀಗ ಕನಸಿನ ಮಾತಾಗಿದೆ.

...ಳೆದ ವಿಧಾನಸಭೆ ಚುನಾವಣೆಗೂ ಮುನ್ನ ಸಿದ್ದು ... ಇದೇ ಜಮಖಂಡಿಯ ಶಾಸಕನಾಗಿದ್ದ. ಆತನ ...ರಾವಧಿಯಲ್ಲಿ ನಡೆದ ಜಮಖಂಡಿ ನಗರಸಭೆ ...ವಣೆಯಲ್ಲಿ ತನ್ನ ಚೇಲಾಗಳೇ ಗೆದ್ದು ಬರುವಂತೆ ...ಡಿದ್ದ. ಹಾಗಾಗಿ ನಗರಸಭೆಯಲ್ಲಿ ಈಗಲೂ ಸವದಿ ...ಲಿಗರೇ ಇದ್ದಾರೆ. 2008ರ ಕ್ಷೇತ್ರ ...ವಿಂಗಡಣೆಯ ಸಮಯದಲ್ಲಿ ಆತನಿಗೆ ತೇರದಾಳ ...ಕ್ಕೆ ಹೋಗಬೇಕಾದ್ದರಿಂದ ಜಮಖಂಡಿಗೆ ಹೊಸ ...ಡಿಡೇಟ್ ಹಾಕುವ ದರ್ದು ...ಗಿತ್ತು. ಆಗ ಚಲಾವಣೆಗೆ ...ಸವನೆ ಶ್ರೀಕಾಂತ ...ರ್ಣಿಯೆಂಬ ಸಂಘಪರಿವಾರದ ...ಕ್ಕು. ಅಪ್ಪಟ ಬ್ರಾಹ್ಮಣ, ...ಾವರ ಸ್ವಾಮಿಯ ಖಾಸಾ. ...ದವನಾದ ಕುಲಕರ್ಣಿಗೆ ...ಟು ಸಿಗುವುದು ಸವದಿಗೆ ...ತ್ತೂ ಇಷ್ಟವಿರಲಿಲ್ಲ. ಅದೂ ...ವೆ ಜಾತಿ ಲೆಕ್ಕಾಚಾರದಲ್ಲಿ ...ರಂಕಿಯೂ ದಾಟದ ...ಹ್ಮಣ ಅಭ್ಯರ್ಥಿಗೆ ಟಿಕೆಟು ...ಡುವುದು ಮತ್ತಷ್ಟೂ ಬೇಸರ ...ಡಿಸಿತ್ತು. ಇದನ್ನೇ ...ತವಾಳವನ್ನಾಗಿಸಿಕೊಂಡ ಸವದಿ ತನ್ನ ಚೇಲಾ ...ರಸಭೆ ಸದಸ್ಯರ ಮೂಲಕ ಜಾತಿಬೆಂಬಲ ಇಲ್ಲದ ...ರ್ಣಿಗೆ ಟಿಕೇಟು ನೀಡುವುದಕ್ಕಿಂತ ಲಿಂಗಾಯತ ...ಗೌಡನಿಗೆ ಟಿಕೆಟು ನೀಡುವಂತೆ ರಾಜ್ಯ ...ಮಾಂಡ್‌ಗೆ ಹೇಳಿಸಿದ್ದ.

ಆದರೆ ಕುಲಕರ್ಣಿಗೆ ...ಪರಿವಾರದ ಸಪೋರ್ಟು, ...ಯ ಶಿಫಾರಸ್ಸು ಇತ್ತಾದ್ದರಿಂದ ...ಟು ಸಿಕ್ಕಿದ್ದು ಮಾತ್ರವಲ್ಲ ...ದೃಷ್ಟ ಘಳಿಗೆಯಲ್ಲಿ ಗೆದ್ದೂ ...ಬಿದ್ದ. ಆದರೆ ಸಿದ್ದು ಸವದಿ ತನ್ನ ...ಲ ಕ್ಷೇತ್ರದ ಮೇಲಿನ ...ಮೋಹವನ್ನು ಇನ್ನೂ ಬಿಟ್ಟಿಲ್ಲ. ...ದಿನ ಚುನಾವಣೆ ವೇಳೆಗೆ ... ಜಮಖಂಡಿಯ ...ಡಿಡೇಟಾಗಬೇಕು ಅಥವಾ ... ತೇರದಾಳವೇ ಗತಿಯಾದರೆ ... ತಮ್ಮ ಯಗಪ್ಪ ಸವದಿಯನ್ನು ...ಖಂಡಿಗೆ ಜಮೆ ಮಾಡಬೇಕೆಂಬ ...ಮೇದಿಯಲ್ಲಿದ್ದಾನೆ. ಇನ್ನು, ತನಗೆ ಅಧಿಕಾರ ...ಹೋದೆ ಒನ್ ಟೈಮ್ ಆಫರ್‌ನಂತೆ ಎಂಬುದರ ...ರಿವ ಕುಲಕರ್ಣಿಗೆ ಸವದಿಯ ಚಿತಾವಣೆ ...ಗೇ ಗೊತ್ತಿದೆ. ಒಂದೊಮ್ಮೆ ಟಿಕೆಟ್ ಸಿಕ್ಕರೆ ಗೆಲ್ಲುವ ಖಾತರಿ ಖುದ್ದು ಕುಲಕರ್ಣಿಗೇ ಇಲ್ಲ. ಹಾಗಾಗಿ ಜಮಖಂಡಿಯಲ್ಲಿ ಸವದಿ ಪ್ರಾಬಲ್ಯಕ್ಕೆ ಗರಿಷ್ಠ ಡ್ಯಾಮೇಜ್ ಮಾಡಬೇಕೆನ್ನುವುದು ಕುಲಕರ್ಣಿಯ ಸ್ಕೆಚ್ಚು. ಇದಕ್ಕೆ ಜೊತೆಯಾಗಿರೋದು ಜಮಖಂಡಿ ನಗರಸಭೆಯ ಪೌರಾಯುಕ್ತ ಜಯಧರನೆಂಬ ಮತ್ತೊಬ್ಬ ಸಭ್ಯ ಲಫಂಗ!



ಅಸಲಿಗೆ ಈ ಜಯಧರ ಮಹಾನ್ ಭ್ರಷ್ಟ. ಹೋದಕಡೆಯಲ್ಲೆಲ್ಲ ಗೆಬರಲು ಹೋಗಿ ನೆತ್ತಿಗೆ ಕುಕ್ಕಿಸಿಕೊಂಡು ಬಂದ ಅಧಿಕಾರಿ. ಹಣ ಮಾಡುವ ಖಯಾಲಿಗೆ ಬಿದ್ದಿರುವ ಈತ ತನ್ನ ಮಾತೃ ಇಲಾಖೆಯಾದ ಕಮಾಯಿ ಇಲ್ಲದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗಿಂತ ಬೇರೆ ಭರಪೂರ ಇಲಾಖೆಗಳಲ್ಲಿ ಕೆಲಸ ಮಾಡಿದ್ದೇ ಹೆಚ್ಚು. ಬ್ರಹ್ಮಕುಮಾರಿಯ ಬ್ರ್ಯಾಂಡ್ ಅಂಬಾಸಿಡರ್‌ನಂತೆ ಪೋಷಾಕು ಧರಿಸುವ ಈತ ತನ್ನ ಬ್ಲ್ಯಾಕ್‌ಮನಿ ಇಡಲು ಉಪಯೋಗಿಸುತ್ತಿರುವುದೂ ಅದೇ ವೈಟ್ ಸಮವಸ್ತ್ರದ ಮೂಲಕ ಎಂಬ ಪುಕಾರೂ ಇದೆ.




ಸಿದ್ದು ಸವದಿ

ನಾಲ್ಕೈದು ಕಂಟ್ರ್ಯಾಕ್ಟರುಗಳ ಗುಂಪು ಕಟ್ಟಿಕೊಂಡಿರುವ ಜಯಧರ ಬಂದ ಕಂಟ್ರ್ಯಾಕ್ಟುಗಳೆಲ್ಲಾ ಅವರಿಗೆ ಮಾತ್ರವೇ ಹರಾಜಾಗುವಂತೆ ಟೆಂಡರ್‌ನ ಶಾಸ್ತ್ರ ಮಾಡಿ ಬೋಗಸ್ ಬಿಲ್‌ಗಳ ಹೆಸರಲ್ಲಿ ಕೋಟಿ ಕೋಟಿ ಬಾಚುತ್ತಿದ್ದಾನೆ. ಪಾರ್ಕು, ರಸ್ತೆಗಳನ್ನೆಲ್ಲಾ ಮಾರಿಕೊಳ್ಳುವ ಮಟ್ಟಕ್ಕೆ ದಗಲ್ಬಾಜಿ ಮಾಡಲು ನಿಂತಿದ್ದಾನೆ. ಜಮಖಂಡಿಯ ಹೊರವಲಯದಲ್ಲಿ ಜಯಧರ ಖರೀದಿಸಿರುವ ಸರ್ವೇನಂಬರ್ 5212 ಹಾಗೂ 5217ಗಳ ಬರೋಬ್ಬರಿ ಅರವತ್ತು ಲಕ್ಷ ಬೆಲೆಬಾಳುವ ಸೈಟು ಸಾಕು ಈತನ ಭ್ರಷ್ಟತೆಯನ್ನು ಬಿಚ್ಚಿಡಲು. ಹೆಂಡತಿ ಶೋಭಾ ಹೆಸರಿನಲ್ಲಿರುವ ಆ ಸೈಟಿನಲ್ಲಿ ಅದಕ್ಕು ದುಪ್ಪಟ್ಟು ದುಬಾರಿಯ ಬಂಗಲೆ ಚಿಗುರಿಸುತ್ತಿದ್ದಾನೆ. ಬಿಜೆಪಿ ವರ್ಸಸ್ ಬಿಜೆಪಿ ಜಟಾಪಟಿಯಲ್ಲಿ ಕುಲಕರ್ಣಿಯ ಟೀಮಿನಲ್ಲಿರುವಂತೆ ಕಾಣಿಸಿಕೊಳ್ಳುವ ಜಯಧರ ಭರ್ಜರಿ ಕಮಾಯಿಗೆ ನಿಂತಿರುವುದು ಮಾತ್ರ ನಗ್ನ ಸತ್ಯ.

ಹಾಗೆ ನೋಡಿದರೆ, ಜಯಧರನನ್ನು ಜಮಖಂಡಿಗೆ ತರಿಸಿಕೊಂಡಿದ್ದೇ ಸಿದ್ದು ಸವದಿ. ಆದರೆ ಪಕ್ಕಾ ಅವಕಾಶವಾದಿಯಾದ ಈತ ಈಗ ಕುಲಕರ್ಣಿಯ ಆಣತಿಯಂತೆ ಬಿಜೆಪಿಗೆ ಬಿಸಿನೀರು ಬಿಡುವ ಕಾಯಕದಲ್ಲಿ ನಿರತನಾಗಿದ್ದಾನೆ. ಕುಲಕರ್ಣಿಗೆ ಮೊದಲಿನಿಂದಲೂ ಜಮಖಂಡಿ ನಗರಸಭೆಯ ಬಿಜೆಪಿ ವಾರ್ಡ್ 'ಬಾಯ್ಸ್'ಗಳ ವಿರುದ್ಧ ಭಯಂಕರ ಕೋಪ. ಅವರೆಲ್ಲ ಸವದಿ ಬೆಂಬಲಿಗರೆಂಬುದು ಒಂದು ಕಡೆಯಾದರೆ ಟಿಕೆಟು ಸಿಗುವ ವಿಷಯದಲ್ಲಿ ತನಗೆ ಕೊಡುವುದು ಬೇಡ ಎಂದು ಹೈಕಮಾಂಡ್‌ಗೆ ದೂರಿದವರು ಎಂಬುದು ಮತ್ತೊಂದು ಕಡೆ. ಈ ಸೇಡನ್ನು ತನ್ನ ಜೇಬಿನಲ್ಲಿ ಬಿದ್ದು ಒದ್ದಾಡುತ್ತಿರುವ ಜಯಧರನ ಮೂಲಕ ಕಾರ್ಯರೂಪಕ್ಕೆ ತರುತ್ತಿದ್ದಾನೆ. ಬಿಜೆಪಿ ಸದಸ್ಯರಿರುವ ವಾರ್ಡ್‌ಗೆ ಯಾವುದೇ ಅನುದಾನ ಅಥವಾ ಯೋಜನೆ ಮಂಜೂರಾಗದಂತೆ ನೋಡಿಕೊಳ್ಳುತ್ತಿದ್ದಾನೆ. ಆ ಮೂಲಕ ಸ್ಥಳೀಯ ಜನರ ದೃಷ್ಟಿಯಲ್ಲಿ ಈ ಸವದಿ ಚೇಲಾಗಳು ವಿಲನ್‌ಗಳಾಗಬೇಕೆನ್ನುವುದು ಕುಲಕರ್ಣಿಯ ಲೆಕ್ಕಾಚಾರ. ಇದಕ್ಕೆ ಸರಿಯಾಗಿ ಜಯಧರನೂ ಕುಲಕರ್ಣಿಯ ಮನೆಯೇ ತನ್ನ ಕಚೇರಿಯೆಂಬಂತೆ ಅಲ್ಲಿಂದಲೇ ಆದೇಶ ಹೊರಡಿಸುತ್ತಿದ್ದಾನೆ. ಬಿಜೆಪಿ ಹೊರತಾದ ಬೇರೆ ಪಕ್ಷದವರ ವಾರ್ಡಿಗೆ ಅನುದಾನ ಬಿಡುಗಡೆ ಮಾಡೋದು, ಖುದ್ದು ಬಿಜೆಪಿಗಳ ವಾರ್ಡ್‌ಗಳಲ್ಲಿ ಅವರ ವಿರೋಧಿಗಳನ್ನು ಕರೆಸಿ ಅವರ ಮೂಲಕ ಜನರನ್ನು ರೊಚ್ಚಿಗೆಬ್ಬಿಸೋದು ಮುಂತಾದ ಥರ್ಡ್ ಕ್ಲಾಸ್ ರಾಜಕೀಯವೇ ಈಗ ಜಮಖಂಡಿಯಲ್ಲಿ ಕಾಣುತ್ತಿರೋದು.



ಯೋಗಪ್ಪ ಸವದಿ



ಕುಲಕರ್ಣಿ


ಇಂತಹ ಒಳಜಗಳದಲ್ಲಿ ಜಯಧರ ಎಷ್ಟು ನೀಟಾಗಿ ಕಳಾಯಿಸಿಕೊಂಡಿದ್ದಾನೆಂದರೆ, ಅವನನ್ನು ಕೇಳುವವರೇ ಇಲ್ಲದಂತಾಗಿದೆ. ಜಮಖಂಡಿ ನಗರಸಭೆಗೆ ಮುಖ್ಯಮಂತ್ರಿ ಪರಿಹಾರ ನಿಧಿಯಿಂದ ಐದು ಕೋಟಿ ಮತ್ತು ಇತರೆ ಇಲಾಖೆಗಳಿಂದ ಏನಿಲ್ಲವೆಂದರೂ ಹದಿನೈದರಿಂದ ಇಪ್ಪತ್ತೈದು ಕೋಟಿ ಅನುದಾನ ಮಂಜೂರಾಗುತ್ತದೆ. ಆದರೆ ಜಮಖಂಡಿಯಲ್ಲಿ ಇದರ ಅರ್ಧ ಅಮೌಂಟಿಗೂ ಸರಿದೂಗಬಹುದಾದ ಯಾವೊಂದು ಕಾಮಗಾರಿಯೂ ಶುರುವಾಗಿಲ್ಲ. ಬೋಗಸ್ ಕಾಮಗಾರಿಗಳ ಹೆಸರು ತೋರಿಸಿ ಎಲ್ಲವನ್ನೂ ಜಯಧರ ತನ್ನ ಅಕೌಂಟುಗಳಿಗೆ ಟ್ರಾನ್ಸ್‌ಫರ್ ಮಾಡಿಕೊಳ್ಳುತ್ತಿದ್ದಾನೆ. ಈಗಾಗಲೇ ಸವದಿಯ 'ಘನಂದಾರಿ' ಕೆಲಸದಿಂದ ಮುಕ್ಕಾಲು ಪಾಲು ಮುಳುಗಿಹೋಗಿರುವ ಬಿಜೆಪಿ ವಾರ್ಡ್ ಬಾಯ್‌ಗಳು ಅನುದಾನವಿಲ್ಲದೆ ಜನರಿಂದಲೂ ಅಪವಾದ ಕೇಳಬೇಕಾಗಿದೆ. ಇದೇ ವಿಚಾರವಾಗಿ ನಗರಸಭಾಧ್ಯಕ್ಷ ಶ್ರೀಶೈಲ ಕಾಂಬಳೆಯ ನೇತೃತ್ವದಲ್ಲಿ ಮೇಲಧಿಕಾರಿಗಳಿಗೆ ದೂರನ್ನೂ ನೀಡಿದ್ದರು. ಅದಕ್ಕೆ ಪ್ರತ್ಯುತ್ತರವಾಗಿ ಸರ್ಕಾರದ ನಗರಾಭಿವೃದ್ಧಿ ಕಾರ್ಯದರ್ಶಿ 8.12.2011 ರಂದು ಈ ಜಯಧರನನ್ನು ಈ ಕೂಡಲೇ ಈತನ ಮಾತೃ ಇಲಾಖೆಗೆ ವಾಪಾಸ್ಸು ಕಳಿಸಿ ಎಂಬ ಫರ್ಮಾನು ಹೊರಡಿಸಿದ್ದರು. ಹೊರಬಂದಿದ್ದಷ್ಟೇ ಆ ಆದೇಶದ ಪುಣ್ಯ, ನಂತರ ಅದಕ್ಕೆ ಕಿಮ್ಮತ್ತಿನ ಬೆಲೆಯೂ ಸಿಕ್ಕಿಲ್ಲ. ಇವತ್ತಿನವರೆಗೆ ಜಮಖಂಡಿ ಖಾಲಿ ಮಾಡುವ ಯಾವ ಲಕ್ಷಣವನ್ನೂ ಆತ ತೋರಿಸಿಲ್ಲ. ಅದನ್ನು ಜಬರ್ದಸ್ತಾಗಿ ಕೇಳುವವರೂ ಗತಿ ಇಲ್ಲ.

ಒಟ್ಟಿನಲ್ಲಿ ಸವದಿ ಹಾಗೂ ಕುಲಕರ್ಣಿ ಎಂಬ ಬಿಜೆಪಿ ಶಾಸಕರ ಕಿತ್ತಾಟ ಜಯಧರನ ಅಂಧಾದುಂದಿಗೆ ದಾರಿ ಮಾಡಿಕೊಟ್ಟಿರುವುದು ಜಮಖಂಡಿಯ ದುರಾದೃಷ್ಟ.

• ಮೇಘರಾಜ್

ಸಂಘ ಪರಿವಾರದ ಹೊಸ ಉಪಟಳಗಳು

ಇತ್ತೀಚೆಗೆ ಕರ್ನಾಟಕ ರಾಜ್ಯದ ಗೃಹ ಮಂತ್ರಿಗಳು ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ಕೋಮು ಘರ್ಷಣೆಗಳು ನಡೆದಿಲ್ಲ ಎಂಬ ಹೇಳಿಕೆಯನ್ನು ನೀಡಿದರು. ಈ ಮಾತಿಗಿಂತ ಅರ್ಧ ಸತ್ಯ ಇನ್ನೊಂದಿರಲಾರದು. ಕೋಮು ಘರ್ಷಣೆ ಎಂದರೆ ಎರಡು ಕೋಮುಗಳ ಜನರು ಒಬ್ಬರ ವಿರುದ್ಧ ಒಬ್ಬರು ನಿಂತು ಹೊಡೆದಾಡುವುದು. ಪರಸ್ಪರರ ಆಸ್ತಿಯನ್ನು ನಾಶ ಮಾಡುವುದು. ಎರಡೂ ಕಡೆ ಪ್ರಾಣ ಹಾನಿಯೂ ಆಗಬಹುದು. ಬಿಜೆಪಿ ಅಧಿಕಾರಕ್ಕೆ ಬಂದಾಗಿನಿಂದ ಈ ವಿದ್ಯಮಾನಗಳು ಹೆಚ್ಚಾಗಿಲ್ಲ, ಕಾರಣ ಸ್ಪಷ್ಟ: ಅಧಿಕಾರಸ್ಥರ ಕೃಪೆ ಮತ್ತು ರಕ್ಷಣೆ ಇರುವ ಸಂಘಪರಿವಾರದ ವಿವಿಧ ಘಟಕಗಳು ಅಲ್ಪಸಂಖ್ಯಾತರ ಮೇಲೆ ದಾಳಿಗಳನ್ನು ನಡೆಸುತ್ತಲೇ ಇದ್ದಾರೆ. ಇದನ್ನು ಕೋಮು ಘರ್ಷಣೆ ಎನ್ನಲಾಗುವುದಿಲ್ಲ ಎನ್ನುವುದೇನೋ ಸರಿಯೇ. ಮತ್ತೆ ಇದನ್ನೇನೆಂದು ಕರೆಯಬೇಕು? ಕೋಮು ದಾಳಿ ಎನ್ನಬಹುದೇ? 2002 ರಲ್ಲಿ ಗುಜರಾತಿನಲ್ಲಿ ನಡೆದದ್ದೇನು? ಅದನ್ನು ಕೋಮು ಘರ್ಷಣೆ ಎನ್ನಲಾದೀತೇ? ಕರ್ನಾಟಕವನ್ನು ಮತ್ತೊಂದು ಗುಜರಾತ್ ಮಾಡಹೊರಟ ಸಂಘಪರಿವಾರದ



ಎಲ್ಲವೂ ಚದುರಿದ ಘಟನೆಗಳಂತೆ ಕಂಡರೂ ಇವುಗಳ ಹಿಂದೆ ಒಂದು ಮಹಾ ಯೋಜನೆಯಂತೂ ಇದೆ. ಇತ್ತೀಚೆಗೆ ಸಿಂದಗಿಯಲ್ಲಿ ಆರೆಸ್ಸೆಸ್ ಸದಸ್ಯರು ಪಾಕಿಸ್ತಾನದ ಬಾವುಟವನ್ನು ಹಾರಿಸಿದ ಪ್ರಕರಣ ಇದಕ್ಕೆ ಒಂದು ಜ್ವಲಂತ ಉದಾಹರಣೆ. ಆದರೆ ಎಲ್ಲ ಕೇಡಿಗಳೂ ಎಲ್ಲ ಕಡೆಯೂ ಏಕರೀತಿಯಲ್ಲಿ ಯಶಸ್ವಿಯಾಗುವುದಿಲ್ಲ, ಈ ಸಂದರ್ಭದಲ್ಲಿ ಶ್ರೀರಾಮಸೇನೆ (ಎಸ್‌ಆರ್‌ಎಸ್) ಮತ್ತು ಆರೆಸ್ಸೆಸ್ ಪರಸ್ಪರ ಮಗ್ಗುಲಚ ಕೊಂಡರು. ಇವರುಗಳ ನಿಜವಾದ ಬಣ್ಣ ತಿಳಿದವರಿಗೆ ಇವರಿಬ್ಬರ ನಡುವೆ ಹೆಚ್ಚೇನೂ ವ್ಯತ್ಯಾಸವಿಲ್ಲವೆನ್ನುವುದು ಗೊತ್ತು, ಆದರೆ ಇಂಥ ಕೆಲವು ಪ್ರಕರಣಗಳನ್ನು ಹೊರತು ಪಡಿಸಿದರೆ ಹೆಚ್ಚಿನ ಸಂಖ್ಯೆಯ ವಿದ್ಯಮಾನಗಳು ರಾಜ್ಯದ ಎಲ್ಲರ ಗಮನಕ್ಕೆ ಬರುವುದಿಲ್ಲ, ಇವೆಲ್ಲವೂ ವಾರ್ತಾಪತ್ರಿಕೆಗಳಲ್ಲಿ ಆಯಾ ಜಿಲ್ಲೆಗಳಿಗೇ ಸೀಮಿತವಾಗಿರುವ ಸಂಚಿಕೆಗಳಲ್ಲಿ ಪ್ರಕಟವಾಗುತ್ತವೆ, ಮತ್ತು ಬೇಗನೆ ಜನರ ನೆನಪಿನಿಂದ ಮರೆಯಾಗುತ್ತವೆ.

ಇಂಥದೇ ಒಂದು ಘಟನೆ ಬೆಂಗಳೂರಿನ ಸಮೀಪದ ಆನೇಕಲ್ಲಿನಲ್ಲಿ ಜನವರಿ 27, 2012 ರಂದು ನಡೆಯಿತು.



ಹುಟಾಲಂಗಳು ಅದೇ ರೀತಿಯ ಒಂದು ಸಣ್ಣ ಪ್ರಯೋಗವನ್ನು ಮಾಡಹೊರಟಿದ್ದಂತೂ ವಾಸ್ತವ.

ಇದಕ್ಕೆ ಉದಾಹರಣೆಗಳು ಹಲವು. ರಾಜ್ಯದ ವಿವಿಧೆಡೆಯಲ್ಲಿ, ಮುಖ್ಯವಾಗಿ ಕರಾವಳಿ ಪ್ರದೇಶದಲ್ಲಿ, ನಡೆದ ಚರ್ಚುಗಳ ಮೇಲಿನ ದಾಳಿಗಳ ನೆನಪು ಇನ್ನೂ ಹಸಿರಾಗಿಯೇ ಉಳಿದಿದೆ. ಕ್ರೈಸ್ತರ ಮೇಲೆ ಮತಾಂತರದ ಆರೋಪ ಹೊರಿಸಿ ಅವರನ್ನು ಗುರಿಯಾಗಿಸಿಕೊಂಡು ದಾಳಿ ಮಾಡಿದವರು ಮುಸ್ಲಿಮರ ವಿರುದ್ಧ ಲವ್ ಜಿಹಾದ್ ಹಾಗೂ ಗೋಹತ್ಯೆಯಂಥಾ ಆಪಾದನೆಗಳನ್ನು ಹೊರಿಸಿ ಅವರನ್ನೂ ಹಿಂಸಿಸಿದರು. ಈ ದಾಳಿಗಳು ಕೆಲವು ಬಾರಿ ಉಧೃತವಾಗಿ ನಡೆದರೆ ಇನ್ನು ಕೆಲವು ಬಾರಿ ಸ್ವಲ್ಪ ಕಡಿಮೆ ಮಟ್ಟದಲ್ಲಿ. ನಡೆದಿವೆ. ಆದರೆ ಒಂದಂತೂ ಸತ್ಯ: ಈ

ಆಶ್ಚರ್ಯದ ಸಂಗತಿಯೆಂದರೆ ಇದೂ ಸಹ ರಾಜಧಾನಿಯಲ್ಲಿ ಹೆಚ್ಚು ಜನರ ಗಮನಕ್ಕೆ ಬರದೇ ಹೋಯಿತು. ಆ ಘಟನೆಯ ವಿವರಗಳು ಹೀಗಿವೆ:

ಜನವರಿ 26, 2012 ರಂದು ತಮ್ಮ ಕಾಲೇಜಿನ ಆವರಣದಲ್ಲಿ ಗಣತಂತ್ರ ದಿನವನ್ನು ಆಚರಿಸಲಿಲ್ಲವೆಂದು ಆನೇಕಲ್ಲಿನ ಸಂತ ಜೋಸೆಫರ ಪದವಿ ಪೂರ್ವ ಕಾಲೇಜಿನ ಪ್ರಿನ್ಸಿಪಾಲರ ಮೇಲೆ ಆಪಾದನೆ. 2010 ರ ಜೂನ್‌ನಲ್ಲಿ ಆರಂಭವಾದ ಈ ವಿದ್ಯಾ ಸಂಸ್ಥೆಯು ಈಗ ಇನ್ನೂ ಎರಡನೆಯ ವರ್ಷದಲ್ಲಿದೆ. ಕಾಲೇಜಿನವರು ದೇಶಭಕ್ತಿ ರಹಿತರೆಂದು ಆಪಾದಿಸಿದ ಎಬಿವಿಪಿ ಮತ್ತು ಕರವೇ ಕಾರ್ಯಕರ್ತರು ಮಾರನೆಯ ದಿನ, ಅಂದರೆ ಜನವರಿ 27ರಂದು, ಕಾಲೇಜಿನ ಮೇಲೆ ದಾಳಿ ನಡೆಸಿದರು. ಆ ಸಮಯಕ್ಕೆ ಅಲ್ಲಿಗೆ ಬಂದ ಪ್ರಿನ್ಸಿಪಾಲರನ್ನು ಅವಮಾನಿಸಿದರು. ಕಾಲೇಜಿನ ಆವರಣದಲ್ಲಿ ದಾಂಧಲೆ ಎಬ್ಬಿಸಿ ತರಗತಿಗಳನ್ನು ಬಿಡಿಸಿದರು. ಪ್ರಿನ್ಸಿಪಾಲರು ವಾಸ್ತವವನ್ನು ತಿಳಿಸಲು ಯತ್ನಿಸಿದರೂ ಅವರಿಗೆ ಅವಕಾಶವನ್ನೇ ಕೊಡದಾದರು. ಆ ವಾಸ್ತವವೆಂದರೆ, 26 ರಂದು ಆ ಕಾಲೇಜಿನವರು ತಮ್ಮ ಇನ್ನೊಂದು ಕಟ್ಟಡ ಏಳುತ್ತಿರುವ ಜಾಗದಲ್ಲಿ ಗಣತಂತ್ರ ದಿನಾಚರಣೆಯನ್ನು ನಡೆಸಿದ್ದರು. ಈ ವಿಷಯವನ್ನು ಹೇಳಲು ಪ್ರಿನ್ಸಿಪಾಲರಿಗೆ ಅವಕಾಶವೇ ಸಿಗಲಿಲ್ಲ, ಸಂವಿಧಾನಕ್ಕೆ ಎಳ್ಳಷ್ಟೂ ಗೌರವವನ್ನು ಕೊಡದವರಿಂದ ಸಂವಿಧಾನದ ರಕ್ಷಣೆ!

ವಿಶೇಷವೆಂದರೆ ಆ ಸಮಯದಲ್ಲಿ ಅಲ್ಲಿದ್ದ ತಹಶೀಲ್ದಾರರಾಗಲಿ, ಪೊಲೀಸರಾಗಲಿ ಪ್ರಿನ್ಸಿಪಾಲರ ಗೌರವವನ್ನು ಕಾಪಾಡುವ ಪ್ರಯತ್ನ ನಡೆಸಲಿಲ್ಲ, ಗುಂಪುಗೂಡಿದ ಜನರು ಒತ್ತಾಯಿಸಿದರೆಂದು ಅವರನ್ನು ಅಪರಾಧಿಯಂತೆ ಊರಿನ ಬೀದಿಗಳಲ್ಲಿ ಪೊಲೀಸ್ ಸ್ಟೇಷನ್ನಿನವರೆಗೂ ನಡೆಸಿಕೊಂಡು ಹೋದರು. ಬೆಳಗ್ಗೆ 11 ಗಂಟೆಗೆ ಸ್ಟೇಷನ್ನಿಗೆ ಹೋದ ಅವರು ರಾತ್ರಿ 9 ಗಂಟೆಯವರೆಗೂ ಅಲ್ಲಿಯೇ ಇರಬೇಕಾಯಿತು. ಕೊನೆಯಲ್ಲಿ ಅವರಿಂದಲೇ ತಪ್ಪೊಪ್ಪಿಗೆ ಪಡೆದುಕೊಂಡು ಕಳಿಸಲಾಯಿತು. ತಮ್ಮ ಪ್ರಿನ್ಸಿಪಾಲರಿಗೆ ಆಗುತ್ತಿದ್ದ ಅವಮಾನವನ್ನು ತಡೆಯಲು ಯತ್ನಿಸಿದ ಕೆಲವು ಹುಡುಗರು ಅಲ್ಲಿಗೆ ಬಂದಿದ್ದ ದೇಶಭಕ್ತರ ಕೈಯಲ್ಲಿ ಏಟು ತಿನ್ನಬೇಕಾಯಿತು. ಆ ಸಮಯದಲ್ಲಿ ಅವರಿಗೂ ಪೊಲೀಸರಿಂದ ಯಾವ ರಕ್ಷಣೆಯೂ ಸಿಗಲಿಲ್ಲ, ಈ ಎಲ್ಲ ಘಟನೆಗಳು ಪುರಸಭೆಯ ಕೆಲವು ಬಿಜೆಪಿ ಸದಸ್ಯರ ಸಮ್ಮುಖದಲ್ಲಿಯೇ ನಡೆದವು.



ಪ್ರಜಾ ತಾಂತ್ರಿಕ ಜನರವೇದಿಕೆ (ಪಿಡಿಎಫ್) ಹಾಗೂ ಪರ್ಯಾಯ ಕಾನೂನು ವೇದಿಕೆ (ಎಎಲ್‌ಎಫ್) ಸದಸ್ಯರು ಮತ್ತು ಒಬ್ಬ ಪತ್ರಕರ್ತರು ಫೆಬ್ರುವರಿ 6 ರಂದು ಆ ಕಾಲೇಜಿಗೆ ಭೇಟಿ ನೀಡಿ ಪ್ರಿನ್ಸಿಪಾಲರು, ವಿದ್ಯಾರ್ಥಿಗಳು, ಅಧ್ಯಾಪಕರು ಹಾಗೂ ಪೊಲೀಸರನ್ನು ಮಾತನಾಡಿಸಿದಾಗ ಈ ಎಲ್ಲ ವಿಷಯಗಳು ತಿಳಿದುಬಂದವು.

ಸಂಘಪರಿವಾರದವರು ಹೀಗೆ ತಾವು ಏನು ಮಾಡಿದರೂ ನಡೆಯುತ್ತದೆಂಬ ಭಂಡತನದಿಂದ ಪುಂಡಾಟಕೆಯಲ್ಲಿ ತೊಡಗುವುದಕ್ಕೆ ಸರ್ಕಾರವೇ ಪ್ರೋತ್ಸಾಹ ನೀಡುತ್ತಿದೆ. ಬಿಜೆಪಿ ಅಧಿಕಾರಕ್ಕೆ ಬಂದಾಗಿನಿಂದಲೂ ಆ ಪಕ್ಷದ ಶಾಸಕರು ಎಲ್ಲ ಎಲ್ಲೆಗಳನ್ನೂ ಮೀರುತ್ತಿರುವುದು ಇತ್ತೀಚಿನ ದಿನಗಳವರೆಗೂ ನಡೆದುಕೊಂಡು ಬರುತ್ತಲೇ ಇದೆ. ಇಂತಹವರ ವಿರುದ್ಧ ಸರ್ಕಾರವಾಗಲಿ, ಪೊಲೀಸರಾಗಲಿ ಯಾವ ಕ್ರಮವನ್ನೂ ತೆಗೆದುಕೊಳ್ಳದಿದ್ದರೆ ಅವರ ಕುಕೃತ್ಯಗಳಿಗೆ ಅಂತ್ಯವೇ ಇಲ್ಲದಂತಾಗುತ್ತದೆ. ಆನೇಕಲ್ಲಿನ ಪ್ರಕರಣದಲ್ಲಿ ಇಷ್ಟೆಲ್ಲಾ ದಾಂಧಲೆ ನಡೆದರೂ ಪೊಲೀಸರು ಎಬಿವಿಪಿ ಹಾಗೂ ಕರವೇ ಸದಸ್ಯರ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಿಲ್ಲ, ಇದುವರೆಗೂ 'ಅ'ನೈತಿಕ ಪೊಲೀಸರಾಗಿದ್ದ ಈ ದೇಶಭಕ್ತರು ಇನ್ನು ಮೇಲೆ ಇಲ್ಲಿನ ಜನರ ರಾಷ್ಟ್ರಭಕ್ತಿಯನ್ನು ಒರೆಗೆ ಹಚ್ಚುವ ಹೊಸ ಜವಾಬ್ದಾರಿಯನ್ನೂ ವಹಿಸಿಕೊಳ್ಳುವಂತೆ ಕಾಣುತ್ತದೆ. ಅವಕಾಶ ಸಿಕ್ಕಾಗ ಈ ಜನರಿಗೆ ಸರಿಯಾದ ಪಾಠ ಕಲಿಸಿ ಇವರನ್ನು ಅಧಿಕಾರದಿಂದ ಅಟ್ಟಿದರೆ ಮಾತ್ರ ಇವರ ಉಪಟಳಗಳಿಂದ ಈ ರಾಜ್ಯಕ್ಕೆ ಬಿಡುಗಡೆ ಸಿಗಬಹುದೇನೋ!

• ನಗರಗೆರೆ ರಮೇಶ್, ಸದಸ್ಯ ಪಿಡಿಎಫ್

ಹುಚ್ಚಾಸ್ಪತ್ರೆಯಲ್ಲಿರಬೇಕಾದವರು ದಿಯೋಬಂದ್ ಫತ್ವಾ ಸೆಲ್‌ನಲ್ಲಿ!

ಒಂದು ಪತ್ರ

ಮಾಡಲು ಕೆಲಸವಿಲ್ಲದ ಬಡಗಿ ಅದೇನನ್ನೋ ಕೆತ್ತಿದನಂತಲ್ಲಾ... ಹಾಗೆಯೇ ದಾರುಲ್ ಉಲೂಂ ದಿಯೋಬಂದ್ ಫತ್ವಾ ಸೆಲ್‌ನ ಮುಲ್ಲಾಗಳಿಗೆ ಮಾಡಲು ಕೆಲಸವಿಲ್ಲ, ಅದಕ್ಕೆ ಆಗಾಗ ಏನಾದರೊಂದು ತಲೆಹರಟೆ ಫತ್ವಾಗಳನ್ನು ನೀಡುತ್ತಿರುತ್ತಾರೆ. ಇಂತಹ ತಲೆಹರಟೆ ಮತ್ತು ಬುದ್ಧಿಗೇಡಿ ಫತ್ವಾಗಳಿಗೆ ಇತ್ತೀಚಿನ ಉದಾಹರಣೆ 'ಮುಸ್ಲಿಮರಿಗೆ ಬೀದಿ ವ್ಯಾಪಾರ ಹರಾಂ'.

ಎರಡು ವರ್ಷಗಳ ಹಿಂದೆ ಬೆಂಗಳೂರಿನ ಶಿವಾಜಿನಗರದಲ್ಲಿ ಬೀದಿವ್ಯಾಪಾರಿಗಳು ಫುಟ್‌ಪಾತನ್ನು ಕಬಳಿಸಿದ್ದರಿಂದಾಗಿ ಪಾದಚಾರಿಗಳು ರಸ್ತೆ ಮಧ್ಯೆಯೇ ನಡೆದುಹೋಗುತ್ತಿದ್ದರು. ಹಾಗೆ ರಸ್ತೆ ಮಧ್ಯೆ ನಡೆದುಹೋಗುತ್ತಿದ್ದ ಇಬ್ಬರು ಪಾದಚಾರಿಗಳ ಮೇಲೆ ಘನವಾಹನವೊಂದು ಹರಿದು ಆ ಅಮಾಯಕರು ಸಾವಿಗೀಡಾಗಿದ್ದರು. ಇದರಿಂದ ನೊಂದ ಶಿವಾಜಿನಗರದ ಮುನೀರ್‌ಅಹ್ಮದ್ ಎಂಬವರೊಬ್ಬರು ಬೀದಿ ವ್ಯಾಪಾರದ ಕುರಿತಂತೆ ಇಸ್ಲಾಮೀ ಶರೀಯತ್ ಕಾನೂನಿನ ನಿಲುವೇನೆಂದು ಪ್ರಶ್ನಿಸಿ ದಿಯೋಬಂದ್ ಫತ್ವಾ ಸೆಲ್‌ಗೆ ಪತ್ರವೊಂದನ್ನು ಬರೆದಿದ್ದರು. ಅದಕ್ಕುತ್ತರವಾಗಿ "ಮುಸ್ಲಿಮರಿಗೆ ಬೀದಿ ವ್ಯಾಪಾರ ಹರಾಂ" ಎಂಬ ಹುಚ್ಚು ಫತ್ವಾ ನೀಡಿದ್ದಾರೆ ಈ ತಲೆಕೆಟ್ಟ ಮುಲ್ಲಾಗಳು. ಪ್ರತಿಯೊಂದಕ್ಕೂ ಖುರಾನ್, ಹದೀಸ್ ಎಂದೇ ಮಾತನಾಡುವ ಈ ಮುಲ್ಲಾಗಳು ಖುರಾನ್ ಮತ್ತು ಹದೀಸ್‌ನಲ್ಲಿ ಇಂತಹ ವಿಚಾರ ಎಲ್ಲಿದೆ ಎಂದು ಜಾಹೀರುಪಡಿಸಲಿ. "ದಾರಿ ಹೋಕರಿಗೆ ತೊಂದರೆಯಾಗುವಂತಹ ಯಾವುದೇ ರೀತಿಯ ಕ್ರಿಯೆಗಳು ಹರಾಂ" ಎಂದು ಮಾತ್ರ ಇಸ್ಲಾಮೀ ಕಾನೂನು ಬೋಧಿಸುತ್ತದೆಯೇ ಹೊರತು ಬೀದಿ ವ್ಯಾಪಾರ ಹರಾಂ ಎಂದು ಎಲ್ಲೂ ಹೇಳಿಲ್ಲ, ದಾರಿಹೋಕರಿಗೆ ತೊಂದರೆಯಾಗದ ರೀತಿಯಲ್ಲಿ ವ್ಯಾಪಾರ ಮಾಡಿ ಎಂದು ಬೀದಿವ್ಯಾಪಾರಿಗಳಿಗೆ ಕರೆ ಕೊಡುವುದರ ಬದಲಾಗಿ ಅವರ ಜೀವನಾಧಾರವನ್ನೇ ಧರ್ಮಬಾಹಿರ ಎನ್ನುವ ಈ ಮುಲ್ಲಾಗಳು ಮುಸ್ಲಿಂ ಸಮಾಜದ ನೈಜ ಸಮಸ್ಯೆಗಳ ಕುರಿತಂತೆ ಎಂದೂ ಮಾತನಾಡಿದ್ದಿಲ್ಲ, ದೇಶದ ಬೀದಿವ್ಯಾಪಾರಿಗಳಲ್ಲಿ ಎಷ್ಟು ಕಡಿಮೆಯೆಂದರೂ 20% ಮುಸ್ಲಿಮರಿದ್ದಾರೆ: ಅವರ್‍ಯಾರೂ ಬೀದಿವ್ಯಾಪಾರ ಮಾಡಬಾರದೆಂದಿದ್ದರೆ ಅವರನ್ನು ಮತ್ತು ಅವರ ಕುಟುಂಬದವರನ್ನು ಈ ಬುದ್ಧಿಗೇಡಿ ಮುಲ್ಲಾಗಳು ಸಾಕುತ್ತಾರೆಯೇ?

ತಮ್ಮನ್ನು ತಾವು ಭಾರತದ ಮುಸ್ಲಿಮರ ಆಗುಹೋಗುಗಳನ್ನು ನಿರ್ಧರಿಸುವವರೆಂದು ಭ್ರಮಿಸಿರುವ ಈ ಫತ್ವಾಕೋರ ಮುಲ್ಲಾಗಳನ್ನು ಪ್ರಜ್ಞಾವಂತ ಮತ್ತು ಸುಶಿಕ್ಷಿತ ಮುಸ್ಲಿಮರ್‍ಯಾರೂ ಗಂಭೀರವಾಗಿ ಪರಿಗಣಿಸುವುದಿಲ್ಲ, ಆದರೆ ಕೆಲವು ಮಾಧ್ಯಮಗಳು ಈ ತಲೆಕೆಟ್ಟ ಮುಲ್ಲಾಗಳೇ ಸಮಸ್ತ ಮುಸ್ಲಿಂ ಸಮಾಜದ ಆಗುಹೋಗುಗಳನ್ನು ನಿರ್ಧರಿಸುವ ಅಧಿಕೃತ ಹಕ್ಕುದಾರರು ಎಂದು ಇವರ ಹುಚ್ಚಾಟಗಳಿಗೆ ಇನ್ನಿಲ್ಲದ ಪ್ರಚಾರ ನೀಡುತ್ತಿವೆ.

ಈ ಮೂಲಭೂತವಾದಿ ಮುಲ್ಲಾಗಳು ಮುಸ್ಲಿಂ ಸಮಾಜದ ಬದುಕಿನ ಬವಣೆಗಳಿಗೆ ಎಂದೂ ಸ್ಪಂದಿಸಿದವರಲ್ಲ, ಪ್ರಸ್ತುತ ದೇಶದ ಮುಸ್ಲಿಮರನ್ನು ಕಾಡುತ್ತಿರುವ ಅನಕ್ಷರತೆ, ಬಡತನ, ನಿರುದ್ಯೋಗ, ಮುಸ್ಲಿಂ ಸಮಾಜದಲ್ಲಿ ಹಾಸುಹೊಕ್ಕಾಗಿರುವ ಮೌಢ್ಯಗಳು, ಮುಸ್ಲಿಮರು ದಿನನಿತ್ಯದ ಬದುಕಿನಲ್ಲಿ ಎದುರಿಸಬೇಕಾಗಿರುವ ಕೋಮುವಾದಿ ಷಡ್ಯಂತ್ರಗಳು, ಭಯೋತ್ಪಾದಕ ಸಮುದಾಯವೆಂಬ ಸುಳ್ಳಾರೋಪಗಳು, ಸಮಾಜಕ್ಕಂಟಿದ ಅತಿದೊಡ್ಡ ಶಾಪವಾದ ವರದಕ್ಷಿಣೆ ಇವ್ಯಾವುವೂ ಈ ಮುಲ್ಲಾಗಳನ್ನು ಎಂದೂ ಕಾಡಿದ್ದಿಲ್ಲ.

ಬರೀ ವರದಕ್ಷಿಣೆಯೆಂಬ ಪಿಡುಗಿನ ಕುರಿತು ಹೇಳುವುದಾದರೆ ಅದರಿಂದಾಗಿ ಬೀದಿಗೆ ಬಿದ್ದ ವೇಶ್ಯಾವಾಟಿಕೆಯ ಜಾಲಕ್ಕೆ ನೂಕಲ್ಪಟ್ಟ, ಆತ್ಮಹತ್ಯೆಗೆ ಶರಣಾಗುತ್ತಿರುವ ಮುಸ್ಲಿಂ ಸಹೋದರಿಯರ ಸಂಖ್ಯೆ ದಿನನಿತ್ಯ ಏರುತ್ತಲೇ ಇದೆ. ಆದರೆ ಈ ಕುರಿತಂತೆ ಈ ಮುಲ್ಲಾಗಳು ಎಂದೂ ಮಾತೆತ್ತುವುದಿಲ್ಲ. ಈ ಕುರಿತಂತೆ ಇವರಲ್ಲಿ ಮುಸ್ಲಿಂ ಸಮುದಾಯದ ಪ್ರಜ್ಞಾವಂತರು ಕೇಳಿದ ಪ್ರಶ್ನೆಗಳಿಗೆ ವರದಕ್ಷಿಣೆಯನ್ನು ಹರಾಂ ಎನ್ನಲು ಖುರಾನ್ ಮತ್ತು ಹದೀಸ್‌ನಲ್ಲಿ ಪುರಾವೆಗಳು ಸಿಗುತ್ತಿಲ್ಲ ಎಂದು ವಾದಿಸುತ್ತಾರೆ. ಈ ಮುಲ್ಲಾಗಳಿಗೆ ನಮ್ಮ ಪ್ರಶ್ನೆಯೇನೆಂದರೆ "ಇಸ್ಲಾಂನಲ್ಲಿ ಮಹ್‌ರ್ (ವಧುದಕ್ಷಿಣೆ) ಕಡ್ಡಾಯ. ವರದಕ್ಷಿಣೆಯ ಕುರಿತ ಪ್ರಸ್ತಾಪ ಖುರಾನ್ ಮತ್ತು ಹದೀಸ್‌ಗಳಲ್ಲಿ ಇಲ್ಲವಾದರೂ ವರದಕ್ಷಿಣೆ ಮತ್ತು ವಧುದಕ್ಷಿಣೆ ಎಂಬ ಎರಡು ತದ್ವಿರುದ್ಧ ಆಚಾರಗಳು ಒಂದೇ ಸಿಸ್ಟಮ್‌ನೊಳಗೆ ಇರಲು ಸಾಧ್ಯವೇ? ಒಂದು ವೇಳೆ ಸಾಧ್ಯವೆಂದಾದರೆ ಇಸ್ಲಾಂನ್ನು ವಿರೋಧಾಭಾಸಗಳ ಆಗರ ಎಂದಂತಾಗುವುದಿಲ್ಲವೇ? ಖುರಾನ್ ಮತ್ತು ಹದೀಸ್‌ನ ಆಧಾರದಲ್ಲಿಯೇ ವರದಕ್ಷಿಣೆ ಹರಾಂ ಎನ್ನಲು ಇದಕ್ಕಿಂತ ದೊಡ್ಡ ಪುರಾವೆ ಬೇರೇನು ಬೇಕು?

ಸಾನಿಯಾ ಮಿರ್ಜಾಳ ಡ್ರೆಸ್ ಕೋಡ್ ವಿರುದ್ಧ, ಸಾನಿಯಾ-ಶೋಯೆಬ್ ಮಲಿಕ್ ಮದುವೆಗೆ ಮುಂಚೆ ಒಂದೇ ಮನೆಯಲ್ಲಿ ವಾಸ್ತವ್ಯವಿದ್ದುದರ ವಿರುದ್ಧ, ಯಾವುದೋ ಮುಸ್ಲಿಂ ನಾಮಧಾರಿ ನಟನ ಹೇಳಿಕೆಗಳ, ಕೃತ್ಯಗಳ ವಿರುದ್ಧ ಫತ್ವಾ ನೀಡುತ್ತಾ ದೇಶದಾದ್ಯಂತ ನಗೆಪಾಟಲಿಗೀಡಾಗಿರುವ ಈ ಮುಲ್ಲಾಗಳು ಮಾನಸಿಕ ಆಸ್ಪತ್ರೆಯಲ್ಲಿರಬೇಕಾಗಿತ್ತು.

ಭಾರತದಂತಹ ರಾಷ್ಟ್ರದಲ್ಲಿ ಒಬ್ಬಾತ ಹೇಗೆ ಡ್ರೆಸ್ ಮಾಡಬೇಕು, ಹೇಗೆ ಬದುಕಬೇಕು ಎಂದೆಲ್ಲಾ ಧಾರ್ಮಿಕ ನೆಲೆಯಲ್ಲಿ ನಿರ್ಧರಿಸುವ ಹಕ್ಕನ್ನು ಈ ದೇಶದ ಸಂವಿಧಾನ ಯಾವುದೇ ಧಾರ್ಮಿಕ ಸಂಸ್ಥೆಗೋ ಯಾವುದೇ ಧಾರ್ಮಿಕ ಮುಖ್ಯಸ್ಥನಿಗೋ ನೀಡಿಲ್ಲ, ಆದರೆ ಒಬ್ಬ ವ್ಯಕ್ತಿಯ ಹೇಳಿಕೆಯೋ ಕೃತ್ಯವೋ ಯಾರದ್ದೇ ಧಾರ್ಮಿಕ ಭಾವನೆಗಳಿಗೆ ಘಾಸಿಯನ್ನುಂಟುಮಾಡಿದ್ದರೆ ಆತನ ವಿರುದ್ಧ ನ್ಯಾಯಾಲಯದಲ್ಲಿ ದಾವೆ ಹೂಡುವ ಸ್ವಾತಂತ್ರ್ಯ ಮತ್ತು ಹಕ್ಕನ್ನು ಈ ದೇಶದ ಸಂವಿಧಾನ ಇಲ್ಲಿನ ಪ್ರತಿಯೊಬ್ಬ ಪ್ರಜೆಗೂ ಮುಕ್ತವಾಗಿರಿಸಿದೆ. ಒಬ್ಬ ವ್ಯಕ್ತಿಯ ವೈಯಕ್ತಿಕ ವಿಚಾರಗಳು, ಹೇಳಿಕೆಗಳು ಮುಸ್ಲಿಂ ಸಮುದಾಯದ ಒಪ್ಪಿತ ನಿಲುವು ಎಂದು ಇಲ್ಲಿನ ಯಾವನೇ ಮುಸ್ಲಿಮನೂ, ಮುಸ್ಲಿಮೇತರನೂ ಒಪ್ಪಿಕೊಳ್ಳುವುದಿಲ್ಲ ಮಾತ್ರವಲ್ಲ ಒಪ್ಪಿಕೊಳ್ಳಲಾಗದು. ಸಾನಿಯಾ, ಶೋಯೆಬ್, ಯಾವುದೋ ಚಿತ್ರನಟ ಮುಸ್ಲಿಂ ಸಮುದಾಯದ ರೋಲ್ ಮಾಡೆಲ್‌ಗಳೇನೂ ಅಲ್ಲ, ಅವರು ಮಾಡುವುದೇ ಇಸ್ಲಾಮೀ ಆಚರಣೆಗಳೇನೂ ಅಲ್ಲ.

ಮುಸ್ಲಿಂ ಸಮಾಜದ ನೈಜ ಸಂಕಷ್ಟಗಳಿಗೆ ಪರಿಹಾರ ಸೂಚಿಸುವ ನಿಟ್ಟಿನಲ್ಲಿ ಎಂದೂ ಕಾರ್ಯಾಚರಿಸದ ಈ ದಿಯೋಬಂದೀ ಮುಲ್ಲಾಗಳ "ಬೀದಿ ವ್ಯಾಪಾರ ಹರಾಂ" ಎಂಬ ಫತ್ವಾದ ಜೆರಾಕ್ಸ್ ಪ್ರತಿಗಳನ್ನು ಇಟ್ಟುಕೊಂಡು ಬೆಂಗಳೂರಿನ ಕೆಲವು ಪೊಲೀಸರು 'ನಿಮ್ಮ ಧರ್ಮದ ಪ್ರಕಾರ ಬೀದಿ ವ್ಯಾಪಾರವೇ ಹರಾಂ' ಎಂದು ಬಡಪಾಯಿ ಬೀದಿವ್ಯಾಪಾರಿಗಳಿಗೆ ಕಾಟ ಕೊಡಲಾರಂಭಿಸಿದ್ದಾರೆ. ದಿಯೋಬಂದೀ ಮುಲ್ಲಾಗಳ ಇತರೆಲ್ಲಾ ತಲೆಹರಟೆ ಫತ್ವಾಗಳನ್ನು 'ಹುಚ್ಚು' ಎಂದು ಸುಮ್ಮನಾಗಬಹುದಿತ್ತು, ಆದರೆ ಬಡ ಬೀದಿವ್ಯಾಪಾರಿಗಳ ಹೊಟ್ಟೆಗೆ ಹೊಡೆಯುವ ಫತ್ವಾದ ವಿರುದ್ಧ ಪ್ರಜ್ಞಾವಂತ ಮತ್ತು ಬುದ್ಧಿಜೀವಿ ಮುಸ್ಲಿಮರು ಧ್ವನಿಯೆತ್ತಲೇಬೇಕಾಗಿದೆ.

• ಇಸ್ಮತ್ ಫಜೀರ್

ಹತ್ತು ಮೋಡಗಳನ್ನು ನೋಡಿದವನಿಗೆ ಯಾವುದೋ ...ಸೆ. ಇವತ್ತಾದರೂ ಮಳೆ ಸುರಿದೀತೆಂಬ ಆಶಯ. ...ದಿಂದ ಸೇರುತ್ತಿದ್ದವಾದರೂ ತಮ್ಮಲ್ಲೇ ಜಗಳವಾಡಿ ...ದಂತೆ ದೂರಾಗಿಬಿಡುತ್ತಿದ್ದವು. ಇಂದಲ್ಲ ನಾಳೆ ಮಳೆ ...ಕೇ ಬರುವುದೆಂಬ ನಿರೀಕ್ಷೆಯಿಂದ ಉಳುಮೆ ಮಾಡಿ ...ಗೆ ಹಿಂದಿರುಗುತ್ತಿದ್ದ ರಾಮೇಗೌಡ. ಮಲೆನಾಡಿನಲ್ಲೇ ...ತ್ತಿ ಬೆಳೆದವನಿಗೆ ಮಳೆಗಾಗಿ ಕಾಯುವುದು ...ಪವೆಂಬಂತೆ ತೋರುತ್ತಿತ್ತು. ನಾಲ್ಕು ವರ್ಷದ ಹಿಂದೆ ...ಬಯಲುಸೀಮೆಗೆ ಬಂದಿದ್ದಾನೆ. "ಹಿಂದಿನ ವರ್ಷಗಳಲ್ಲಿ ...ಚೆನ್ನಾಗಿತ್ತು, ಈ ವರ್ಷ ಯಾಕೋ ಅದೃಷ್ಟವಿದ್ದಂತಿಲ್ಲ" ...ಸುಕೊಂಡು ಮನೆಗೆ ಬಂದವನಿಗೆ ಹೆಂಡತಿಯ ...ರಾಗಾಟ ಕೇಳಿತು. ಈಗದು ಅಭ್ಯಾಸವಾಗಿದ್ದರಿಂದ ...ಲಕ್ಷಿಸಲಿಲ್ಲ. ಎತ್ತುಗಳನ್ನು ಕೊಟ್ಟಿಗೆಯಲ್ಲಿ ಕಟ್ಟಿ ...ಮೇವು ಒಂದಷ್ಟು ಒಣಹುಲ್ಲು ಹಾಕಿ ಬಂದ. ಜನರಿಗೇ ...ಸಲು ಕಷ್ಟವಾಗಿರುವಾಗ ಎತ್ತುಗಳು ಬಡಕಲಾಗಿರುವು... ಯಾವುದೇ ವಿಶೇಷ ಕಾಣಲಿಲ್ಲ. ಕೈಕಾಲು ತೊಳೆದು ...ಡು ಹೋಗಿ ತಂದೆ ತಾಯಿಯ ಫೋಟೊಗೊಮ್ಮೆ ...ಮುಗಿದು ಚಾಪೆ ಹಾಸಿಕೊಂಡು ಅಡ್ಡಾದ. ಅಡುಗೆ ...ಯಿಂದ ಹೊರಬಂದ ಹೆಂಡತಿ "ಊರವರೆಲ್ಲಾ ಆಡಿ ...ದ್ದಾರೆ. ದುಡ್ಡು ಉಳಿಸೋದಿಕ್ಕೆ ಈ ಗೌಡ ಅಪ್ಪನ ... ಕಾರ್ಯಾನು ಮಾಡ್ತಿಲ್ಲ ಅಂತ. ದೇವರೆಡೆಗೆ ಅಸಡ್ಡೆ



ಸಮಾಧಿ ಹೋಟ್ಲು

...ರೋದಿಕ್ಕೆ ಇವರಿಗೆ ಮಕ್ಕಳಾಗಿಲ್ಲ ಅಂತಾ" ಎಂದು ...ರಾದಳು. ಆಕೆ ಕಣ್ಣೀರು ಹಾಕಿದ್ದು ಮಕ್ಕಳಿಲ್ಲ ಎಂಬು...ಕ್ಕೋ ಅಥವಾ ಶ್ರಾದ್ಧ ಮಾಡ್ತಿಲ್ಲವೆಂಬುದಕ್ಕೋ ...ವಾಜಿಸಲಾಗಲಿಲ್ಲ ಗೌಡನಿಗೆ, "ನೋಡು ಕಮಲ, ಜನ ...ವರ ಹೇಳಲಿ, ನಮ್ಮತ್ರ ಇರೋದೇ ಸ್ವಲ್ಪ ದುಡ್ಡು. ...ನ್ನೂ ಶ್ರಾದ್ಧಕ್ಕೆಂತ ಅವರಿವರ ಬಾಯಿಗೆ ಹಾಕಿಬಿಟ್ಟರೆ ... ಬಾಯಿಗೆ?" ಎಂದು ಮಗ್ಗುಲು ಬದಲಿಸಿದ. ಇನ್ನು ...ತನಾಡಿ ಉಪಯೋಗವಿಲ್ಲವೆಂದು ಅರಿತು ಮತ್ತೆ ...ಣಗುತ್ತಾ ಅಡುಗೆಮನೆ ಸೇರಿದಳು.

...ರಾಮೇಗೌಡ ಆಗಿನ್ನೂ ಮಲೆನಾಡಿನಲ್ಲಿದ್ದ. ಘಟ್ಟದ ...ಲೆ ಆಸ್ತಿ ಎಂಬುದು ಬಹಳವಿರಲಿಲ್ಲವಾದರೂ ...ಯವರೆಲ್ಲಾ ಮೈಮುರಿದು ದುಡಿಯುತ್ತಿದ್ದುದರಿಂದ ...ಟ ಬಟ್ಟೆಗೆ ಕೊರತೆಯಿರಲಿಲ್ಲ. ದುಂದುವೆಚ್ಚ ಮಾಡು...ಲ್ಲವಾಗಿ ದುಡ್ಡನ್ನೂ ಕೂಡಿಸಿಟ್ಟಿದ್ದರು. ಐದು ವರ್ಷದ ...ದೆ ರಾಮೇಗೌಡನ ತಾಯಿ ಅಕಾಲ ಮರಣಕ್ಕೆ ತುತ್ತಾ...ಗ ತಂದೆ 'ವೃಥಾ ಖರ್ಚು' ಎಂದರೂ ಲೆಕ್ಕಿಸದೆ ಹಳ್ಳಿಗೆ ...ರೂ ಬೆಚ್ಚಿಬೀಳುವಂತೆ ಶ್ರಾದ್ಧ ಕಾರ್ಯ ಮಾಡಿದ್ದ. ...ರವರೆಲ್ಲಾ ಸಂತೃಪ್ತರಾದರು. ತಾಯಿಗೊಂದು ಸಮಾಧಿ ...ನ್ನೂ ಕಟ್ಟಿಸಿ ಸಿರಿವಂತರ ಹೊಟ್ಟೆ ಉರಿಸಿದ್ದ. ಮುಂಜಾನೆ ...ಗೊಮ್ಮೆ ತಾಯಿಯ ಸಮಾಧಿಯ ಬಳಿ ಹೋಗಿ ...ದು ನಿಮಿಷ ಕುಳಿತು ಬರುವುದು ಆತನ ದಿನಚರಿಯ ...ಭಾಗವಾಯಿತು. ಇದ್ದೆರಡು ತೆಂಗಿನಮರದಿಂದ ನೀರಾ ...ಸಿ ಕುಡಿಯುತ್ತಿದ್ದವನು ಸಮಾಧಿ ಕಟ್ಟಿಸಿದ ಮೇಲೆ ...ನ್ನೂ ನಿಲ್ಲಿಸಿಬಿಟ್ಟ. ವಾರಕ್ಕೋ ತಿಂಗಳಿಗೊಮ್ಮೆಯೋ ...ಸಾರಾಯಿ ಅಂಗಡಿಗೆ ಹೋಗಿ ಒಂದೆರಡು ಪಾಕೇಟು ...ತರುತ್ತಿದ್ದನಷ್ಟೇ.

ಎಲ್ಲವೂ ಸುಸೂತ್ರವಾಗಿ ಸರಾಗವಾಗಿ ನಡೆಯುತ್ತಿದೆ ಎನ್ನುವಾಗಲೇ 'ರಾಷ್ಟ್ರೀಯ ಉದ್ಯಾನವನ ಯೋಜನೆ' ಎಂಬ ಭೂತ ಕೇಳಿಬಂತು. ನಮ್ಮನ್ನೆಲ್ಲಾ ಓಡ್ದೋಡಿಸುತ್ತಾರಂತೆ ಅನ್ನೋ ವದಂತಿಗಳೂ ಹಬ್ಬಿದವು. ಇರೋದು ಪ್ರಜಾ ಸರಕಾರ, ಕಾಲಾಂತರದಿಂದ ಇಲ್ಲೇ ಇರುವವರಿಗೆ 'ಇದು ನೀವಿರುವ ಜಾಗವಲ್ಲ, ನಡೀರಿ ಆಚೆಗೆ' ಎಂದು ಹೇಳಲಾರರು ಎಂದೇ ನಂಬಿದ್ದ ರಾಮೇಗೌಡ. ಭೂತದ ನೆರಳಿನಂತೆ ಸಾಲುಸಾಲು ವಾಹನಗಳು, ತಮ್ಮತಮ್ಮಲ್ಲೇ ಮಾತನಾಡಿಕೊಳ್ಳುತ್ತಾ ಸರ್ವೇ ಮಾಡುತ್ತಿರುವ ಅಧಿಕಾರಿಗಳನ್ನು ನೋಡಿದ ಮೇಲೇ ಏನೋ ಆಗಲಿದೆ ಎಂಬ ಭಯದ ಭಾವನೆ. ಹೆಚ್ಚಿನ ಜನರು ವ್ಯವಸಾಯ ಮಾಡುತ್ತಿದ್ದ ಜಾಗವೆಲ್ಲಾ ಕಾಡಿನ ಭಾಗ ಎಂದು ಮಾಡಿ ಅವರಿಗೆ ಯಾವುದೇ ಪರಿಹಾರ ವಿಲ್ಲವೆಂದು ಹೇಳುತ್ತಿದ್ದಾರೆಂಬ ಸುದ್ದಿ ಹಬ್ಬಿತು. ಕಾಡು ಮರದ ನೆಲ್ಲಿ ಕೀಳುವುದೂ ಅಪರಾಧವಂತೆ ಎಂದರು. ಮರಿ ಪುಢಾರಿಗಳ ನೇತೃತ್ವದಲ್ಲಿ ಸಣ್ಣ ಪುಟ್ಟ ಪ್ರತಿಭಟನೆಗಳೂ ನಡೆದವು. ಅಧಿಕಾರಿಗಳದೊಂದು ತಂಡ ಹಳ್ಳಿಹಳ್ಳಿಗೂ ಬಂದು ಕಾಡಿನ ಪರಿಸರದ ಮಹತ್ವ, ಆ ಪರಿಸರದಲ್ಲಿ ಮಾನವನ ವಾಸ ಕಾಡುಪ್ರಾಣಿಗಳಿಗೆ ಎಷ್ಟು ಹಾನಿ ಉಂಟುಮಾಡಬಲ್ಲದು ಎಂಬುದನ್ನು ಚಿತ್ರಸಹಿತ ವಿವರಿಸಿದರು. 'ನಾವೂ ಪರಿಸರದ ಒಂದು ಭಾಗವಲ್ಲವಾ?'

ಎಂಬ ಪ್ರಶ್ನೆ ರಾಮೇಗೌಡನ ಮನದಲ್ಲಿ ಮೂಡಿತಾದರೂ ಡಿಗ್ರಿ ಪಡೆದವರಿಗಿಂತ ನನಗೆಂತ ತಿಳಿದೀತು ಎಂದು ಸುಮ್ಮನಾದ. ರಾಮೇಗೌಡನ ವ್ಯವಸಾಯದ ಒಂದಷ್ಟು ಪಾಲು ಭೂಮಿಯನ್ನೂ ಕಾಡಿನ ಭಾಗವೆಂದು ಗುರುತಿಸಿದ್ದರು, ಪರಿಹಾರ ಕಡಿಮೆಯಾಗು ವುದೆಂಬ ಚಿಂತೆಯಾಯಿತು.

ಇವೆಲ್ಲಾ ಘಟನೆಗಳ ನಡುವೆಯೇ ಹೆಗಲಿಗೆ ಎರಡಡಿ ಬಂದೂಕು ನೇತುಹಾಕಿಕೊಂಡವರು ಘಟ್ಟದಲ್ಲೆಲ್ಲಾ ಕಾಣಿಸಲಾರಂಭಿಸಿದರು. ರಾಮೇಗೌಡನ ಮನೆಗೂ ಭೇಟಿ ನೀಡಿ 'ಯಾವುದೇ ಕಾರಣಕ್ಕೂ ನೀವಿಲ್ಲಿಂದ ತೆರಳಬೇಡಿ. ನಾವು ನಿಮಗಾಗಿ ಹೋರಾಡುತ್ತೇವೆ. ಸರಕಾರದ ಬೂಟಾಟಿಕೆಯ ಮಾತಿಗೆ ಮರುಳಾಗಬೇಡಿ' ಎಂದು ಹೇಳಿ ಒಂದಷ್ಟು ದಿನಸಿಯನ್ನೂ ಪಡೆದು ಹೋಗಿದ್ದರು. ಊರ ಹೈಕಳ ಬಾಯಲ್ಲೆಲ್ಲಾ ಕಾಣದ ಚೀನಾದ ಮಾವೋನ ಹೆಸರು, ನಕ್ಸಲ್ಬಾರಿ ಎಂಬ ಊರಿನ ಹೆಸರು ನಲಿಯಲಾರಂಭಿಸಿತು. ಅವಳ ಮಗ, ಇನ್ನೊಬ್ಬನ ತಂಗಿ, ಮಗದೊಬ್ಬರು ಕೂಡ ಅವರ ಗುಂಪಿಗೆ ಸೇರಿ ಬಂದೂಕಿನೊಡನೆ ಹಳ್ಳಿಗಳಲ್ಲಿ ಓಡಾಡುತ್ತಿದ್ದಾರಂತೆ ಎಂಬ ವಾರ್ತೆ ಕೇಳಿಬರುತ್ತಿತ್ತು. ರಾಮೇಗೌಡನ ಮಿತ್ರ ಪ್ರಕಾಶ ಕೂಡ ಅವರೊಡನೆ ಹೋಗಿದ್ದನ್ನು ಕೇಳಿ ವಿಚಲಿತಗೊಂಡಿದ್ದ. ಈ ಮಧ್ಯೆ ಆಗಾಗ ಕಾಡಿನ

ಕತೆ

• ಡಾ. ಅಶೋಕ್. ಕೆ. ಆರ್. ಸುಳ್ಯ

ಎಲ್ಲವೂ ಸುಸೂತ್ರವಾಗಿ ಸರಾಗವಾಗಿ ನಡೆಯುತ್ತಿದೆ ಎನ್ನುವಾಗಲೇ 'ರಾಷ್ಟ್ರೀಯ ಉದ್ಯಾನವನ ಯೋಜನೆ' ಎಂಬ ಭೂತ ಕೇಳಿಬಂತು. ನಮ್ಮನ್ನೆಲ್ಲಾ ಓಡ್ದೋಡಿಸುತ್ತಾರಂತೆ ಅನ್ನೋ ವದಂತಿಗಳೂ ಹಬ್ಬಿದವು. ಇರೋದು ಪ್ರಜಾ ಸರಕಾರ, ಕಾಲಾಂತರದಿಂದ ಇಲ್ಲೇ ಇರುವವರಿಗೆ 'ಇದು ನೀವಿರುವ ಜಾಗವಲ್ಲ, ನಡೀರಿ ಆಚೆಗೆ' ಎಂದು ಹೇಳಲಾರರು ಎಂದೇ ನಂಬಿದ್ದ ರಾಮೇಗೌಡ. ಭೂತದ ನೆರಳಿನಂತೆ ಸಾಲುಸಾಲು ವಾಹನಗಳು, ತಮ್ಮತಮ್ಮಲ್ಲೇ ಮಾತನಾಡಿಕೊಳ್ಳುತ್ತಾ ಸರ್ವೇ ಮಾಡುತ್ತಿರುವ ಅಧಿಕಾರಿಗಳನ್ನು ನೋಡಿದ ಮೇಲೇ ಏನೋ ಆಗಲಿದೆ ಎಂಬ ಭಯದ ಭಾವನೆ. ಹೆಚ್ಚಿನ ಜನರು ವ್ಯವಸಾಯ ಮಾಡುತ್ತಿದ್ದ ಜಾಗವೆಲ್ಲಾ ಕಾಡಿನ ಭಾಗ ಎಂದು ಮಾಡಿ ಅವರಿಗೆ ಯಾವುದೇ ಪರಿಹಾರವಿಲ್ಲವೆಂದು ಹೇಳುತ್ತಿದ್ದಾರೆಂಬ ಸುದ್ದಿ ಹಬ್ಬಿತು. ಕಾಡು ಮರದ ನೆಲ್ಲಿ ಕೀಳುವುದೂ ಅಪರಾಧವಂತೆ ಎಂದರು. ಮರಿ ಪುಢಾರಿಗಳ ನೇತೃತ್ವದಲ್ಲಿ ಸಣ್ಣಪುಟ್ಟ ಪ್ರತಿಭಟನೆಗಳೂ ನಡೆದವು.

ನಡುಮಧ್ಯದಿಂದ ಗುಂಡಿನ ಮೊರೆತ ಕೇಳಿಬರುತ್ತಿತ್ತು. ಶತಮಾನಗಳಿಂದ ರಸ್ತೆ ಕಾಣದಿದ್ದ ಪ್ರದೇಶಗಳಲ್ಲೂ ಪೊಲೀಸಿನವರ ವಾಹನಗಳು ಓಡಾಡಲು ಅನುಕೂಲವಾಗುವಂತೆ ಮಣ್ಣಿನ ರಸ್ತೆಗಳು ಉದ್ಭವವಾದವು. ಟಾರಿನ ರಸ್ತೆಗೆ ಪೂರ್ವಭಾವಿಯಾಗಿ. ಮೈಲಿಗಳಾಚೆಯ ಊರಲ್ಲಿ ಎರಡೂ ಕಡೆಯ ಜನರ ಹೆಣ ಬಿದ್ದ ಮೇಲೆ ಇನ್ನು ಈ ಊರಿನಲ್ಲಿ ಇರುವುದು ಸರಿಯಲ್ಲವೆಂಬ ಭಾವ ಬಂದು ಅಧಿಕಾರಿಗಳನ್ನು ಭೇಟಿಯಾದ. "ಎಲ್ಲಾ ಸೇರಿ ನಿನಗೆ ಎರಡು ಲಕ್ಷ ಪರಿಹಾರ" ಅಂದರು.

ಮನೆಗೆ ಬಂದು ಹೆಂಡತಿ, ತಂದೆಗೆ ವಿಷಯ ತಿಳಿಸಿದ. ತಂದೆಗೆ ಒಂದಷ್ಟು ಬೇಸರವಾದರೂ ವಾಸ್ತವವನ್ನು ಅರಿತು ಸರಿ ಎಂದರು. 'ಎಲ್ಲಿಗೆ ಹೋಗೋದು' ಎಂಬ ಪ್ರಶ್ನೆ ಮೂಡಿತು. ರಾಮೇಗೌಡನ ತಾತ ಆ ಕಾಲದಲ್ಲಿ ದೂರದ ದುಗ್ಗಳ್ಳಿ ಎಂಬಲ್ಲಿ ತೆಗೆದುಕೊಂಡಿದ್ದ, ಮೂರೆಕೆರೆಯ ಜಮೀನಿನ ನೆನಪಾಯಿತು. ರಾಮೇಗೌಡನ ತಂದೆಗೆ. "ಆ ಊರಿಗೆ ಹೋಗಿ ಬರುವ ದುಡ್ಡಿನಿಂದ ಇನ್ನೊಂದೆರಡು ಎಕರೆ ಜಮೀನು ತೆಗೆದುಕೊಂಡು ವ್ಯವಸಾಯ ಆರಂಭಿಸೋಣ" ಎಂದರು ತಂದೆ. ಇವನೂ ಒಪ್ಪಿದ. ಎಲ್ಲರ ಕೈದಾಟಿ ರಾಮೇಗೌಡನ ಕೈಗೆ ಒಂದೂವರೆ ಲಕ್ಷ ಬಂತು. ಹೋಗುವಮುನ್ನ ತಾಯಿಯ ಸಮಾಧಿಯ ಬಳಿ ನಿಂತವನಿಗೆ ಅಳು ತಡೆಯಲಾಗಲಿಲ್ಲ. ಸುತ್ತಮುತ್ತ ಯಾರೂ ಇಲ್ಲವೆಂಬುದನ್ನು ಖಚಿತಪಡಿಸಿಕೊಳ್ಳುತ್ತಾ ಒಂದಷ್ಟು ನೆಲ್ಲಿ ಕಿತ್ತುಕೊಂಡು ಜೇಬಿಗಿಳಿಸಿದ.

ಕಾಲಿಟ್ಟಲ್ಲೆಲ್ಲಾ ಹಸಿರೇ ಕಂಡವನಿಗೆ ಅಲ್ಲೊಂದಿಲ್ಲೊಂದು ಮರವಿರುವ ದುಗ್ಗಳ್ಳಿ ಮರುಭೂಮಿಯಂತೆಯೇ ಕಂಡಿತ್ತು. ನಿಧಾನಕ್ಕೆ ಆ ಭಾಗದ ಹವಾಮಾನಕ್ಕೆ ಆರಂಭ ಪದ್ಧತಿಗೆ ಹೊಂದಿಕೊಂಡರು. ಘಟ್ಟದ ಹಸಿರು ರಕ್ತದಿಂದ ತೊಯ್ದು ಹೋಗುತ್ತಿದ್ದುದನ್ನು ಕೇಳಿ ಬೇಸರಗೊಳ್ಳುತ್ತಿದ್ದ. ರಾಮೇಗೌಡನ ಊರಿನ ಬಹುತೇಕ ಮಂದಿ ಸಿಕ್ಕಷ್ಟು ಪರಿಹಾರ ತೆಗೆದುಕೊಂಡು ಊರು ತೊರೆದಿದ್ದರು. ಪ್ರಕಾಶನ ಛಿದ್ರಗೊಂಡ ದೇಹವನ್ನು ಪತ್ರಿಕೆಯಲ್ಲಿ ನೋಡಿದ ಮೇಲೆ ಮನಸ್ಸು ಅಸ್ತವ್ಯಸ್ತಗೊಂಡಿತ್ತು.

ದುಗ್ಗಳ್ಳಿಗೆ ಬಂದು ಎರಡು ವರ್ಷವಾಗಿತ್ತು, ಸಂಬಂಧಿಕರೊಬ್ಬರು ಸತ್ತಿದ್ದ ಕಾರಣ ಘಟ್ಟಕ್ಕೆ ಹೋಗಬೇಕಾಗಿ ಬಂತು. ಅವನ ಊರಿನಿಂದ ಇಪ್ಪತ್ತು ಮೈಲಿಯಾಚೆಯ ಊರದು. ಪಟ್ಟಣಕ್ಕೆ ಬಂದು ಘಟ್ಟಕ್ಕೆ ಹೋಗುವ ಬಸ್ಸನ್ನೇರಿದ. ಊರು ತಲುಪುವ ಮೊದಲು ಮೂರೂ ಬಾರಿ ಎಸ್.ಟಿ.ಎಫ್‌ನವರು ಬಸ್ಸು ತಡೆದು ಎಲ್ಲರನ್ನೂ, ಎಲ್ಲವನ್ನೂ ಪರೀಕ್ಷಿಸಿದ್ದರು. ರಾಮೇಗೌಡ ಹೈರಾಣಾಗಿದ್ದ. ಸಾವಿನ ಕಾರ್ಯವೆಲ್ಲಾ ಮುಗಿಯುವ ವೇಳೆಗೆ ಸಂಜೆಯಾಗಿತ್ತು. ತಾಯಿಯ ಸಮಾಧಿಯ ಬಳಿ ಹೋಗುವ ಮನಸ್ಸಾಯಿತು. "ಊರಲ್ಲಾ ...ರಾದರೂ ಇದ್ದಾರಾ ಹೇಗೆ?" ಎಂದು

ವಿಚಾರಿಸಿದ. "ಹೋಗೋದು ಬೇಡ. ಸರಿಯಲ್ಲ ಅಲ್ಲಿ ಈಗ" ಎಂದರು. ಅವರ ಮಾತನ್ನು ಕೇಳಿಸಿಕೊಳ್ಳದವನಂತೆ ಊರಿನ ಬಸ್ಸು ಹಿಡಿದ. ಕಲ್ಲು ಜಲ್ಲಿ ಇದ್ದ ಜಾಗದಲ್ಲಿ ನುಣುಪಾದ ರಸ್ತೆ ಮೈ ಚಾಚಿಕೊಂಡಿತ್ತು. ಊರ ಜನರನ್ನೆಲ್ಲಾ ಸ್ಥಳಾಂತರಿಸಿದ ಮೇಲೆ ಇಷ್ಟು ಚೆಂದದ ರಸ್ತೆ ಯಾಕೋ ಅಂದುಕೊಂಡ.

ಊರಿಗಿನ್ನೊಂದು ಮೈಲಿ ಇರುವಾಗ 'ನಿಸರ್ಗ ಪ್ರವಾಸೋದ್ಯಮ ವಲಯಕ್ಕೆ ಸ್ವಾಗತ' ಎಂಬ ಬೋರ್ಡು ಕಾಣಿಸಿತು. ಊರಲ್ಲಿ ಇಳಿದವನಿಗೆ ಅಲ್ಲಿನ ಸುಸಜ್ಜಿತ ಬಸ್ ನಿಲ್ದಾಣ, ನಿಮಿಷಕ್ಕೊಂದರಂತೆ ಸಾಗುವ ಐಷಾರಾಮಿ ವಾಹನಗಳು, ವಾಹನಗಳಿಂದ ಬರುವ ಪಾನಮತ್ತರ ಕೇಕೆ... ಎಲ್ಲವೂ ಅಯೋಮಯ. ತನ್ನ ಮನೆಯ ಕಡೆ ಕಾಲುಹಾಕಿದ. ಹಸಿರು ಹುಲ್ಲ ನಡುವಿದ್ದ ಕಾಲುದಾರಿಯ ಜಾಗದಲ್ಲಿ ಐದಡಿಯ ಡಾಂಬರು ರಸ್ತೆಯಿತ್ತು. 'ಸುಭೋದ್ ಜಂಗಲ್ ರೆಸಾರ್ಟ್ಸ್' ಎಂಬ ಫಲಕ ಕಣ್ಣಿಗೆ ಬಿತ್ತು. ತನ್ನ ಮನೆಯ ಕಡೆಗೆ ತಿರುಗಿದವನಿಗೆ ಕಂಡಿದ್ದು ಆಳೆತ್ತರದ ಗೇಟು. ಗೇಟಿನ ಬಳಿ ಒಬ್ಬ ಕಾವಲುಗಾರ ನಿಂತಿದ್ದ. ಈತನನ್ನು ನೋಡಿ ಆತ ಪರಿಚಯದ ನಗೆ ನಕ್ಕು ಹತ್ತಿರ ಬಂದ. "ಅರೆರೆ ಈತ ಪ್ರಕಾಶನ ಚಿಕ್ಕಪ್ಪನ ಮಗ ಶಂಕರನಲ್ಲವೇ?" ಎಂದುಕೊಳ್ಳುತ್ತಾ ಆತನ ಬಳಿ ಬಂದ. ಕುಶಲೋಪರಿಯೆಲ್ಲಾ ಮುಗಿದ ಮೇಲೆ "ಇದೇನಿದು, ನಮ್ಮ ಮನೆಯ ಜಾಗದಲ್ಲಿ ಯಾವುದೋ ಹೋಟ್ಲಿದ್ದ ಹಾಗಿದೆ?" ಎಂದು ಕೇಳಿದ. ಶಂಕರ ಅಲ್ಲಿ ನಡೆದದ್ದನ್ನು ಹೇಳಿದ. ಉಳಿದ ಊರಿನವರಂತೆ ಪ್ರತಿರೋಧ ತೋರಿಸದೇ ಈ ಊರಿನವರೆಲ್ಲಾ ಹೊರಟು ಹೋದ ಮೇಲೆ ಮೊದಲು ಉತ್ತಮ ರಸ್ತೆಗಳನ್ನು ಮಾಡಿದರಂತೆ. ನಂತರ ಯಾರು ಯಾರೋ ಬಂದು ಸರಕಾರ ಅವರಿಗೆ ಮಂಜೂರು ಮಾಡಿದ ಜಾಗಗಳಿಗೆ ಬೇಲಿ ಸುತ್ತಿ ನಿಧಾನಕ್ಕೆ ಐಷಾರಾಮಿ ಹೋಟೆಲುಗಳನ್ನು ಕಟ್ಟಿದರಂತೆ. ಕಾಡ ನಡುವಿನ ಬಂದೂಕುಧಾರಿಗಳಿಂದ ಭಯಪಟ್ಟಿದ್ದ ನಗರದ ಜನ ಮೊದಮೊದಲು ಅಲ್ಲಿಗೆ ಬರಲಿಲ್ಲವಂತೆ. ಎಸ್.ಟಿ.ಎಫ್‌ನವರು ನಮ್ಮಿಡೀ ಊರಿಗೆ ಸರ್ಪಗಾವಲಾಕಿ ಕಾಯಲಾರಂಭಿಸಿದ ಮೇಲೆ ನಿಧಾನವಾಗಿ ಜನರು ಬರಲಾರಂಭಿಸಿದರಂತೆ. ಇಂತಹುದೇ ಇನ್ನು ಹತ್ತು ರೆಸಾರ್ಟ್ಸ್ ಕಟ್ಟಿದ್ದಾರೆ ಊರಿನಲ್ಲಿ. "ನಿನ್ನ ಜಾಗದಲ್ಲೇ ನೀನೊಂದು ರಾತ್ರಿ ಇರಬೇಕಾದರೂ ಮೂರು ಸಾವಿರ ಕೊಡಬೇಕು ರಾಮಣ್ಣ" ಎಂದ.

"ನಾನೊಮ್ಮೆ ಒಳಗೆ ನೋಡಬೇಕಲ್ಲಾ ಶಂಕರ" ಎಂದು ರಾಮೇಗೌಡ ಕೇಳಿದಾಗ ಶಂಕರ ಮ್ಲಾನವದನನಾದ. ಬೇಸರವನ್ನು ಮರೆಮಾಚಲು ಮುಖದ ಮೇಲೆ ನಗು ತಂದುಕೊಂಡು "ಒಳಗೆ ಏನು ನೋಡ್ತಿ ರಾಮಣ್ಣ, ನನ್ನದು ಇನ್ನೇನು ಡ್ಯುಟಿ ಮುಗೀತು. ಇಲ್ಲೇ ಹತ್ತಿರದಲ್ಲೇ ನನಗೂ ಒಂದು ಮನೆ ಅಂಥ ಕೊಟ್ಟಿದ್ದಾರೆ. ಅಲ್ಲಿಗೆ ಹೋಗೋಣ ನಡಿ" ಎಂದ. ಆತನ ಮುಖದ ಭಾವ ನೋಡಿದ ಮೇಲೆ ಒಳಗೆ ಹೋಗಬೇಕೆಂಬ ಹಂಬಲ ಮತ್ತಷ್ಟು ಹೆಚ್ಚಾಯಿತು.

"ನಾನು ನೋಡಲೇಬೇಕು" ಎನ್ನುತ್ತಾ ಗೇಟಿನ ಬಳಿ ನಡೆದ. ಡಾಂಬರು ರಸ್ತೆ ಗೇಟಿನ ಒಳಗೂ ಹೋಗಿ ನಾಲ್ಕೈದು ಕವಲೊಡೆದಿತ್ತು. ತನ್ನ ಮನೆಯಿದ್ದ ಜಾಗವನ್ನು ಅಂದಾಜಿನ ಮೇಲೆ ಗುರುತಿಸುತ್ತಾ ನಡೆದ. ಶಂಕರ ಅವನನ್ನು ಹಿಂಬಾಲಿಸಿದ. ಮನೆಯಿದ್ದ ಜಾಗವನ್ನು ಕೆಡವಿ ಅಲ್ಲೊಂದು ಕುಟಿರದಂಥ ಕಟ್ಟಡವಿರುವುದು ಗಮನಕ್ಕೆ ಬಂತು. ಯುವಜೋಡಿಯೊಂದು ಕುಟೀರದ ಎದುರು ಕುಳಿತು ಹರಟುತ್ತಿದ್ದರು. ರಾಮೇಗೌಡ ಗಕ್ಕನೆ ನಿಂತ. "ಇಲ್ಲದಿರೋ ಮನೇನ ಏನು ನೋಡುವುದು" ಎಂದು ತನಗೆ ತಾನೆ ಹೇಳಿಕೊಳ್ಳುತ್ತಾ ಸಮಾಧಿಯ ಕಡೆ ಹೆಜ್ಜೆ ಹಾಕಿದ.

ನೆಲ್ಲಿ ಮರಗಳನ್ನು ಉರುಳಿಸಿ ಐಷಾರಾಮಿ ವಾಹನಗಳ ನಿಲ್ದಾಣವನ್ನಾಗಿ ಮಾಡಿರುವುದು ಕಾಣಿಸಿತು. ನೆಲ್ಲಿಕಾಯಿ ಕೀಳೋದು ಅಪರಾಧ ಆದರೆ ಮರ ಕಡಿಯೋದು?


ಸಮಾಧಿಯ ಹತ್ತಿರತ್ತಿರ ಬಂದವನಿಗೆ ದುಃಖ ಉಮ್ಮಳಿಸಿ ಬಂತು. ಯಾರೋ ತಡೆ ಒಡ್ಡಿದಂತೆ ಅಳಲು ಆಗಲಿಲ್ಲ. ಸಮಾಧಿಯ ಅಕ್ಕಪಕ್ಕವಿದ್ದ ತೆಂಗಿನಮರಗಳಿಗೆ ಬಿಗಿದಿದ್ದ ತೂಗುಯ್ಯಾಲೆಯಲ್ಲಿ ಮಲಗಿದ್ದ ಅರೆನಗ್ನ ಯುವತಿಯೊಬ್ಬಳು ಸಿಗರೇಟು ಸೇದುತ್ತಿದ್ದಳು. ಮರಕ್ಕೆ ಒರಗಿ ನಿಂತವನೊಬ್ಬ ಫೋನಿನಲ್ಲಿ ಹರಟುತ್ತಿದ್ದ. ಸಮಾಧಿಯ ಸುತ್ತ ಕುರ್ಚಿಗಳಿದ್ದವು. ಪಕ್ಕದಲ್ಲಿ ಪುಟ್ಟ ಶರಾಬ್ ಅಂಗಡಿ. ಅದರ ಮೇಲೆ ಇಂಗ್ಲಿಷಿನಲ್ಲಿ ಏನೋ ಬರೆದಿದ್ದರು. ಬಾರ್ ಎಂಬುದನ್ನು ಓದಿದನಾದರೂ ಅದರ ಹಿಂದಿದ್ದ ಪದದ ಅರ್ಥವಾಗಲಿಲ್ಲ. "ಅದೇನದು ಹೆಸರು" ಪಸೆ ಆರಿತ್ತು. "ಅದು ಅದು?" ಎಂದಾತ ತೊದಲುತ್ತಿದ್ದಂತೆ... "ಸಮಾಧಿ ಹೋಟ್ಲು ಅಂತಾನಾ...?" ಶಂಕರ ತಲೆಯಾಡಿಸಿದ. ಮಂಜಾಗಿದ್ದ ಕಣ್ಣುಗಳಿಂದಲೇ ಸಮಾಧಿಯೆಡೆಗೆ ನೋಡಿ ಹಿಂತಿರುಗಿ ನಡೆಯ ಲಾರಂಭಿಸಿದ.

"ನಿಮ್ಮ ತಾಯಿ ಸ್ವರ್ಗ ಸೇರೋದು ಖಂಡಿತ... ಹುಟ್ಟಿದರೆ ಇಂಥ ಮಗ ಹುಟ್ಟಬೇಕು ನೋಡು...." ತಾಯಿಯ ಶ್ರಾದ್ಧದ ದಿನ ಅವರಿವರು ಹೇಳಿದ್ದು ಕಿವಿಯಲ್ಲಿ ಗುಂಯ್ಗುಡತೊಡಗಿದವು. ಶಂಕರ ಆಡುತ್ತಿದ್ದ ಸಮಾಧಾನದ ಮಾತುಗಳು ಗಾಳಿಯಲ್ಲಿ ಲೀನವಾಗುತ್ತಿತ್ತು.

ಸಮಾಧಿಯ ನೆಪದಲ್ಲಿ ನೀರಾ ಇಳಿಸುವುದನ್ನು ಬಿಟ್ಟ ಜಾಗದಲ್ಲೀಗ.... ಗೇಟನ್ನು ರಭಸದಿಂದ ದೂಡಿ ಹೊರ ನಡೆದ....

ಘಟ್ಟದ ತಪ್ಪಲಲ್ಲೆಲ್ಲೋ ಮೊರೆದ ಗುಂಡಿನ ಸದ್ದಿಗೆ ಹಕ್ಕಿಗಳ ಚಡಪಡಿಕೆಯ ಕೂಗು.

ಅಂದಿನಿಂದ ದೇವರು, ಶ್ರಾದ್ಧ, ಸಮಾಧಿ, ಸರಕಾರಗಳ ಬಗ್ಗೆ ರಾಮೇಗೌಡನಿಗ...



'ಹಳ್ಳಿ ಹೈದ' ಲಂಕೇಶ್



ದಿನದಿಂದ ದಿನಕ್ಕೆ ಲಂಕೇಶರ ಬರವಣಿಗೆಗಳು ಬೆಳೆಯುತ್ತಲೇ ಇದ್ದವು. ಒಮ್ಮೊಮ್ಮೆ ಅವರು ಪತ್ರಿಕೆ ಮಾಡದೇ ಇದ್ದಿದ್ದರೆ ಇನ್ನೂ ಅನೇಕ ಕಥೆ, ಕವನ, ನಾಟಕಗಳನ್ನು ಬರೆಯುತ್ತಿದ್ದರೇನೋ ಎಂದು ನನಗೆ ಅನ್ನಿಸುತ್ತಿತ್ತು. ಆದರೆ ಪತ್ರಿಕೆಯಲ್ಲಿ ಲಂಕೇಶರು ಬರೆಯುತ್ತಿದ್ದ ಲೇಖನಗಳು ಯಾವ ರೀತಿಯಲ್ಲೂ ಯಾವುದಕ್ಕೂ ಕಡಿಮೆ ಇರಲಿಲ್ಲ.

ಬಸವನಗುಡಿಯಲ್ಲಿರುವ ಒಂದು ಪಾರ್ಕ್‌ನಲ್ಲಿನ ನೀರಿನ ಟ್ಯಾಂಕ್ ಮೇಲೆ ಜ್ಞಾನಪೀಠ ಪ್ರಶಸ್ತಿ ಪಡೆದಿರುವ ಎಲ್ಲ ಕನ್ನಡ ಲೇಖಕರ ಚಿತ್ರಗಳನ್ನು ಬಿಡಿಸಿದ್ದಾರೆ. ಅದನ್ನು ನೋಡಿದಾಗಲೆಲ್ಲ ಆ ಸಾಲಿನಲ್ಲಿ ಲಂಕೇಶರ ಚಿತ್ರ ಕೂಡ ಸೇರ್ಪಡೆಯಾಗಲಿ ಎಂದು ಆಶಿಸುತ್ತಿದ್ದೆ. ಆದರೆ ಆ ನನ್ನ ಆಶೆ ನನಸಾಗಲೇ ಇಲ್ಲ. ಲಂಕೇಶರು ಇನ್ನಷ್ಟು ವರ್ಷಗಳ ಕಾಲ ಬದುಕಿದ್ದರೆ ಖಂಡಿತ ಅವರಿಗೆ ಜ್ಞಾನಪೀಠ ಪ್ರಶಸ್ತಿ ಬರುತ್ತಿತ್ತು. ಲಂಕೇಶರು ನನ್ನ ಪತಿ ಆಗಿದ್ದರು ಎಂಬ ಕಾರಣಕ್ಕೆ ನಾನು ಈ ಮಾತನ್ನು ಹೇಳುತ್ತಿಲ್ಲ, ಬಹಳಷ್ಟು ಜನ ಇದನ್ನೇ ಹೇಳಿದ್ದಾರೆ. ಯಾಕೆಂದರೆ ಲಂಕೇಶರ ಸಾಹಿತ್ಯಿಕ ಕೊಡುಗೆ ಅಂತಹದ್ದು. ಗಿರೀಶ್ ಕಾರ್ನಾಡ್ ಕೂಡ ತಮಗೆ ಜ್ಞಾನ ಪೀಠ ಪ್ರಶಸ್ತಿ ಬಂದಾಗ ಇದು ಲಂಕೇಶ್ ಮತ್ತು ತೇಜಸ್ವಿ ಅವರಿಗೆ ಬರಬೇಕಿತ್ತು ಎಂದೇ ಹೇಳಿದ್ದರು.

* * * * *

ನಾವು ನಮ್ಮ ಸ್ವಂತ ಮನೆಗೆ ಹೋದ ನಂತರ ಅಡುಗೆ ಮಾಡಲು ಒಬ್ಬಳು ಹುಡುಗಿಯನ್ನು ನೇಮಿಸಿಕೊಂಡಿದ್ದರಿಂದ ನನಗೆ ಅಡುಗೆ ಮನೆಯಿಂದ ಬಿಡುಗಡೆ ಸಿಕ್ಕಿತು.

ನಾನು ಮತ್ತು ಲಂಕೇಶರು ಬೆಳಗ್ಗೆ ಒಂದೇ ಸಮಯಕ್ಕೆ ಮನೆಯನ್ನು ಬಿಡುತ್ತಿದ್ದೆವು. ನಾನು ಅಂಗಡಿಯ ಬಾಗಿಲನ್ನು ಬೆಳಗ್ಗೆ 9.30ಕ್ಕೆ ತೆರೆಯುತ್ತಿದ್ದೆ ಆದ್ದರಿಂದ ನಾನು ಮನೆಯನ್ನು 9.15 ಕ್ಕೆ ಬಿಟ್ಟರೆ ಸಾಕಿತ್ತು. ಲಂಕೇಶರು ಕೂಡ ಅದೇ ಸಮಯಕ್ಕೆ ಆಫೀಸ್‌ಗೆ ಹೋಗುತ್ತಿದ್ದರು. ರಸ್ತೆಯಲ್ಲಿ ಮುಂದೆ ಅವರ ತಮ್ಮ ಎಸ್ಟೀಮ್ ಕಾರಿನಲ್ಲಿ, ಹಿಂದೆ ನಾನು ನನ್ನ ಮಾರುತಿ 800ನಲ್ಲಿ. ಬಸವನಗುಡಿ ರಸ್ತೆ ತಲುಪಿದ ನಂತರ ಅವರ ಕಾರ್ ಇಎಟಿ ಸ್ಟ್ರೀಟ್ ಕಡೆ ತಿರುಗಿದರೆ ನಾನು ವಾಣಿವಿಲಾಸ್ ರೋಡ್‌ನಲ್ಲಿ ನ್ಯಾಷನಲ್ ಕಾಲೇಜ್ ಪಕ್ಕದಲ್ಲಿದ್ದ ನನ್ನ ಅಂಗಡಿಯತ್ತ ಸಾಗುತ್ತಿದ್ದೆ.

ಅಂದಹಾಗೆ, ನಾನು ನನ್ನ ಅಂಗಡಿಯಲ್ಲಿ ಸೀರೆಗಳನ್ನು ಪ್ಯಾಕ್ ಮಾಡಿಕೊಡುತ್ತಿದ್ದ ಪ್ಲಾಸ್ಟಿಕ್ ಕವರ್ ಮೇಲೆ ಏನೆಂದು ಪ್ರಿಂಟ್ ಮಾಡಿಸುವುದು ಎಂದು ಒಮ್ಮೆ ಲಂಕೇಶರನ್ನು ಕೇಳಿದೆ. ಆಗ ಅವರು **"Mayur Silks- Where lovely Sarees for lovely women is a tradition"** ಅಂತ ಬರೆದುಕೊಟ್ಟರು. ಲಂಕೇಶರಿಗೆ ತುಂಬಾ ಖುಷಿಯಾದಾಗ ಅವರು **"lovely"** ಎನ್ನುತ್ತಿದ್ದರು. ಲಂಕೇಶರು ನನ್ನ ಅಂಗಡಿಗೆ ಕೊಟ್ಟಿದ್ದ ಈ ಘೋಷವಾಕ್ಯವನ್ನೇ ನಾನು ಕೊನೆಯ ತನಕ ಉಪಯೋಗಿಸಿದೆ. ಇನ್ನೊಂದು ವಿಚಾರ: ನಮ್ಮಿಬ್ಬರಿಗೂ ನವಿಲು ಎಂದರೆ ಇಷ್ಟ. ನಾನು ನನ್ನ ಅಂಗಡಿಗೆ ಮಯೂರ ಎಂದು ಹೆಸರಿಟ್ಟರೆ, ಲಂಕೇಶರು ನಮ್ಮ ಸ್ವಂತ ಮನೆಗೆ 'ನವಿಲು' ಎಂದು ಹೆಸರಿಟ್ಟಿದ್ದರು. ಹಾಗೆಯೆ 'ಲಂಕೇಶ್ ಪತ್ರಿಕೆ'ಯ ಲಾಂಛನದಲ್ಲೂ ನವಿಲು ಇತ್ತು.

* * * * *

ನಾನು ಯಾವಾಗಲೂ ನನ್ನ ಕಾರನ್ನು ಬಹಳ ಕ್ಲೀನ್ ಆಗಿ ಇಟ್ಟಿರುತ್ತಿದ್ದೆ, ಆದರೆ ಲಂಕೇಶರು ಅಂತಹದ್ದರ ಬಗ್ಗೆ ಅಷ್ಟೆಲ್ಲ ಕೇರ್ ಮಾಡುತ್ತಿರಲಿಲ್ಲ. ನಾನು ಪ್ರತಿ ದಿನ ನನ್ನ ಕಾರನ್ನು ತೊಳೆಯುವುದನ್ನು ನೋಡಿ ಲಂಕೇಶರು "ಹೊಸದರಲ್ಲಿ ಅಗಸ ಗೋಣಿಚೀಲವನ್ನೂ ಎತ್ತಿ ಎತ್ತಿ ಒಗೆಯುತ್ತಾನೆ, ಹಂಗಾಯಿತು ನಿನ್ನ ಕಥೆ" ಎಂದು ತಮಾಷೆ ಮಾಡುತ್ತಿದ್ದರು. ಆದರೆ ಹೊಸದರಲ್ಲಿ ಮಾತ್ರವಲ್ಲ, ಈಗಲೂ ನಾನು ನನ್ನ ಕಾರ್ ಅನ್ನು ತುಂಬಾ ಕ್ಲೀನ್ ಆಗಿಯೇ ಇಟ್ಟುಕೊಂಡಿದ್ದೇನೆ.

ಲಂಕೇಶರು ಕೆಲಕಾಲ ಬೆಳಗ್ಗೆ ಲಾಲ್‌ಬಾಗ್‌ನಲ್ಲಿ ವಾಕಿಂಗ್ ಹೋಗುತ್ತಿದ್ದರು. ಆಗ ಅಲ್ಲಿನ ಜಿಂಕೆಗಳಿಗೆ ಕೊಡಲು ಅವರು ತಮ್ಮ ಕಾರಿನಲ್ಲಿ ಕಡಲೇಕಾಯಿ ಇಟ್ಟುಕೊಂಡಿರುತ್ತಿದ್ದರು. ಒಮ್ಮೆ ಆ ಕಡಲೇಕಾಯನ್ನು ತಿನ್ನಲು ಇಲಿಗಳು ಲಂಕೇಶರ ಕಾರನ್ನು ಸೇರಿಕೊಂಡು ಸೀಟಿನ ಕವರ್ ಅನ್ನು ತಿಂದು ಹಾಕಿದ್ದವು. ಆಗ ನಾನು "ಹೀಗೆ ಆಗಬೇಕು ನಿಮಗೆ. ಕಾರ್ ಅನ್ನು ಕ್ಲೀನಾಗಿ ಇಟ್ಟುಕೊಳ್ಳಿ ಅಂದರೆ ನನ್ನ ಮಾತು ಕೇಳಲ್ಲ" ಎಂದು ಅವರನ್ನು ರೇಗಿಸಿದೆ.

ಲಂಕೇಶರ ಟೇಬಲ್ ಮತ್ತು ಬುಕ್ ಶೆಲ್ಫ್ ಅನ್ನು ಸಹ ಯಾರೂ ಕ್ಲೀನ್ ಮಾಡುವಂತಿರಲಿಲ್ಲ. ಅವು ಎಷ್ಟೇ ಅಸ್ತವ್ಯಸ್ತವಾಗಿದ್ದರೂ, ಧೂಳು ಶೇಖರಣೆಗೊಂಡಿದ್ದರೂ ಅದನ್ನು ಯಾರು ಮುಟ್ಟುವಂತಿರಲಿಲ್ಲ. ಅವರ ಟೇಬಲ್ ಮೇಲಿನ ಪುಸ್ತಕಗಳು ಅವರು ಹೇಗೆ ಇಟ್ಟಿದ್ದರೋ ಹಾಗೆಯೇ ಇಟ್ಟಿರಬೇಕಿತ್ತು, ಜೋಡಿಸಿಡುವಂತಿರಲಿಲ್ಲ. ಒಮ್ಮೆ ಗೌರಿ ಲಂಕೇಶರ ಬುಕ್ ಶೆಲ್ಫ್ ಅನ್ನು ಕ್ಲೀನ್ ಮಾಡಿ, ಅದರಲ್ಲಿದ್ದ ಪುಸ್ತಕಗಳನ್ನು ಕಾದಂಬರಿ, ಕವನ ಸಂಕಲನ, ನಾಟಕ, ಪ್ರಬಂಧ... ಹೀಗೆ ವಿಂಗಡಿಸಿ ಜೋಡಿಸಿದಳು. ಅಷ್ಟೇ ಅಲ್ಲ, ಅವಳ ಅಪ್ಪ ಮನೆಗೆ ಬಂದಾಗ "ನೋಡು ಎಷ್ಟು ಚೆನ್ನಾಗಿ ಜೋಡಿಸಿದ್ದೇನೆ" ಎಂದು ಅವರಿಗೆ ತೋರಿಸಿದಳು. ಆದರೆ ಲಂಕೇಶರು ಸ್ಫೋಟಗೊಂಡರು. "ನೀನು ಹೀಗೆಲ್ಲ ಜೋಡಿಸಿದರೆ ನನಗೆ ಬೇಕಾದ ಪುಸ್ತಕ ನನಗೆ ಸಿಗುವುದಿಲ್ಲ, ಇನ್ನು ಮುಂದೆ **don't do this nonsense**" ಎಂದು ಆಕೆಯನ್ನು ಬೈದಿದ್ದರು. ಅದಕ್ಕೆ ಆನಂತರ ಆಕೆ ಅವರ ಬುಕ್ ಶೆಲ್ಫ್ ಅನ್ನು ಕ್ಲೀನ್ ಮಾಡಿದಾಗಲೆಲ್ಲ ಒಂದು ಪುಸ್ತಕವೂ ಲಂಕೇಶರು ಇಟ್ಟಿದ್ದ ಜಾಗದಿಂದ ಬದಲಾಗದಂತೆ ಅವುಗಳನ್ನು ಮತ್ತೆ ಜೋಡಿಸುತ್ತಿದ್ದಳು.


ಮೊದಲಿನಿಂದಲೂ ನಮ್ಮ ಮನೆಯನ್ನು ತುಂಬಾ ಕ್ಲೀನ್ ಆಗಿ ಇಡುವ ಅಭ್ಯಾಸ ನನ್ನದು. ಆದರೆ ಲಂಕೇಶರು "ಮನೆಯನ್ನು ಸದಾ ಏಕೆ ಕ್ಲೀನ್ ಮಾಡಬೇಕು. ನಮಗಾಗಿ ಮನೆ ಇರಬೇಕೆ ಹೊರತು ಮನೆಗಾಗಿ ನಾವಲ್ಲ" ಎನ್ನುತ್ತಿದ್ದರು. ಅಷ್ಟೇ ಆಗಿದ್ದರೆ ಪರವಾಗಿಲ್ಲ, ಆದರೆ ಅವರು ಮನೆಯನ್ನು ಹೊಲಸು ಮಾಡುತ್ತಿದ್ದ ರೀತಿಯಂತೂ ನನಗೆ ಹಲವೊಮ್ಮೆ ಕೋಪ ತರಿಸುತ್ತಿತ್ತು.

ಲಂಕೇಶರು ನಮ್ಮ ಮನೆಯ ಹಾಲ್ ಮತ್ತು ಡೈನಿಂಗ್ ರೂಮುಗಳ ಫ್ಲೋರಿಂಗಿಗೆ ಅಮೃತಶಿಲೆಗಳನ್ನು ಹಾಕಿಸಿದ್ದರು. ಅದರ ಬಗ್ಗೆ ಅವರಿಗೆ ತುಂಬಾ ಹೆಮ್ಮೆ ಇತ್ತು. "ಬರೀ ಮಾರ್ಬಲ್ ಅಲ್ಲ, ಅವುಗಳ ಮಧ್ಯೆ ತಾಮ್ರವನ್ನು ಹಾಕಿಸಿದ್ದೇನೆ" ಎಂದು ಹೇಳುತ್ತಿದ್ದರು. ಆದರೆ ಅವರಿಗೆ ನೆಗಡಿ ಬಂದಾಗ ಏನು ಮಾಡುತ್ತಿದ್ದರು ಗೊತ್ತಾ? ಪಕ್ಕಾ ಹಳ್ಳಿಗನಂತೆ ತಮ್ಮ ಮೂಗನ್ನು ಸೀಟಿ, ಸಿಂಬಳವನ್ನು ಅದೇ ಮಾರ್ಬಲ್ ಫ್ಲೋರ್ ಮೇಲೆ ಬಿಸಾಡುತ್ತಿದ್ದರು. ಅದನ್ನು ನೋಡಿ ನಮ್ಮ ಬೇಬಿ "ಒಬ್ಬ ವ್ಯಕ್ತಿಯನ್ನು ಹಳ್ಳಿಯಿಂದ ನಗರಕ್ಕೆ ಕರೆದುಕೊಂಡು ಬರಬಹುದು, ಆದರೆ ಆತನಲ್ಲಿರುವ ಹಳ್ಳಿಯನ್ನು ಹೊರಕ್ಕೆ ತರಲಾಗುವುದಿಲ್ಲ. ಅಪ್ಪನಲ್ಲಿರುವ ಹಳ್ಳಿ ಹಾಗೆಯೇ ಇದೆ" ಎಂದು ತಮಾಷೆ ಮಾಡುತ್ತಿದ್ದಳು.

ಇನ್ನು ಅವರ ಪ್ರೀತಿಯ ಸ್ಟೆಫಿ ನಾಯಿಯಿಂದಾಗುವ ಗಲೀಜನ್ನೂ ನಾವೆಲ್ಲ ಸಹಿಸಿಕೊಂಡು ಸುಮ್ಮನಿರಬೇಕಿತ್ತು. ಸ್ಟೆಫಿ ಮನೆಯೊಳಗೆ ಕಕ್ಕ ಸುಸ್ಸು ಮಾಡುತ್ತಿರಲಿಲ್ಲ. ಆದರೆ ಆಕೆ ಹೊರಗಾದಾಗ ನೆಲದ ಮೇಲೆ ಮತ್ತು ಆಕೆಗೆಂದು ಲಂಕೇಶರು ತಮ್ಮ ಸ್ಟಡಿ ರೂಮಿನಲ್ಲಿ ಹಾಕಿಸಿದ್ದ ಸೋಫಾದ ಮೇಲೆಲ್ಲ ರಕ್ತ ಸುರಿಯುತ್ತಿತ್ತು. ಅದನ್ನು ನೋಡಿ ನಾನು "ಸ್ಟೆಫಿ ಹೊರಗಾದಾಗಲಾದರೂ ಆಕೆಯನ್ನು ಮನೆಯೊಳಗೆ ಬಿಟ್ಟುಕೊಳ್ಳುವುದು ಬೇಡ. ಆಕೆ ಕಾಂಪೌಂಡಿನಲ್ಲಿರಲಿ" ಎಂದು ಎಷ್ಟೇ ಹೇಳಿದರೂ ಅವರು ಕೇಳುತ್ತಿರಲಿಲ್ಲ. "ಪಾಪ, ಅವಳಿಗೇನು ಗೊತ್ತಾಗುತ್ತೆ. ನೀನೇನು ಅದನ್ನೆಲ್ಲ ಕ್ಲೀನ್ ಮಾಡಬೇಕಾ? ಕೆಲಸದವರು ಮಾಡುತ್ತಾರೆ. ನೀನು ಸುಮ್ಮನಿರು" ಎಂದು ಸ್ಟೆಫಿಯ ಪರ ವಹಿಸುತ್ತಿದ್ದರು.

****

ಒಂದುದಿನ ನಮ್ಮ ಮಗ ಅಜಿತ್ ತನ್ನ ಸ್ನೇಹಿತನ ಮನೆಗೆ ಹೋಗುತ್ತೇನೆಂದೂ, ವಾಪಸ್ ಬರುವುದು ತಡವಾಗುತ್ತೆಂದೂ ಹೇಳಿ ನನ್ನ ಕಾರ್ ಅನ್ನು ತೆಗೆದುಕೊಂಡುಹೋದ. ರಾತ್ರಿ 12 ಗಂಟೆ ಆದರೂ ಆತ ಮನೆಗೆ ಬಂದಿರಲಿಲ್ಲ. ಅವನಿಗಾಗಿ ಕಾದೂಕಾದೂ ಸುಸ್ತಾಗಿದ್ದ ನನ್ನ ಕಣ್ಣುಗಳನ್ನು ನಿದ್ದೆ ಎಳೆಯುತ್ತಿತ್ತು. ಇನ್ನೇನು ಮಲಗಿಕೊಳ್ಳಬೇಕು. ಮನೆಯ ಫೋನ್ ರಿಂಗಾಯಿತು. ಅದು ಜಯನಗರ ಪೊಲೀಸ್ ಸ್ಟೇಷನ್‌ನಿಂದ ಬಂದ ಕರೆ. ಫೋನ್‌ನಲ್ಲಿ ಮಾತನಾಡಿದವರು "ನಿಮ್ಮ ಮಗನಿಗೆ ಆಕ್ಸಿಡೆಂಟ್ ಆಗಿದೆ, ಬೇಗನೆ ಬನ್ನಿ" ಎಂದರು. ಅವತ್ತು ಮನೆಯಲ್ಲಿ ನಾನು ಮತ್ತು ಲಂಕೇಶರು ಮಾತ್ರ ಇದ್ದೆವು. ಇಬ್ಬರೂ ಸ್ಟೇಷನ್ನಿಗೆ ಹೊರಟೆವು.



• ಇಂದಿರಾ ಲಂಕೇಶ್

ನಾನು ಹಲವಾರು ಬಾರಿ ಜಯನಗರ ಪೊಲೀಸ್ ಸ್ಟೇಷನ್‌ಅನ್ನು ನೋಡಿದ್ದರೂ, ಅದನ್ನು ದಾಟಿ ಹೋಗಿದ್ದರೂ ಅವತ್ತು ನನಗೆ ಅದೆಷ್ಟು ಶಾಕ್ ಆಗಿತ್ತೆಂದರೆ ಆ ಸ್ಟೇಷನ್ನಿನ ದಾರಿಯೇ ನೆನಪಿಗೆ ಬರುತ್ತಿರಲಿಲ್ಲ. ಲಂಕೇಶರಿಗೆ ಆ ಸ್ಟೇಷನ್ನಿನ ದಾರಿಯೇ ಗೊತ್ತಿರಲಿಲ್ಲ. ಮಧ್ಯ ರಾತ್ರಿ ಅದು ಹೇಗೋ ನಾವಿಬ್ಬರೂ ಸ್ಟೇಷನ್ ತಲುಪಿದೆವು.

ಅಲ್ಲಿ ನಮ್ಮ ಮಗನನ್ನು ನೋಡಿ ನಮ್ಮಿಬ್ಬರಿಗೆ ಮತ್ತಷ್ಟು ಶಾಕ್ ಆಯಿತು. ಅವನ ಮುಖದ ತುಂಬಾ ರಕ್ತ ಹೆಪ್ಪುಗಟ್ಟಿತ್ತು, ಮುಖ ಊದಿಕೊಂಡಿತ್ತು, ಕಣ್ಣು ಮತ್ತು ತುಟಿಗಳು ಎಷ್ಟು ಬಾತುಕೊಂಡಿದ್ದವು ಎಂದರೆ ಆತನ ಗುರುತು ಸಿಗುವುದೇ ಕಷ್ಟ ಎಂಬಂತಾಗಿತ್ತು. ಪೊಲೀಸರು ಯಾವುದೋ ಹೊಡೆದಾಟದಲ್ಲಿ ಅವನಿಗೆ ಹೀಗಾಗಿದೆ ಎಂದು ಭಾವಿಸಿದ್ದರು. ಆದರೆ ವಾಸ್ತವವಾಗಿ ಅವನು ಓಡಿಸುತ್ತಿದ್ದ ಕಾರ್ ರಸ್ತೆ ಬದಿಯ ಮರವೊಂದಕ್ಕೆ ಡಿಕ್ಕಿ ಹೊಡೆದಾಗ ಕಾರಿನ ಮುಂದಿನ ಗಾಜು ಛಿದ್ರವಾಗಿ ಅದರ ಚೂರುಗಳು ಅವನ ಮುಖ, ಎದೆ, ಕೈಗಳನ್ನು ನಾಟಿದ್ದವು. ಅವನು ಆ ಸ್ಥಿತಿಯಲ್ಲೇ ಪೊಲೀಸ್ ಸ್ಟೇಶನ್ ತಲುಪಿ "ಆಕ್ಸಿಡೆಂಟ್ ಆಗಿರುವ ಬಗ್ಗೆ ನನ್ನ ಅಪ್ಪ ಅಮ್ಮನಿಗೆ ತಿಳಿಸಿ" ಎಂದು ನಮ್ಮ ಮನೆಯ ಫೋನ್ ನಂಬರ್ ಕೊಟ್ಟಿದ್ದ.

ಪೊಲೀಸರು ಅವನನ್ನು ಕೂಡಲೇ ಹತ್ತಿರದ ಸಂಜಯ್ ಗಾಂಧಿ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಹೇಳಿದರು. ಆದರೆ ಆ ಆಸ್ಪತ್ರೆಯ ವೈದ್ಯರು "ಇವನ ಕಣ್ಣುಗಳನ್ನೂ ಗಾಜಿನ ಚೂರುಗಳು ನಾಟಿದ್ದರೆ ಅವನ ದೃಷ್ಟಿಯೇ ಹೋಗಬಹುದು. ನೀವು ಕೂಡಲೇ ಇವನನ್ನು ಮಿಂಟೋ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಅಲ್ಲಿನ ವೈದ್ಯರಿಗೆ ತೋರಿಸಿ" ಎಂದರು. ತಕ್ಷಣ ನಾವಿಬ್ಬರೂ ಅವನನ್ನು ಮಿಂಟೋ ಆಸ್ಪತ್ರೆಗೆ ಕರೆದುಕೊಂಡು ಹೋದೆವು.

ಆದರೆ ರಾತ್ರಿ ಆಗಿದ್ದರಿಂದ ಆ ಆಸ್ಪತ್ರೆಯಲ್ಲಿ ಜೂನಿಯರ್ ವೈದ್ಯರು ಮಾತ್ರ ಡ್ಯೂಟಿಯಲ್ಲಿದ್ದರು. ಆಗ ಲಂಕೇಶರೇ ಮಧ್ಯ ರಾತ್ರಿ ಹಿರಿಯ ವೈದ್ಯರ ಮನೆ ಹುಡುಕಿಕೊಂಡು ಹೋಗಿ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಬಂದರು. ಸದ್ಯ ಅಜಿತನ ಕಣ್ಣುಗುಡ್ಡೆಗಳಿಗೆ ಗಾಜಿನ ಚೂರುಗಳು ತಾಕಿರಲಿಲ್ಲ. ಆದರೆ ಅವನ ಎರಡು ರೆಪ್ಪೆಗಳು ಹರಿದುಹೋಗಿದ್ದವು. ಹಿರಿಯ ವೈದ್ಯರುಗಳು ತುಂಬಾ ಸಹನೆಯಿಂದ ಐದು ಗಂಟೆಗಳ ಕಾಲ ಅವನ ಕಣ್ಣು ರೆಪ್ಪೆಗಳನ್ನು ಹೊಲಿದರು. ಬೆಳಗ್ಗೆ ಏಳು ಗಂಟೆಯವರೆಗೂ ಈ ಚಿಕಿತ್ಸೆ ನಡೆಯಿತು. ಅಜಿತನ ಮುಖ ಊದಿಕೊಂಡಿದ್ದರೂ ಮಿಂಟೋ ಆಸ್ಪತ್ರೆಯ ವೈದ್ಯರು ಅದೆಷ್ಟು ಚೆನ್ನಾಗಿ ಹೊಲಿಗೆಗಳನ್ನು ಹಾಕಿದರೆಂದರೆ ಇವತ್ತು ಅವುಗಳ ಕಲೆ ಕೂಡ ಅವನ ಮುಖದ ಮೇಲೆ ಇಲ್ಲ. ಮಿಂಟೋ ಸರ್ಕಾರಿ ಆಸ್ಪತ್ರೆ ಆದರೂ ಅಲ್ಲಿ ಅಷ್ಟು ನುರಿತ ವೈದ್ಯರು ಇದ್ದರು ಎಂಬುದರ ಬಗ್ಗೆ ನನ್ನಲ್ಲಿ ಇವತ್ತಿಗೂ ಮೆಚ್ಚುಗೆ ಇದೆ.

ಇದೆಲ್ಲ ಮುಗಿಯುವ ತನಕ ಲಂಕೇಶರು ಮತ್ತು ನಾನು ಇಬ್ಬರೂ ಆಸ್ಪತ್ರೆಯಲ್ಲಿ ಕೂತಿದ್ದೆವು...

ಮಿಂಟೋ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ನಂತರ ಅಜಿತು ಅಪಘಾತದಿಂದ ಸುಧಾರಿಸಿಕೊಳ್ಳಲಿ ಎಂದು ಅವನನ್ನು ಒಂದು ಖಾಸಗಿ ನರ್ಸಿಂಗ್ ಹೋಮಿಗೆ ಸೇರಿಸಿದೆವು. ಊದಿಕೊಂಡಿದ್ದ ಅವನ ಮುಖ ಮತ್ತೆ ಸಹಜ ಸ್ಥಿತಿಗೆ ಬರುವುದಕ್ಕೆ ಒಂದೆರಡು ವಾರಗಳೇ ಬೇಕಾದವು. ಆ ಅವಧಿಯಲ್ಲಿ ಆತ ಅಕಸ್ಮಾತ್ತಾಗಿ ಕನ್ನಡಿಯಲ್ಲಿ ತನ್ನ ಮುಖ ನೋಡಿಕೊಂಡಿದ್ದರೆ ಆತ ಖಂಡಿತವಾಗಿಯೂ ಬೆಚ್ಚಿಬೀಳುತ್ತಿದ್ದ. ಆದ್ದರಿಂದ ನಾವು ನರ್ಸಿಂಗ್ ಹೋಮ್ ಹಾಗು ಮನೆಯ ಬೆಡ್ ರೂಮ್ ಮತ್ತು ಬಾತ್ ರೂಮಿನಲ್ಲಿದ್ದ ಕನ್ನಡಿಗಳನ್ನು ತೆಗೆದುಹಾಕಿದೆವು....

(ಮುಂದುವರೆಯುವುದು)



ಅಯ್ಯೋ ನನ್ನ ಪಾಡೇ...

ಸರಿಯಾಗಿ ಊಟ ಮಾಡು, ನಿದ್ರೆ ಮಾಡು ಎಂದರೆ,
ನಿನ್ನಂತೆ ತಿನ್ನುವುದಕ್ಕೆಂದೇ ಜೀವ ತಳೆದಿಲ್ಲ ನಾನು ಎನ್ನುತ್ತಾನೆ.
ಶ್ರದ್ಧೆಯಿಂದ ದುಡಿ, ಹೊಟ್ಟೆಪಾಡಿನ ಕರ್ತವ್ಯ ಎಂದರೆ,
ಇದರಲ್ಲಿ ತೊಡಗಲಾಗದು, ತುತ್ತಿನ ಚೀಲ ತುಂಬಿಸಲು ಎನ್ನುತ್ತಾನೆ.
ಸುಖಾಸುಮ್ಮನೆ ಸಣ್ಣವರ ಕಿರಿಕಿರಿಗೆ ದುಗುಡಬೇಡ ಎಂದರೆ,
ಘನವಾಗಲು ಇವು ಬಿಡುವುದೇ ಇಲ್ಲ ಎನ್ನುತ್ತಾನೆ..
ಏಕಾಂತದಲಿ ದೈವಕ್ಕೆ ನಮಿಸಿ ನಿನ್ನ ನೀ ನಂಬು ಎಂದರೆ,
ಸಮುದಾಯದ ಸಂಕಟ ಗೊತ್ತಿಲ್ಲದ ನಿನಗೆ ಅಹಂ ಎನ್ನುತ್ತಾನೆ.
ಹೀಗೆ ಭಾವಾವೇಶದಲಿ ಜಗದ ದುಃಖ ಹೊರಬೇಡ ಎಂದರೆ
ನಿಮ್ಮಂಥವರು ದಿವ್ಯನಿರ್ಲಕ್ಷ್ಯದಲ್ಲಿರುವಾಗ ನಾವು ಹೀಗೇ ಎನ್ನುತ್ತಾನೆ.
ಎಲ್ಲರ ಬಗ್ಗೆಯೂ ಇರುವ ಕಾಳಜಿ ಸ್ವಲ್ಪ ನನಗೂ ತೋರಿಸು ಎಂದರೆ,
ಅಯ್ಯೋ ನೀನು ಜಗವ ಪೊರೆವ ತಾ, ನಾನು ಬರಿದೆ ಗಂಡು ಎನ್ನುತ್ತಾನೆ.
ನಿನ್ನ ಎದೆಯೊಳಗಿನ ಕಿಚ್ಚು ದೀಪವಾಗಿ ಹೊರಬರಲಿ ಎಂದರೆ,
ದೀಪಕ್ಕೆ ಎಣ್ಣೆ ಕಾಣದೆ ಯುಗವಾತು ಎನ್ನುತ್ತಾನೆ.
ನಿನ್ನ ಎದೆಗಪ್ಪಿಕೊಳ್ಳದೆ ಇದ್ದರೆ ಬದುಕಲಾರೆ ಎಂದರೆ,
ಮಾತು ಕಮ್ಮಿ, ಮಾಡಿ ತೋರಿಸು! ಎನ್ನುತ್ತಾನೆ.
ಅಂಗಅಂಗಕೂ ನಿನ್ನ ಆತ್ಮದ ಚೆಲುವು ಅಂಟಲಿ ಎಂದರೆ,
ದೇಹದ ಬಿಸಿಗೆ ಮಾತ್ರ ಆತ್ಮ ಕರಗುವುದು ಎನ್ನುತ್ತಾನೆ.
ನಿನಗೆ ಹುಚ್ಚು ಎಂದರೆ,
ನೀನೆ ಔಷಧಿ ಎನ್ನುತ್ತಾನೆ.
ಬಾಯ್ಮುಚ್ಚು ಬ್ರಹ್ಮಾಂಡ ರಗಳೆ ನಿಂದು! ಎಂದರೆ,
ಆಹ್..!, ನನ್ನೊಳಗೆ ಲೀನ..

• ಇಂದ್ರಾಣಿ ಕೆ.ಎಸ್.

...ಡೂರಪ್ಪ ಈಗ ಗಾಯಗೊಂಡ ಹುಲಿ. ಬಿಜೆಪಿಗಳು ಉಷಾರಾಗಿರಬೇಕು

...ಪ್ಪತ್ತನೇ ವಯಸ್ಸಿನಲ್ಲಿ ಎಡೂರಪ್ಪ ಆಚರಿಸಿಕೊಂಡ ...ದ ಹಬ್ಬದ ಸುದ್ದಿ ಹೆಗ್ಗಾಳವಾಗಿ ಬದುಕಿ ಬಾಳಿದ್ದವನ ...ದ್ದಿಯಂತೆ ಕಾಳಮಾವನವರೆಗೂ ಬಂದು ತಲ್ಪುಪಿತು! ...ಷಲಗೊಂಡ ಅವನು,

...ಂಗರೆ ಎಡೂರಪ್ಪನಿಗಾಗ್ಲೆ ಯಪ್ಪತ್ತೊರಸಾಯ್ತೆ?"

...ಮು ಲು ಸೀ ಮೆ

ಹಟ್ಟಿಪುರಾಣ

▶ಬಿ. ಚಂದ್ರೇಗೌಡ

...ಊ ಕಣ ಮಾವ, ನಿನಿಗಿಂತ ಕೇವಲ ಹತ್ತೊರಸಕ್ಕೆ ...ಣೋನು" ಎಂದ ಸೀರ.

"ಆದ್ರು ಗಟ್ಟಿಮುಟ್ಟಾಗ್ಯವ್ರುನೆ ಕಂಡ್ಯ" ಎಂದ ಸೀರ.

"ಯಾಕೆ ನೀನಿಲ್ವೆ? ಅವನು ನೀನು ಒಂದೇ ವಾರಗೆ ... ಆದ್ರು ನಿನ್ನಷ್ಟು ಆರೋಗ್ಯ ಅವುನಿಗಿಲ್ಲ ಬುಡು. ...ಕೆಮ್ಮಕ್ಕೆ ಸುರುಮಾಡ್ಯವ್ರುನೆ."

"ಸೀರಮಾವನೂ ಕೆಮ್ಮದಿಲವೇನ್ಲ?" ಎಂದಳು ಜುಮ್ಮಿ.

"ಸೀರಮಾವ ಬೀಡಿ ಸೇತ್ತನೆ ಅದ್ಕೆ ಕೆಮ್ಮತನೆ. ಆದ್ರೆ ...ಡೂರಪ್ಪ ಒಂಥರಾ ಕೆಮ್ಮತನೆ ಕಣೆ."

"ಯಪ್ಪತ್ತೊರ್ಸ ಅಂದ್ರೆ ಒಸಿ ವರ್ಷನೆ. ಕೆಮ್ಮದೆ ಇನ್ನೇನು ...ತ್ಯನೂ."

"ಅದ್ಯಾಕಂಗೆ ಮಾಡಿಕಂಡ" ಎಂದು ಕಾಳಮಾವ ...ರಪ್ಪನ ಹುಟ್ಟಿದ್ದ ಹಬ್ಬ ಕುರಿತು ಕೇಳಿದ.

"ಓ ಅವುನ ಫಜೀತಿ ಬ್ಯಾಡ ಕಣಮಾವ. ಏನೂ ... ಹೇಳನಾ. ಕ್ಯಾನ್ಸರ್ ಕಾಯಿಲೆ ಬತ್ತದಲ್ಲಾ ಅಂಗಾಗ್ಯವ್ರುನೆ. ...ವ ದಾಗುಟ್ರು ಅವುನ್ನ ಉಳಿಸಿಗಳಕ್ಕಾಗದಿಲ್ಲ."

"ಅದೇನು ಸರಿಯಾಗೇಳ್ಳ."

"ಅವುನು ಜೈಲಿಗೋಗುವಾಗ ಮುಖ್ಯಮಂತ್ರಿ ಕುರ್ಚಿ ...ಲಿ ಸದಾನಂದಗೌಡನ್ನ ಕುಂಡ್ರುಸಿ ಹೋದ. ಈಚೆಗೆ ...ದು ಕುರ್ಚಿಯ ಬುಟ್ಟುಕೊಡಪ್ಪ ಅಂದ್ರೆ, ಇದು ...ಮೂಂಡು ಕೊಟ್ಟ ಕುರ್ಚಿ, ನಾನು ಬುಡಬೇಕಾದ್ರೆ ...ರನ್ನೇ ಕೇಳು ಅಂದ ಸದಾನಂದ ನಗಾಡಿಕಂಡು. ಆ ...ಮೂಂಡ್ ಮುಂಡೆ ಮಕ್ಕಳು ಬಂದು ಸದಾನಂದನ್ನ ... ಎಡೂರಪ್ಪನ್ನ ಕುಂಡುರಸಕ್ಕಾಗದಿಲ್ಲ ಅಂದು ...ದ್ರುತ್ತಗೆ."

"ಓಹೊಹೊ. ಅಂಗರಿದು ನಂಬುಕೆ ಕ್ರಯದ ಮೋಸ ..." ಎಂದ ಕಾಳಮಾವ. ಆಗ ಜುಮ್ಮಿ,

"ಅದ್ಯಾವುದು ಮಾವ ನಂಬುಕೆ ಕ್ರಯದ ಮೋಸ?" ...ಳು.

"ಇಲ್ಲೇ ನಮ್ಮೂರಲ್ಲೇ ಆಯ್ತಲ್ಲೇ ಗೊತ್ತಿಲವೆ ನಿನಿಗೆ. ಶ್ಯಾಮಾಚಾರಿಗೆ ದುಡ್ಡು ಬೇಕಾಗಿತ್ತು, ಆಗ ಗದ್ದೇಗೌಡನಿಗೆ ಅರ್ಧ ಯಕರೆ ವಲ ಬರದ. ಅದೂ ಐದು ಸವುರಕೆ. ಐದು ಸವುರ ವಾಪಸು ಕೊಟ್ಟಾಗ ಗದ್ದೇಗೌಡ ಶಾಮಾಚಾರಿ ವಲವ ಬುಟ್ಟುಕೊಡಬೇಕು. ಅದಕ್ಕೆ ಸಾಕ್ಷಿ ಯಾರು ಅಂದ್ರೆ, ಇದೇ ಸೀರ ಚಿಕ್ಕ."

"ಓಹೊಹೊ ಸಾಕ್ಷಿಗಳು ಇಲ್ಲೆ ಅವ್ರುರೆ."

"ಸರಿ, ಶಾಮಾಚಾರಿ ಬಂಬಾಯಿಗೋಗಿ ಚಿನ್ನ ಬೆಳ್ಳಿ ಕ್ಯಲಸ ಮಾಡಿ ದುಡಕಂಡು, ಐದು ಸವುರದ ಜೊತಿಗೆ ಬಡ್ಡಿನೂ ತಂದು ವಲ ಬರಕೊಡು ಅಂತ ಗದ್ದೇಗೌಡನ ಕೇಳಿದ. ಆದ್ರೆ ಗದ್ದಾಗ್ಲೆ ಸೇದಿಕಂಡಿದ್ದ; ತಲೆ ವಗದ, ಹೆದರಿಕಂಡ ಶಾಮಾಚಾರಿ ಸಾಕ್ಷಿಗಳ ಹುಡಿಕಂಡೋದ. ಗದ್ದೇಗೌಡ ಅವ್ರುರಿಗೂ ಕುಡಿಸಿಬುಟ್ಟಿದ್ದ. ಅವ್ರುರೂ ತಪ್ಪಿಸಿಗಂಡ್ರು. ಅಂತೂ ಶಾಮಾಚಾರಿಗೆ ಯಲ್ಲಾ ಸೇರಿ ನಾಮ ಹಾಕಿದ್ರು. ಏನಿಲ್ಲಾ ಅಂದ್ರು ನಲವತ್ತು ಸಾವುರದ ಜಮೀನು ಬರೀ ಐದೇ ಸಾವುರಕೆ ಗದ್ದೇಗೌಡನ ಪಾಲಾಯ್ತು. ನಮ್ಮ ಕಣ್ಣೆದ್ರುಗೆ ನ್ಯಡದ ಅನ್ಯಾಯ ಇದು" ಎಂದು ಕಾಳಮಾವ ವಿವರಿಸುವಾಗಲೇ ಬಂದಿದ್ದ ವಾಟಿಸ್ವೆ ,

"ಎಡೂರಪ್ಪನಿಗಾಗಿದ್ದು ಇದೇ ದೊಡಪ್ಪ, ನಮ್ಮೂರಲ್ಲಿ ನ್ಯಡದ ಸ್ಟೋರಿ, ಎಡೂರಪ್ಪನ ಸ್ಟೋರಿ ಒಂದೇ ತರ ಅದೆ" ಎಂದ.

"ಅದ್ಯಂಗ್ಲ ಒಂದೇ ತರ ಇದ್ದತೂ?"

"ನೋಡಕ್ಕ, ಗಡಕರಿ ಅನ್ನೊ ಅಕ್ಕಿಮೂಟೆ, ಎಡೂರಪ್ಪನ ಕೈ ಹಿಡಕಂಡು 'ಒಂದಾರತಿಂಗಳು ಸಿಎಂ ಕುರ್ಚಿ ಬುಟ್ಟುಕೊಡು. ಅಲ್ಲೀವರಿಗೂ ಸದಾನಂದ ಅದ್ರುಮ್ಯಾಲೆ ಕುಂತಗಂಡು ನಗತಾಯಿರತನೆ. ನೀನು ಕೋರ್ಟು, ಕಚೇರಿ, ಡಿನೋಟಿಫಿಕೇಶನ್ನು; ಕಿಕ್‌ಬ್ಯಾಕಿನ ಪ್ರಾಬ್ಲಮ್ಮನ್ನಲ್ಲ ಮುಗಿಸಿಗಂಡು ಬಾ, ಸದಾನಂದನ್ನ ಇಳಿಸಿ ತಿರಗ ನಿನ್ನ ಕೂರುಸ್ತಿವಿ' ಅಂದ್ರುಂತೆ."

"ಓ, ಇಳಿಯಗಂಟ ಉಪಾಯ ಮಾಡಿದ್ರು ಅನ್ನು"

"ಈಗಂಗೆ ಕಾಣತ ಅದೆ. ಎಡೂರಪ್ಪ ಜೈಲಿಂದ ಬಂದು ಸಿ.ಎಂ.ಕುರ್ಚಿ ಕೇಳಿದ. ಅದ್ಕೆ ಗಡಕರಿ 'ಆಗದಿಲ್ಲ, ನಿನ್ನ ಮ್ಯಾಲಿರೊ ವರೆನ್ನಲ್ಲ ಇಳಿಸಿಗಂಡು ಬಾ. ಆಗ ನೀನೇ ಮುಖ್ಯಮಂತ್ರಿ' ಅಂದ."

"ಅವುನ ಮ್ಯಾಲಿರೊ ವರೆ ಇಳಿಸಿಗಳಕ್ಕೆ ಇನ್ನು ಐದೊರ್ಸಬೇಕಂತೆ ಕಣೊ" ಎಂದ ಉಗ್ರಿ.

"ಅದಕ್ಕೆ ನಾವು ಹೊಣೆಗಾರ್ರಲ್ಲ, ಕೋರ್ಟುಂಟು ನೀನುಂಟು. ಕುರ್ಚಿ ಕೊಡಕುಲ್ಲ, ಸಿಟ್ಟು ಮಾಡಿಕಂಡು ನೀನು ಪಾರ್ಟಿ ಬುಡದಾದ್ರೆ ಇವತ್ತೇ ಬುಡು ಅಂದೋದ."

"ಎಡೂರಪ್ಪ ಸುಮ್ಮನಿದ್ದುದ್ದೇಳು."

"ಸುಮ್ಮನಿರಲಿಲ್ಲ ದೊಡಪ್ಪ, ಗ್ರ್ಯಾಂಡಾಗಿ ಹುಟ್ಟಿದಬ್ಬ ಮಾಡಿಕಂಡು ನನ್ನ ಶಕ್ತಿ ಏನು ಅಂತ ತೋರ್ರಿನಿ, ಸರಕಾರನೆ ಕೆಡಗ್ತಿನಿ ಅಂತ ಕೂಗಾಡಿ ಬರ್ತ್‌ಡೇ ಮಾಡಿಕಂಡು ಬಂದೋರು ನೋಡಿದ. ಯಪ್ಪತ್ತು ಜನ ಇದ್ದ ಶಾಸಕರು ಬರೇ ಇಪ್ಪತ್ತಗಿದ್ರು. ಆಮ್ಯಾಲೆ



ಹದಿನೈದು ಜನಕ್ಕೆ ಬಂದ್ರು. ಮುಂದೆ ಅವುರ ಸಂಖ್ಯೆ ಎಂಟಾಗಬವುದು ಅಂತ ಹೆದರಿ ಸ್ವಂಟ ಮುರದೋನಂಗೆ ಸುಮ್ಮನಾಗಿಬುಟ್ಟ ಅತ್ತಗೆ."

"ಜನ ನಂಬಕ್ಕಾದತೇ ಇವತ್ತು."

"ಅದವುನಿಗೂ ಗೊತ್ತದೆ ದೊಡಪ್ಪ, ಕನಿಷ್ಠ ಮಠಾಧೀಶರ ನಿಷ್ಠೆ ಈ ಶಾಸಕರಿಗಿಲ್ಲ, ಪಾಪ ಎಡೂರಪ್ಪ ದುಡ್ಡು ಕೊಡ್ತನೆ ಅಂತ ಅವ್ರು ಮಠ ಬುಟ್ಟೋಗಿ ಅವುನ ಹಿಂದೆ ತಿರುಗ್ತವೆ."

"ಆ ಚಿತ್ರದುರ್ಗದ ಸ್ವಾಮಿಗೇನು ಬತ್ತಯ್ಯ, ಅವರೂ ಎಡೂರಪ್ಪನ ಪರ ವಕಾಲತ್ತು ವಯಿಸ್ತರಲ್ಲಾ."

"ಅದ್ಯಲ್ಲ ಕಾಮನ್ ಕಣೊ ಉಗ್ರಿ. ಎಡೂರಪ್ಪ ಮಠಕ್ಕೆ ದುಡ್ಡು ಕೊಟ್ಟಾಗ ಮರಿಯಾದಿ ಬುಟ್ಟು ಈಸಗಂಡೋರು ಅವುನು ಕರೆದಾಗ ಅದೇ ಮರಿಯಾದಿ ಬುಟ್ಟು ಹೋಗಬೇಕಾಯ್ತದೆ."

"ಅಂತೂ ಹಂದಿ ಸಂಗಮಾಡಿ ಚಂದಗಾಗಿದ್ದ ನಂದಿ ಹಾಳಾಯ್ತು ಅನ್ನಂಗಾಯ್ತು ಅನ್ನು."

"ಎಡೂರಪ್ಪ ಯಾರನೂ ಬುಡದಂತೆ ಕೆಡಿಸ್ಯಾಕ್ಯವ್ರುನೆ ಕಣೊ. ಆ ಚಂದ್ರೇಗೌಡನಂತೂ ಸತ್ತು ಪ್ರೇತ ಆಗ್ಯವ್ರುನೆ. ಆ ಪ್ರೇತನೆ ಹಿಡಕಂಡು ಬಂದು ಮಾತಾಡುಸ್ತನೆ. ಅವುನಿಗೆ ಏನು ಮಾತಾಡ್ತಿನಿ ಅನ್ನದೇ ಗೊತ್ತಿಲ್ಲ."

"ಏನು ಮಾತಾಡಿದ?"

"ಎಡೂರಪ್ಪನ್ನ ವಿಷಕಂಠನಿಗೆ ಹೋಲಿಸಿ ಮಾತಾಡ್ತನೆ. ಸಮುದ್ರ ಮಥನದಿಂದ ಒಂದು ಕಡೆ ವಿಷಬಂತು, ಇನ್ನೊಂದು ಕಡೆ ಅಮೃತ ಬಂತು. ಎಡೂರಪ್ಪ ಜನಗಳಿಗೆ ಅಮೃತ ಕೊಟ್ಟು ತಾನು ವಿಷ ನುಂಗಿ ಕಷ್ಟಪಡತಾಯಿರೊ ವಿಷಕಂಠ ಅಂದ. ಅವುನು ನಿಜವಾಗ್ಲು ಯಂಗೇಳಬೇಕಾಗಿತ್ತು ಅಂದ್ರೇ, ಗಣಿಮಥನದಿಂದ ನಮ್ಮ ರಾಜ್ಯದ ಆದಿರು ಚೀಣಕ್ಕೋಯ್ತು, ಅಮೃತ ತಿಂದ ರೆಡ್ಡಿ ಆಂಧ್ರದ ಜೈಲಿಗೋದ. ಗಣಿ ಧೂಳಿನಿಂದ ಯಡ್ಡಿ ಗಂಟಲು ಕೆಟ್ಟು, ಕೆಮ್ಮತ ನನ್ನ ಕೊನೆಗಾಲಕ್ಕಾಗಿ ಕಾಯ್ತುಯಿದಾನೆ ಅನ್ನಬೇಕಾಗಿತ್ತು, ಯಾಕಂದ್ರೆ ಗಣಿಯಿಂದ್ಲೆ ಅವುನು ಅಧಿಕಾರ ಕಳಕಂಡಿದ್ದು."

"ಮುಂದೆ ಎಡೂರಪ್ಪ ಏನು ಮಾಡ್ತನೇ?"


"ಅವುನ್ಯಾರೋ ರಾಜುಗೌಡ ಅನ್ನೊ ಪೋಲಿ ಮುಂಡೇದು ಎಡೂರಪ್ಪ ಹುಲಿ ಅಂದವ್ರುನೆ. ನನ್ನ ಪ್ರಕಾರ ಎಡೂರಪ್ಪ ಗಾಯಗೊಂಡ ಹುಲಿ. ಆ ಹುಲಿಯಿಂದ ಬಿಜೆಪಿಗೆ ಮಾಯಲಾರದ ಗಾಯಗಳಾಗಬಹುದು. ಇನ್ಯಾರಿಗೂ ತೊಂದ್ರೆ ಇಲ್ಲ, ಅಂತೂ ಈ ಟೈಮಲ್ಲಿ ನಾನು ಎಡೂರಪ್ಪನ ಪರ."

"ಯಾಕ್ಲ?"

"ಪೂರ್ ಫೆಲೊ ಅದಕ್ಕೆ."


...ನಸಿನಿಂದ ಹೊರಟ ಕಾರು ಮತ್ತು ಡ್ರೈವರ್ ▶▶▶

...ಅಂದು ಎಂದಿನಂತೆ ಬೆಳಗಿನ ನಾಲ್ಕು ಗಂಟೆಗೆ ಕಣ್ಣು ತೆರೆದಾಗ 'ಇನ್ನೂ ಕೆಲವು ನಿಮಿಷ ನಿದ್ರಿಸಬಹುದು' ...ಸಿತು. ಆದರೆ ನಿದ್ದೆ ಬರಲಿಲ್ಲ. ಒಟ್ಟು ಐದು ಗಂಟೆಗಿಂತ ಹೆಚ್ಚು ಮಲಗದಿರುವ ಆಸಾಮಿ ನಾನು; ಐದು ...ಸಿಯುವರೆಗೆ ಓದುತ್ತಿದ್ದು ದೀಪ ಆರಿಸಿದೊಡನೆ ಅರ್ಧಗಂಟೆ ನಿದ್ರೆ ಬಂತು. ಅದು ನಿಜಕ್ಕೂ ವಿಚಿತ್ರ ವೇಳೆ. ಭೂಮಿ ...ಯೆಲ್ಲ ಪ್ರಯತ್ನಿಸಿ ತಣ್ಣಗಾದಂತೆ. ದೇಹಕ್ಕೆ ಅತ್ಯಗತ್ಯವಾದ ಮದ್ದು ನೀಡಿದಂತೆ, ಯಾರೋ ನಿಮ್ಮನ್ನು ಸೆಳೆದುಕೊಂಡು ...ಬುದನಿಯಲ್ಲಿ ಜೋಗುಳ ಹಾಡಿದಂತೆ. ನನಗೆ ಗೊತ್ತಿಲ್ಲದೇ ನಿದ್ರಿಸತೊಡಗಿದೆ. ಆದರೆ ಎಂದಿನಂತೆ ಆರಕ್ಕೆ ವಾಕ್ ...ರಡಬೇಕು. ಈ ಶರೀರದಲ್ಲಿ ಸೇರಿಹೋದ ನಿಗೂಢ ಅಲಾರಮ್ ಎಚ್ಚರಿಸಿತು. ಗರಿಗಟ್ಟುತ್ತಿದ್ದ ...ಸ ಚಿತ್ರ ಮಾಸತೊಡಗಿತು. ಒಂದು ಕಾರ್, ಕತ್ತಲಿನ ರಸ್ತೆ, ಹೆಂಗಸು ಡ್ರೈವರ್, ಹಿಂದಿನ ...ನಲ್ಲಿ ಕೂತಿದ್ದ ನನಗೆ ವಿಚಿತ್ರ ಆತಂಕ. ಅಂಥ ಭಾವನೆಯೇನೂ ಇಲ್ಲದಂತಿದ್ದ ಆಕೆ ಹಿಂದಕ್ಕೆ ...ಡುತ್ತಲೇ ನಗುತ್ತಾ ಡ್ರೈವ್ ಮಾಡುತ್ತಿದ್ದಳು. ನಾನು ಭಯಗೊಂಡಿದ್ದೆ, ದೂರದಲ್ಲಿ ಎದುರಿಗೆ ...ಬರುತ್ತಿದ್ದ ಲಾರಿಗೆ ನಮ್ಮ ಕಾರ್ ಢಿಕ್ಕಿ ಹೊಡೆಯಬಹುದೆಂದು ಎಚ್ಚರಿಸಬೇಕೆನ್ನುವಷ್ಟರಲ್ಲಿ ...ರಿಯ ಸದ್ದು ಜೋರಾಗಿ ಎಚ್ಚರವಾಯಿತು. ಎದ್ದು ಆ ಕನಸನ್ನು ನೆನಪಿಟ್ಟುಕೊಳ್ಳಬೇಕೆಂದು ...ರ್ಮಾನಿಸಿ ಬಟ್ಟೆ ಹಾಕಿಕೊಳ್ಳುತ್ತಿದ್ದಂತೆ, ಇವತ್ತಿನ ಎಲ್ಲ ಕೆಲಸಗಳನ್ನು ನೆನೆದುಕೊಳ್ಳುತ್ತಿದ್ದಂತೆ ... ಇಂಗಿಹೋಯಿತು. ಬರೀ ಕಾರು ಮತ್ತು ಲಾರಿ ಮಾತ್ರ ನೆನಪಾದವು. ಅವು ಕೂಡ ...ರಗೊಂಡಮೇಲೆ ನಾನು ಊಹಿಸಿದ್ದೆನ್ನಿಸಿತು. ಕನಸಿಗೆ ತನ್ನದೇ ಆದ ಹಗುರ, ಸೌಂದರ್ಯ, ...ಸ್ಯ ಇರುತ್ತದೆ. ಅದು ಬರೀ ಲಾರಿ ಅಥವಾ ಕಾರಿನ ವಿಷಯವಿರಲಾರದು ಅಂದುಕೊಂಡೆ. ...ದು ಕತೆಗೆ ತಕ್ಕಂತಹ ವಸ್ತು ಮಾಯವಾದಂತೆ ಅನ್ನಿಸಿ ಬೆಳಗಿನ ಕನಸನ್ನು ಮತ್ತೆ ರೂಪಿಸತೊಡಗಿದೆ.



...ಲ್ಲಿ ಕೃತಕವೆನ್ನಿಸತೊಡಗಿತು. ನಾನು ಸಾಧಾರಣವಾಗಿ 'ಮರೆಯುವ ಮುನ್ನ'ದಲ್ಲಿ ಬರೆಯುವುದು ಬೆಳಗ್ಗೆ ಕಂಡದ್ದನ್ನು, ...ಲೋಚಿಸಿದ್ದನ್ನು, ನಾಲ್ಕು ಗಂಟೆಗೆ ಎದ್ದು ಮತ್ತೆ ನಿದ್ರಿಸುವ ಆಸೆಯುಳ್ಳದ್ದಾಗ, ನನಗೆ ಗೊತ್ತಿಲ್ಲದಂತೆಯೇ ನಿದ್ರಿಸತೊಡಗಿದಾಗ, ...ಮೇಲೆ ಎದ್ದು ವಾಕ್ ಮಾಡುವಾಗ ಏನೇನೋ ಅನ್ನಿಸಿರುತ್ತದೆ. ಇವತ್ತು ಕನಸಿನಲ್ಲಿ ಕಂಡಿರಬಹುದಾದ ಹೆಣ್ಣು ಡ್ರೈವರ್ ... ನಾನು ಎಂದೂ ಯೋಚಿಸಿದಂತಿಲ್ಲ, ಆದರೆ ಎಂದೋ ಅಂದುಕೊಂಡಿದ್ದೆ ನನ್ನ ಮಗಳು ಒಬ್ಬ ಸೋಮಾರಿ ...ಗ ನಾನು ಎಂದೂ ಯೋಚಿಸಿದಂತಿಲ್ಲ ... ನೋಡಿ, "ನೋಡು, ಈ ಗಂಡುಗೋವಿಗಳು ಹೀಗೆ ...ವನ್ನು ನೇಮಿಸಿಕೊಂಡು ತೊಂದರೆ ಅನುಭವಿಸುತ್ತಿರುವುದನ್ನು ನೋಡಿ, ... ಹುಡುಗಿಗೆ ಡ್ರೈವಿಂಗ್ ಕಲಿಸಿ ಡ್ರೈವರ್ ಆಗಿ ನೇಮಿಸಿಕೋ" ...ಗ್ರಹದಸಿ ಪ್ರಭಾವರೂ ಆಗಿರುತ್ತಾನೆ. ನೀನು ಒಬ್ಬಳು ...

ಅಂದೆ. ಅದು ಆಕೆಗೆ ಹೊಳೆದಂತಿರಲಿಲ್ಲ. ಹೆಂಗಸರ ಅರ್ಹತೆಯ ಬಗ್ಗೆ ಹೆಂಗಸರಿಗೇ ಗೊತ್ತಿರುವುದಿಲ್ಲ. ರಂಗೋಲೆ ಹಾಕಲು, ಸೇಲ್ಸ್‌ಗರ್ಲ್ ಆಗಲು, ಉಪ್ಪಿಟ್ಟು ಕಾಫಿ ತಯಾರಿಸಲು ಮಾತ್ರ ಹುಡುಗಿಯರು ಸರಿ–ಅಂದುಕೊಂಡಿರುತ್ತಾರೆ. ಹೀಗಾಗಿ ಅನೇಕ ಉದ್ಯೋಗಗಳಿಂದ ಹುಡುಗಿಯರು ವಂಚಿತರಾಗಿರುತ್ತಾರೆ. ಈಗಿನ ಕಾರ್ ಗಮನಿಸಿ–ಮಾರುತಿ ಕಾರ್ ಅತ್ಯಂತ ಆಧುನಿಕವಾದದ್ದು. ಅದನ್ನು ಡ್ರೈವ್ ಮಾಡಲು ಅಂಥ ಶಕ್ತಿ ಬೇಕಾಗಿಲ್ಲ. ನಾನು ಬಲ್ಲಂತೆ ಹೆಂಗಸರಲ್ಲಿ ಗಂಡಸರಿಗಿಂತ ಹೆಚ್ಚು ಸಹನೆ, ಕಷ್ಟಸಹಿಷ್ಣುತೆ ಇರುತ್ತದೆ; ಅವರಲ್ಲಿ ಡ್ರೈವ್ ಮಾಡಲು ಬೇಕಾದ re**flexes** ಗಂಡಸರಿಗಿಂತ ಚೆನ್ನಾಗಿರುತ್ತದೆ. ಆದರೆ ನನ್ನ ಮಗಳು ಹುಡುಗಿಯನ್ನು ಡ್ರೈವರ್ ಆಗಿ ನೇಮಿಸಿಕೊಂಡಂತಿರಲಿಲ್ಲ. ಸ್ತ್ರೀ ಸ್ವಾತಂತ್ರ್ಯ ಹಕ್ಕು ಇತ್ಯಾದಿಗಳಿಗಾಗಿ ನಿತ್ಯ ಹೋರಾಡುವ ಹೆಣ್ಣುಮಕ್ಕಳು ಕೂಡ ಹುಡುಗಿಯರನ್ನು ಡ್ರೈವರ್ ಆಗಿ ತೆಗೆದುಕೊಂಡಿರುವುದಿಲ್ಲ. ನಮ್ಮ ಜನ ಹುಡುಗಿಯರೆಂದರೆ ಸೇಲ್ಸ್ ಹುಡುಗಿಯರು, ಏರ್‌ಪೋರ್ಟ್‌ನಲ್ಲಿ ಟಿಕೆಟ್ ಮಾರುವವರು, ಏರ್ ಹೊಸ್ಟೆಸ್‌ಗಳು ಎಂದು ತಿಳಿದಿರುತ್ತಾರೆ; ಅನೇಕ ಉದ್ಯೋಗಗಳಿಗೆ ಅವರ ಪ್ರವೇಶವೇ ಇರುವುದಿಲ್ಲ. ಇದರಿಂದಾಗಿ ಅವತ್ತಿನ ಬೆಳಗಿನ ಕನಸು ಬಿದ್ದಿರಬಹುದೆ?



ಗೊತ್ತಾಗುತ್ತಿಲ್ಲ. ಕನಸು, ಕ್ಷಣಿಕ ಚಿಂತನೆ, ಒಂದು ಕತೆ ಅಥವಾ ಕವನವಾಗಬೇಕೆಂದು ನನಗೆ ಇಷ್ಟ. ನನ್ನಲ್ಲೀಗ ನಾಲ್ಕೈದು ಕತೆಗಳಿವೆ. ಅವನ್ನು ಬರೆಯಲು ಮನಸ್ಸು ಬರುತ್ತಿಲ್ಲ, ಇದಕ್ಕೆ ಮುಖ್ಯ ಕಾರಣ ಅವೆಲ್ಲ ತಿಂಗಳುಗಟ್ಟಲೆ ಮನಸ್ಸಿನಲ್ಲಿದ್ದು ಜಡಗೊಂಡಿರಬಹುದು ಎಂಬ ಅನುಮಾನ ನನಗಿದೆ. ಅವು ಮತ್ತೊಮ್ಮೆ ನನ್ನ ಕನಸಿನಲ್ಲಿ ಅದ್ದಿಕೊಂಡು ಹೊರಬಂದರೆ ಚೆನ್ನಾಗಿರುತ್ತದೆ. ಕನಸಿನ ಗುಣವಿಲ್ಲದ ಕೃತಿ ಕರ್ಕಶ ಎಂದು ನನ್ನ ಊಹೆ. ಹಾಗೆಯೇ ವಾಸ್ತವದ ಅಸ್ಥಿಪಂಜರವಿಲ್ಲದ ಕನಸಿನ ಕತೆ ಕೂಡ ಸಾಮಾನ್ಯ.

ಅಂತೂ ಅವತ್ತಿನ ಕನಸು ಪೂರ್ತಿ ನೆನಪಾಗುತ್ತಲೇ ಇಲ್ಲ.

ಫೆಬ್ರವರಿ 12, 1997

ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್

ಟಾಯಿಲೆಟ್ ಸೀಟು

ಅಣಕ

ಎಚ್.ಎಲ್. ಕೇಶವಮೂರ್ತಿ



ಹಬ್ಬಹರಿದಿನಗಳಲ್ಲಿ ಪ್ರಯಾಣಿಸುವುದು ಎಂದರೆ ಒಂದು ರೀತೀಲಿ ಶಿಕ್ಷೆ ಇದ್ದ ಹಾಗೆ. ಹೆಚ್ಚುವರಿ ಬಸ್ಸುಗಳನ್ನೇನೋ ಹಾಕಿರುತ್ತಾರೆ. ಆದರೆ ಅವೆಲ್ಲವು ತುಂಬಿದ ಬಸುರಿ ಆಗಿಯೇ ಬರುತ್ತವೆ. ಹೆಂಗಸರು, ಮಕ್ಕಳ ಜೊತೆಯಲ್ಲಿ ಇದ್ದರಂತೂ ನಾಯಿಪಾಡೇ ಸರಿ. ಭರ್ತಿ ಬಸ್ಸಿಗೇ ಹೇಗೋ ಸಾಹಸ ಮಾಡಿ ನುಗ್ಗಿದಿರಿ ಅನ್ನಿ. "ಆಗಲ್ಲರೀ ಇಳೀರಿ" ಎನ್ನುತ್ತಾರೆ ಕಂಡಕ್ಟರ್ ಮಹಾಶಯರು. "ಬಹಳ ಅರ್ಜೆಂಟ್ ಇದೆ. ಇಲ್ಲೇ ವಸಿ ಜಾಗ ಮಾಡಿಕೊಂಡು ಹೇಗೋ ನಿಂತುಕೊಳ್ಳುತ್ತೀನಿ" ಎಂದು ಗೋಗರೆಯುತ್ತೀರಿ. ನಿಮ್ಮ ಗೋಗರೆತ ಅವರ ಕಿವಿ ಮೇಲೇ ಬೀಳೋಲ್ಲ. "ಆಗಲ್ಲಾ ರೀ. ಟೈರು ವೀಕು ಇಳೀರಿ" ಎನ್ನುತ್ತಾರೆ ಆ ಮಹಾಷಯರು. "ಟೈರು ವೀಕು" ಎನ್ನುವ ಶಬ್ದ ಕಿವಿ ಮೇಲೆ ಬೀಳುತ್ತಿದ್ದಂತೆಯೇ ಈಗಾಗಲೇ ಸೀಟಸ್ಥರಾಗಿರುವ ಮಹನೀಯ, ಮಹಿಳೆಯರಿಗೆ ಮುಂದೆ ಯಾವುದೋ ಭಯಂಕರ ಆಘಾತ ಬಂದೆರಗುವುದು ನಿಶ್ಚಯ ಅನ್ನಿಸತೊಡಗುತ್ತದೆ. ಎಲ್ಲರೂ ಒಮ್ಮೆಗೇ "ಇಳೀರಿ. ಅವರೇ ಹೇಳುತ್ತಿಲ್ಲ ಟೈರು ವೀಕು ಅಂತ. ಒಬ್ಬರಿಂದ ಎಲ್ಲರಿಗೂ ತೊಂದರೆ" ಎಂದು ಅಬ್ಬರಿಸುತ್ತಾರೆ. ಕೆಳಗೆ ಇಳಿಯದೆ ಬೇರೆ ದಾರಿಯೇ ಇಲ್ಲ. ಎಲ್ಲ ಕಂಡಕ್ಟರುಗಳೂ ಹೀಗೇ ಇರಲ್ಲ, ಕೆಲವರು ಇರುತ್ತಾರೆ ಪುಣ್ಯಾತ್ಮರು. ಪ್ರಯಾಣಿಕರ ಕಷ್ಟಸುಖ ಅರಿತವರು. ಅನಿವಾರ್ಯವಾಗಿ ಪ್ರಯಾಣ ನಿಲ್ಲಿಸಿರುವವರ ಅಂತರಾಳದ ನೋವು ತಿಳಿದಿರುವವರು. "ಅವರೂ ನಿಮ್ಮ ಹಾಗೆ ಅಲ್ವಾ. ಬರಲಿ ಬಿಡಿ" ಎಂದು. ಹೇಳುವವರು. ಒಳಗೆ ನಿಲ್ಲಲು ಸಾಧ್ಯವೇ ಇಲ್ಲ ಅನ್ನಿಸಿದಾಗ ಟಾಪಿನ ಮೇಲಾದರೂ ಕೂರಿಸುವವರು. ಅಂತೂ ಹೇಗೋ ಸೇರಬೇಕಾದ ಜಾಗಕ್ಕೆ ಸೇರಿಸುವ ಪುಣ್ಯಾತ್ಮರು.

ಇದನ್ನೆಲ್ಲ ಯಾಕೆ ಹೇಳುವುದಕ್ಕೆ ಬಂದೆ ಎಂದರೆ ಇಂತಹ ಸಂಕಷ್ಟಗಳು ಬಸ್ಸಿನ ಪ್ರಯಾಣಿಕರಿಗೆ ಮಾತ್ರ ಇರುತ್ತದೆ ಎಂದುಕೊಂಡಿದ್ದೆ. ವಿಮಾನಗಳಲ್ಲಿ ಹಾರಾಡುವವರಿಗೆ ಇಂತಹ ತಾಪತ್ರಯಗಳು ಹತ್ತಿರವೂ ಸುಳಿಯಲ್ಲ ಎಂದು ತಿಳಿದಿದ್ದೆ. ಇಲ್ಲ, ಅವರಿಗೂ ಇಂತಹ ಗ್ರಹಚಾರ ತಪ್ಪಿದ್ದಲ್ಲವಂತೆ. ಪಾಕಿಸ್ತಾನ ಇಂಟರ್‌ನ್ಯಾಷನಲ್ ಏರ್‌ಲೈನ್ಸ್‌ನಲ್ಲೂ ಹೀಗೇ ಆಯಿತಂತೆ. ಯಾರೋ ಇಬ್ಬರು ಕರಾಚಿಯಿಂದ ಲಾಹೋರ್‌ಗೆ ಹೋಗಬೇಕಿತ್ತಂತೆ. ಏನೋ ಪ್ರಾಣ ಹೋಗುವ ಕೆಲಸಾನೆ ಇತ್ತಂತೆ. ತರಾತುರಿಯಲ್ಲಿ ಏದುಸಿರು ಎಳೆಯುತ್ತಾ ಏರ್‌ಪೋರ್ಟಿಗೆ ಬಂದರಂತೆ. ಆದರೆ ಎಲ್ಲ ಸೀಟುಗಳು ಆಗಲೇ ಭರ್ತಿ ಆಗಿದ್ದವಂತೆ!

ಅದು ಎಂತಹ ವಿಮಾನವೊ, ಅದರ ಕೈಪಾಸಿಟಿ ಎಷ್ಟೋ ತಿಳಿಯದು. ಅವರೂ ನಮ್ಮ ಮಾಜಿ ಮಂತ್ರಿ ದೇಶಪಾಂಡೆ ತಂತ್ರ ಬಳಸಬಹುದಿತ್ತೇನೋ. ನಮ್ಮ ಈ ಸಾಹೇಬರು ಒಂದು ಸಲ ಸಂಸಾರ ಸಮೇತ 'ಮಾಲೆ'ಗೆ ವಿಹಾರಕ್ಕೆ ಹೊರಟದ್ದರಂತೆ. ಕೊನೆಘಳಿಗೆಯಲ್ಲಿ ಸೀಟಿಗೆ ಪ್ರಯತ್ನಿಸಿರಬೇಕು. ಮೊದಲೇ ಯೋಜನೆ ರೂಪಿಸಿ ಇಂತಹವನ್ನೆಲ್ಲ ಮಾಡಬೇಕು ನಿಜ. ಆದರೆ ಅವರು ಸಾಮಾನ್ಯ ಮನುಷ್ಯರಲ್ಲ, ಅವರ ಮಗನಿಗೆ ಹೆಣ್ಣು ಕೊಟ್ಟವರೇ ವಿಮಾನಯಾನ ಸಚಿವರಾಗಿದ್ದರು. ಬೀಗರೇ ಇಂತಹ ಆಯಕಟ್ಟಿನ ಜಾಗದಲ್ಲಿರುವಾಗ ಮುಂಗಡ ಸೀಟು ಕಾಯ್ದಿರಿಸುವುದು ತಮ್ಮ ಘನತೆಗೆ ತಕ್ಕುದಲ್ಲ ಎಂದು ಭಾವಿಸಿದರೋ ಏನು ಕತೆಯೋ. ಅಂತೂ ಸೀಟು ಕಾಯ್ದಿರಿಸಲಿಲ್ಲ, ಹೊರಡುವ ದಿವಸ ನೋಡಿದರೆ ಎಲ್ಲ ಎಕ್ಸಿಕ್ಯುಟಿವ್ ಸೀಟುಗಳೂ ಭರ್ತಿಯಾಗಿವೆ! ಇತ್ತ ಸೊಸೆಗೋ ತುಂಬಾ ಸಂಕಟ. 'ನಿಮ್ಮಪ್ಪನೇ ಮಂತ್ರಿ ಆಗಿದ್ದರೂ ಸೀಟು ಕೊಡಿಸುವ ಯೋಗ್ಯತೆ ಇಲ್ಲ' ಅಂತ ಹೀಯಾಳಿಸಿಯಾರು ಎನ್ನುವ ಆತಂಕ ಮೂಡಿರಬೇಕು. ಅದಕ್ಕೆ ಆ ಸೊಸೆ



ಮುದ್ದು 'ಈ ಚಿಕ್ಕ ವಿಮಾನದ ಬದಲು ದೊಡ್ಡ ವಿಮಾನ ತರುಸ್ತೀನಿ' ಅಂದಿರಬೇಕು. ಅಂತೂಇಂತೂ ದೊಡ್ಡ ವಿಮಾನವೇ ಬೀಗರ ಸೇವೆಗೆ ಬಂದಿತಂತೆ! ಪ್ರಯಾಣಿಕರಿಗೆ ಯಾವುದೇ ರೀತಿಯ ಅಡಚಣೆ ಉಂಟಾಗಲಿಲ್ಲವಂತೆ. ದೊಡ್ಡ ವಿಮಾನ ಆದ್ದರಿಂದ ಒಂದಷ್ಟು ಸೀಟುಗಳು ಖಾಲಿ ಬಿದ್ದಿದ್ದವಂತೆ. ಅದರಿಂದ ಒಂದಷ್ಟು ಸರ್ಕಾರದ ಬೊಕ್ಕಸಕ್ಕೆ ನಷ್ಟ ಆಗಿರಬಹುದು. ಅದೇನು ಮಹಾಬಿಡಿ.

ಮತ್ತೆ ಪಾಕಿಸ್ತಾನಿ ಪ್ರಯಾಣಿಕರ ಬಳಿ ಬರೋಣ. ಎಕ್ಸಿಕ್ಯುಟಿವ್ ಸೀಟು ಸಿಗಲಿಲ್ಲ ಎಂದು ಆ ಇಬ್ಬರಿಗೂ ಭಾರೀ ನಿರಾಶೆ ಆಯಿತಂತೆ. ಅವರಿಗೆ ಆ ವಿಮಾನದ ಬದಲು ದೊಡ್ಡ ವಿಮಾನ ತರಿಸುವ ಚಾತಿ ಇರಲಿಲ್ಲವೋ, ಶಕ್ತಿ ಇರಲಿಲ್ಲವೋ ತಿಳಿಯದು. ಮುಖ ಆಮೇಲೆ ಮಾಡುವುದಕ್ಕೆ ಇನ್ನೇನು ಇದೆ. ಮುಖ ಇಳಿಬಿಟ್ಟುಕೊಂಡು ನಿಂತರಂತೆ. ಇವರ ಸಂಕಟ ನೋಡುತ್ತಿದ್ದ ಪೈಲಟ್‌ಗೆ ಕನಿಕರ ಬಂದಿರಬೇಕು. ಅವರಿಗೆ ಸಮಾಧಾನ ಹೇಳಿ ತನ್ನ ಜೊತೆಯೇ ವಿಮಾನದ ಹತ್ತಿರಕ್ಕೆ ಕರೆದುಕೊಂಡು ಹೋದನಂತೆ. "ಹತ್ತಿ ಪ್ಲೇನ" ಅಂದನಂತೆ. ಇವರು ಹತ್ತಿದರಂತೆ. ಅವನೂ ಇವರ ಜೊತೇನೆ ಬಂದನಂತೆ. ಗಗನಸಖಿ "ಸೀಟು ಖಾಲಿ ಇಲ್ಲ" ಎಂದಳಂತೆ. ಸೀಟು ಖಾಲಿ ಇಲ್ಲದಿದ್ದರೇನಂತೆ "ನಾವು 'ಸ್ಟಾಂಡಿಂಗ್ ಸೀಟ್'ಲೇ ಬರ್ತೀವಿ" ಅನ್ನೋ ಹಂಗಿಲ್ಲ, "ಒಳಗಡೆ ಬ್ಯಾಡ ತಾಯಿ ನಾವು 'ಟಾಪ್ ಸೀಟ'ಲೇ ಬರ್ತೀವಿ" ಅಂತ ವಿಮಾನದ ಮೇಲೆ ಕೂರುವಂತಿಲ್ಲ, ಇಬ್ಬರು ಪ್ರಯಾಣಿಕರೂ ಗಾಬರಿ ಆದರಂತೆ. ಇದನ್ನೆಲ್ಲ ಕಂಡರೂ ಕಾಣದವನಂತೆ ಪೈಲಟ್ಟು ಅವರನ್ನು ದಬ್ಬಿಕೊಂಡು ಸೀದ ಒಳ ನಡೆದನಂತೆ. ಟಾಯಿಲೆಟ್ ಹತ್ತಿರ ಹೋದರಂತೆ. ಬಾಗಿಲು ತೆಗೆದು "ನೀವು ಅಲ್ಲಿ ಕುಂತ್ಕಳಿ" ಅಂದನಂತೆ. ಅವರು ಮುಖ ಮುಖ ನೋಡಿದರಂತೆ. 'ಕ್ಯಾ ದೇಕ್ತಾ ಹೈ ಬೈಠೋ ಇನ್‌ಸೀಟ್ ಪರ್' ಅಂತ ಟಾಯಿಲೆಟ್ ಸೀಟನಲ್ಲಿ ಇಬ್ಬರನ್ನೂ ಕುಳ್ಳಿರಿಸಿದನಂತೆ! ಇತರೆ ಏರ್‌ಲೈನ್ಸ್‌ನವರೂ ಇಷ್ಟೊಂದು ಸೀಟುಗಳನ್ನು ಇದುವರೆವಿಗೂ ವ್ಯರ್ಥ ಮಾಡಿದ್ದೆವಲ್ಲ ಅಂತ ತಮ್ಮ ಮೂರ್ಖತನಕ್ಕೆ ಶಪಿಸಿಕೊಂಡು ಪಾಕಿಸ್ತಾನ ಪೈಲಟ್ ಮಾದರಿ ಅನುಸರಿಸಿದರೂ ಅನುಸರಿಸಬಹುದೇನೋ!!

ಅದು ಹಾಗಿರಲಿ. ಪೈಲಟ್ ಏನೋ ಟಿಕೆಟ್ ಸಿಗದ ಒದ್ದಾಡುತ್ತಿದ್ದ ಪ್ರಯಾಣಿಕರಿಗೆ ಟಾಯಿಲೆಟ್ ಸೀಟ್ ದಾರಿ ತೋರಿಸಿದ. ಬೇರೆ ಪ್ರಯಾಣಿಕರಿಗೆ ಅವಸರವಾಗಿ ಟಾಯಿಲೆಟ್ ಹೋಗುವ ಹಾಗಾದರೆ ಏನು ಮಾಡಿದರು ಅಂತ. ಪ್ರಾಯಶಃ 'ಚುಪ್ ಕೆ ಬೈಠ್. ಥೋಡಿ ದೇರ್‌ಮೆ ಲಾಹೋರ್ ಮಿಲ್ತಾ ಹೈ' ಅಂತ ಬೆದರಿಸಿರಬಹುದು!

ಸಿನಿಮಾ ಲೊಕೇಷನ್ ಯಾವುದು ಸ್ವಾಮಿ?

'ನಮ್ಮದು ತತ್ವ ಸಿದ್ಧಾಂತಗಳ ಪಕ್ಷ. ಚಿಂತನ ಮಂಥನ ನಡೆಯೋದು ಪಕ್ಷದ ಕಚೇರಿಯಲ್ಲಿ. ರೆಸಾರ್ಟ್ ಸಂಸ್ಕೃತಿ ನಮ್ಮದಲ್ಲ. ಅದೇನಿದ್ದರೂ ಅವರಿಗೆ ಸೇರಿದ್ದು' ಎಂದೆಲ್ಲ ಭಾಜಪ ಮುಖಂಡರು ಹೇಳುತ್ತಾ ವಿಪಕ್ಷಗಳ ಕಡೆ ಬೆರಳು ತೋರಿಸಿ 'ಅವರದ್ದೂ ಒಂದು ಬಾಳಾ' ಅನ್ನುವ ಹಾಗೆ ಆಡುತ್ತಿದ್ದರು. ಅರೆರೆ ಇದೇನಪ್ಪ ಹೀಗೆಲ್ಲ ಹೇಳುತ್ತಾರೆ. ಮನೆ ಜಗಳ ಅನ್ನುವುದು ಹಾದಿರಂಪ ಬೀದಿರಂಪ ಆದಾಗಲೆಲ್ಲ ಗೋಲ್ಡನ್ ಪಾಮ್ ರೆಸಾರ್ಟ್‌ಗೆ ಶಾಸಕರ ಹಿಂಡು ಅಟ್ಟಿಕೊಂಡು ಹೋಗ್ತಾರಲ್ಲ, ಅವರೂ ಹೇಳುವುದು ವೇದಾಂತ ತಿನ್ನುವುದು ಬದನೆಕಾಯಿ ವಂಶದವರೇನಾ ಅಂತೆಲ್ಲ ಯೋಚಿಸುತ್ತಿದ್ದೆ. ವಿಷಯ ಒಳಹೊಕ್ಕು ನೋಡಿದಾಗ ಅದು ಹಾಗಲ್ಲ ಅನ್ನುವುದು ತಿಳಿಯಿತು. ಒಂದು ರೀತೀಲಿ ಆ ರೆಸಾರ್ಟ್ ಇದೆಯಲ್ಲ ಅದು ಅವರದ್ದೇ ಪಕ್ಷದ ರೆಸಾರ್ಟ್ ಅಂತೆ!

ಅರೆ ಇದು ಹೇಗಾಯಿತು? ಭಾಜಪದವರೆಲ್ಲ ರಾಜಕೀಯ ಮಾಡುವುದನ್ನ ಬಿಟ್ಟು ಹೋಟೆಲ್ ಉದ್ದಿಮೆಗೆ ಇಳಿದರಾ ಅಂದರೆ ಅದು ಹಾಗಲ್ಲ. ಗೋಲ್ಡನ್ ಫಾರ್ಮ್ ರೆಸಾರ್ಟಿನವರು ಅದೆಷ್ಟೋ ಕೋಟಿ ರೂಪಾಯಿ ತೆರಿಗೆ ಬಾಕಿ ಉಳಿಸಿಕೊಂಡಿದ್ದರಂತೆ. ಈ ಸರ್ಕಾರ ಏನು ಮಾಡಿತು? ತೆರಿಗೆಯಲ್ಲಿ ಐದು ಕೋಟಿ ರೂಪಾಯಿಯ ವಿನಾಯಿತಿ ನೀಡಿತು! ಪರೋಕ್ಷವಾಗಿ ಪಾರ್ಟನರ್ ಆದ ಹಾಗೆ ಅಲ್ಲವಾ. ಅಲ್ಲಿಗೆ ಅದು ಪಕ್ಷದ್ದೇ ರೆಸಾರ್ಟ್ ಆಯಿತಲ್ಲಾ, ಅದಕ್ಕೇ ಅಲ್ಲಿ ಶಾಸಕರ ತಂದು 'ಚಿಂತನ-ಮಂಥನ' ಮಾಡುತ್ತಾರೆ!

ನನ್ನ ಮಾತನ್ನು ಒಪ್ಪಲು ಹಲವರು ಸಿದ್ಧರಿಲ್ಲ, ಅವರ

ರಾಜ್ ಕುಟುಂಬದ ಬಗ್ಗೆ ಸುಪ್ತ-ಅಪರೋಕ್ಷ ಸಹಾಯ ರುಚಿಸುವುದಿಲ್ಲ

ತುಷಾರ್ ಮತ್ತು ಮ್ಯಾಥ್ಯೂ ಒಂದು ತಿಂಗಳ ಕಾಲ ಬಡ ಭಾರತೀಯರಾಗಿ ದಿನ ಒಂದಕ್ಕೆ **18** ರೂ.ನಲ್ಲಿ ಬದುಕು ಸಾಗಿಸಲು ಮಾಡಿದ ಪ್ರಯತ್ನ ಅಸಾಧಾರಣೀಯ. ಪ್ರತ್ಯಕ್ಷ ಕಂಡರೂ ಪ್ರಾಮಾಣಿಸಿ ನೋಡು ಎಂಬಂತೆ ಇವರಿಬ್ಬರ ಪ್ರಯೋಗ ಗಾಂಧೀಜಿಯ ಗುರು



ಸ್ಥಾನದಲ್ಲಿದ್ದ 'ವಾಲ್ಡೆನ್' ಕೃತಿಯ ಲೇಖಕ ಅಮೆರಿಕದ ಹೆನ್ರಿ ಡೇವಿಡ್ ಥೊರೊನನ್ನು ನೆನಪಿಸುವಂತಿದೆ. ಸಮಾಜ ನಿಷ್ಠ ಸತ್ಯಶೋಧನೆ ಹೇಗಿರಬೇಕು ಎಂಬುದರ ಬಗ್ಗೆ ಒಂದು ಸಣ್ಣ ಮಾದರಿ ಇದು. ಗಾಂಧೀಜಿ ತಮ್ಮ ಜೀವನಪರ್ಯಂತ ಇಂಥ ಸತ್ಯಶೋಧನೆಯಲ್ಲೇ ನಿರತರಾಗಿದ್ದರು. ಕಡೆಗೆ ಮನುಷ್ಯನ ಸಣ್ಣತನದ ಅನಾವರಣ ಮಾಡಲೆಂಬಂತೆ, ತನಗೆ ಜೀವರಕ್ಷಣೆ ಯಾವುದೂ ಬೇಡವೆಂದು ನಿರಾಕರಿಸುವ ಮೂಲಕ ಪ್ರಾಣತೆತ್ತುಕೊಂಡವರು ಅವರು.

ಪ್ರಸ್ತುತ ಐಷಾರಾಮ ಜೀವನನಿರತ ನಮ್ಮ ಶ್ರೀಮಂತ ಜಡ ಯುವಜನ ತುಷಾರ್ ಮತ್ತು ಮ್ಯಾಥ್ಯೂ ಅವರ ಪ್ರಯೋಗದಿಂದ ಕಿಂಚಿತ್ ಕಣ್ ತೆರೆದರೆ ಸಾಕು ಈ ಬಡ ಭಾರತ ಎಷ್ಟೋ ಪ್ರಗತಿ ಹೊಂದಬಲ್ಲದು.

ಇಂತಹವರ ಬಗ್ಗೆ 'ಕಂಡಹಾಗೆ'ಯಲ್ಲಿ ಬರೆದ ಗೌರಿ ಅವರಿಗೆ 'ಥ್ಯಾಂಕ್ಸ್' ಎಂದರಷ್ಟೇ ಸಾಕೆ?

- ಪ್ರೊ. ಶಿವರಾಮಯ್ಯ, ಬೆಂಗಳೂರು


18.01.2012ರ 'ಗೌರಿ ಲಂಕೇಶ್' ಪತ್ರಿಕೆಯಲ್ಲಿ ಅಂಬಾನಿ ಕುಟುಂಬದ ರಿಲಯನ್ಸ್ ಸಾಮ್ರಾಜ್ಯದ ಕತೆಯನ್ನು ಓದಿ ಆಘಾತವಾಯಿತು! ಒಂದೇ ಪ್ರಕರಣದಲ್ಲಿ **31,000** ಕೋಟಿ ರೂ. ವಂಚನೆ. ಮತ್ತೊಂದು ಪ್ರಕರಣದಲ್ಲಿ **17,500** ಕೋಟಿ ರೂ. ವಂಚನೆ ಎಂದರೆ ಸಾಮಾನ್ಯವೇ? ಒಂದೊಂದು ಪ್ರಕರಣದಲ್ಲೇ ಸಾವಿರಾರು ಕೋಟಿ ರೂ. ಲೂಟಿ ಮಾಡಬಹುದಾದರೆ ಲಕ್ಷ ಲಕ್ಷ ಕೋಟಿ ಸಂಪಾದಿಸುವುದು ಆಶ್ಚರ್ಯವೇನಲ್ಲ ಎಂಬುದನ್ನು ಅಂಬಾನಿಗಳು ತೋರಿಸಿಕೊಟ್ಟಿದ್ದಾರೆ!

ಈ ದೇಶವಲ್ಲದೆ ಬೇರಾವ ದೇಶದಲ್ಲಿ ಅಂಬಾನಿಗಳು ಇಷ್ಟೊಂದು ಸಾಧನೆ (ಲೂಟಿ) ಮಾಡಲಾಗುತ್ತಿರಲಿಲ್ಲ. ಅಂದರೆ, ಈ ದೇಶದಲ್ಲಿ ಎಂತೆಂತಹ ಭಾರೀ 'ಅವಕಾಶ'ಗಳಿವೆ ಎಂಬುದನ್ನು ನಾವು ಅರಿಯಬೇಕು. ಹೀಗೆ ಕೊಳ್ಳೆ ಹೊಡೆದ ಹಣದಲ್ಲಿ ಒಂದು ಭಾಗ ಉಪಯೋಗಿಸಿ ಸರ್ಕಾರವನ್ನೇ (ಅವರಿಗೆ ಬೇಕಾದ ಮಂತ್ರಿಯನ್ನೇ) ಕೊಳ್ಳುತ್ತಾರೆ. ಹೀಗಿರುವಾಗ ಅಧಿಕಾರಿಗಳನ್ನು ಕೊಳ್ಳುವುದು ತೀರ ಬುಜುಬಿ ವಿಷಯ; ಅದು ತನ್ನಷ್ಟಕ್ಕೆ ತಾನೇ ಆಗುವ ಕೆಲಸ.

ಈಗ ಮಾಧ್ಯಮಗಳು ಅಂಬಾನಿ ತರಹದ ಶ್ರೀಮಂತರನ್ನು ಎದುರು ಹಾಕಿಕೊಳ್ಳುವುದಿರಲಿ, ಅಂಬಾನಿಗಳೇ ಹಲವು ಪ್ರಮುಖ ಮಾಧ್ಯಮಗಳ ಒಡೆಯರಾಗಿದ್ದಾರೆ.

ಈ ದೇಶ ಈವರೆಗೆ ಕಂಡ ಅತ್ಯಂತ ಭಾರೀ ಹಗರಣವಾದ 2ಜಿ ಹಗರಣವು ಅಂಬಾನಿಗಳಿಗೆ ಸಂಬಂಧಿಸಿದ್ದರೂ, ಈವರೆಗೂ ಯಾವ ಪತ್ರಿಕೆಯಾಗಲೀ, ಟಿವಿ ಚಾನಲ್‌ಆಗಲೀ ಅಂಬಾನಿಗಳ ಪಾತ್ರವನ್ನು ಬಹಿರಂಗಪಡಿಸಿಲ್ಲ, ಅಷ್ಟೇ ಏಕೆ? ಸಂಸತ್ತಿನಲ್ಲಿ ಯಾವುದೇ ವಿರೋಧ ಪಕ್ಷ (**BJP, BSP, SP, RJD, AIADMK, TMC**) ಅಂಬಾನಿಗಳ ಬಗ್ಗೆ ಸೊಲ್ಲೇ ಎತ್ತಿಲ್ಲ!!!

ವಿ.ಸೂ.: ನಿಮ್ಮ ಅನಿಸಿಕೆಗಳನ್ನು **lankesh70@rediffmail.com** ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು **9980331427** ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ ಕಳುಹಿಸಬಹುದು.



ಹೀಗಿರುವಾಗ ಗೌರಿ ಲಂಕೇಶ್ ಮಾತ್ರ ಆ ಕೆಲಸವನ್ನು ಮಾಡಿ, ತನ್ನ ಓದುಗರಿಗೆ ಪೂರ್ಣ ಮಾಹಿತಿಯನ್ನು ಒದಗಿಸಿ ಪ್ರಾಮಾಣಿಕತೆಯನ್ನು ಮೆರೆದಿದೆ. ಇಂತಹ ಸಾಧನೆಗಳನ್ನು "ಗೌರಿ ಲಂಕೇಶ್" ಸದಾ ಮಾಡುತ್ತಲೇ ಬಂದಿದೆ. ಅದಕ್ಕಾಗಿ ಪತ್ರಿಕೆಗೆ ನನ್ನ ಕೋಟಿ ಕೋಟಿ ಪ್ರಣಾಮಗಳು. ಜಾಹಿರಾತುಗಳ ನೆರವನ್ನೂ ಪಡೆಯದೆ ಉದ್ಯಮಿಗಳು ಮತ್ತು ಸರ್ಕಾರದ ದಾಕ್ಷಿಣ್ಯದಿಂದ ಮುಕ್ತವಾಗಿದ್ದುಕೊಂಡು ನಿಜವಾದ ಪತ್ರಿಕೋದ್ಯಮವನ್ನು ನಡೆಸುತ್ತಿರುವ ಗೌರಿಯವರಿಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳು.



- ವೀರಖ್ಯಾತಯ್ಯ, ಬೆಂಗಳೂರು

ನಾನು ರಾಜ್‌ಕುಮಾರ್ ಅವರ ಅಭಿಮಾನಿ. ನಾನು ಅವರ ಸ್ವಂತ ತಾಲೂಕಿನವನು. ಆದರೆ ಡಾ.ರಾಜ್ ಕುಟುಂಬದ ಬಗ್ಗೆ ನಿಮ್ಮ ಸುಪ್ತ-ಅಪರೋಕ್ಷ ಸಹಾಯ ನನಗೆ ರುಚಿಸುವುದಿಲ್ಲ. ಇತರೇ ಮಾಧ್ಯಮದವರಂತೆ ನೀವೂ ಅಷ್ಟೆ...?

ಕುಟುಂಬ-ಸ್ವಂತ ಬೆಳವಣಿಗೆಯನ್ನೇ ಕನ್ನಡ ಚಿತ್ರರಂಗದ ಬೆಳವಣಿಗೆಯೆಂದು ಏಕೆ ಚಿತ್ರಿಸುತ್ತೀರಿ. ದಯವಿಟ್ಟು ಕನ್ನಡ ಚಿತ್ರರಂಗದ ಇತರೇ ವ್ಯಕ್ತಿಗಳ ಬಗ್ಗೆ ನಿಷ್ಠುರವಾಗಿ ಬರೆಯಬೇಡಿ. ಹೊಸ ನಟರ ಬಗ್ಗೆ ಮುಖಪುಟದಲ್ಲಿ ಅಷ್ಟು ವೈಭವೀಕರಿಸಿ ಬರೆಯಬೇಡಿ-ಇತರೇ ಮಹತ್ವದ ಸುದ್ದಿಗಳಿವೆ. ಚಿಗುರುತ್ತಿರುವ ಕನ್ನಡ ಚಿತ್ರರಂಗವನ್ನು ಚಿವುಟಲು ಅವಕಾಶ ಕೊಡಬೇಡಿ. ನಿಮ್ಮ ಮುಖಪುಟ ನೋಡಿ ಪತ್ರಿಕೆ ಓದುವವರು ನಾವಲ್ಲ.

ಮತ್ತೊಂದು ಬಹಳ ಸೀರಿಯಸ್ ವಿಷಯ: **National Geographic, Discovery, Animal Planet, Cartoon Network** ಇತ್ಯಾದಿ ವಾಹಿನಿಯವರು ತಮ್ಮ ಕಾರ್ಯಕ್ರಮಗಳನ್ನು ಹಿಂದಿ, ತಮಿಳು, ತೆಲುಗು ಇತ್ಯಾದಿ ಭಾಷೆಗಳಲ್ಲೂ (ಧ್ವನಿ) ಪ್ರಸಾರ ಮಾಡುತ್ತಾರೆ. ನಮ್ಮಲ್ಲೂ ಇದು ಸಾಧ್ಯವಾದರೆ ನಮ್ಮ ಕನ್ನಡದ ಮಕ್ಕಳೂ ಹೆಚ್ಚು ಅನುಕೂಲ ಪಡೆಯುತ್ತಾರೆ. ನನ್ನ ಮಗನು ಮೂರು ವರ್ಷದವನು, ಕಾರ್ಟೂನ್ ಇಲ್ಲವೇ ಪ್ರಾಣಿ-ಪಕ್ಷಿಗಳ ಕುರಿತ ಕಾರ್ಯಕ್ರಮಗಳನ್ನು ನೋಡುತ್ತಾನೆ. ಆದರೆ ಎಲ್ಲಕ್ಕೂ ಕನ್ನಡದಲ್ಲಿ ಕೇಳುತ್ತಾನೆ. ಅದೇ ನಮ್ಮ ಮನೆಯ ಪಕ್ಕದ ತಮಿಳು/ಹಿಂದಿ ಹುಡುಗ ಆತನದೇ ಭಾಷೆಯಲ್ಲಿ ಚೆನ್ನಾಗಿ ಕೇಳುತ್ತಾನೆ. ನಮ್ಮ ಭಾಷೆಯ ಬಗ್ಗೆ ನಮ್ಮ ಮಕ್ಕಳಲ್ಲಿ ಇಲ್ಲಿಂದಲೇ ಕೀಳರಿಮೆ ಶುರುವಾಗುತ್ತದೆ. ಆತ ಕನ್ನಡ ಪತ್ರಿಕೆ, ಸಿನಿಮಾ, ಸಂಸ್ಕೃತಿಯಿಂದ ವಿಚಲಿತನಾಗುತ್ತಾ ಹೋಗುತ್ತಾನೆ. ಇದರ ಬಗ್ಗೆ ತಮ್ಮಿಂದ ಒಂದು ಲೇಖನವನ್ನೋ-ಚರ್ಚೆಯನ್ನೋ ಪ್ರಾರಂಭಿಸಲು ಸಾಧ್ಯವೇ? ನಿಮ್ಮಂತಹವರಿಂದ ನನ್ನ ಭಾಷೆಗೆ ಖಂಡಿತಾ ಭರವಸೆ ಇದೆ.

- ಎನ್.ಶರವಣ, ಬೆಂಗಳೂರು

ಬುದ್ಧಿವಂತರ ಜಿಲ್ಲೆ ಕರಾವಳಿ ಈಗ ಕಾಮಕೇಳಿ ನಾಯಕರ ನರಕ ಆಗಿರುವುದು ಆರೆಸ್ಸೆಸ್ ಸಂಸ್ಕೃತಿಗೆ ತಕ್ಕುದಾಗಿಯೇ ಇದೆ. ಭಂಡವಾದ

ಶಾಸಕರು ಅಲ್ಲಿ ಸೇರಿದ್ದು ಚಿಂತನ-ಮಂಥನಕ್ಕೆ ಅಲ್ಲವೇ ಅಲ್ಲ. ಎರಡು ... ಎಂದು ಹೇಳಿ ಎರಡು ಗಂಟೆಗೇ ಬರಬಾಸ್ತಾದರೆ ಎಂತಹ ಚಿಂತನೆ ...ಯುತ್ತೆ? ಏನು ಮಂಥನ ಆಗುತ್ತೆ? ಎಂಬ ಪ್ರಶ್ನೆ ಎತ್ತುತ್ತಾರೆ. ಮತ್ತೆ ಯಾಕೆ ...ಯ ಅಂದ್ರೆ ಲೋಕಸಭಾ ಸದಸ್ಯ ಎಚ್. ವಿಶ್ವನಾಥ್ ಅವರು ಭಾಜಪದವರು ...ದ ಕರ್ಮಕಾಂಡ' ಸಿನಿಮಾ ತೆಗೆಯುತ್ತಿದ್ದಾರೆ ಎಂದು ಹೇಳಿರುವುದೇ ...ತೆ. ಅದಕ್ಕೆ ಸಕಲ ವೇಷ ಭೂಷಣಗಳೊಂದಿಗೆ ಅಲ್ಲಿ ಸೇರಿದ್ದರಂತೆ.

...ನ್ಯ ಸಂಸದರು ಈ ಚಿತ್ರದಲ್ಲಿ ಯಾರು ಯಾರದ್ದು ಏನು ಪಾತ್ರ ... ಮನಸ್ಸಿಗೆ ನಾಟುವಂತೆ ವಿವರಿಸಿದ್ದಾರೆ. ಅವರ ಪ್ರಕಾರ.

...ರ್ದೇಶಕರು: ಎಚ್.ಡಿ. ದೇವೇಗೌಡ ಮತ್ತು ಎಚ್.ಡಿ. ಕುಮಾರಸ್ವಾಮಿ.

...ದು ಹೊಸ ಅಲೆಯ ಚಿತ್ರ ಆದುದರಿಂದ ನಿರ್ದೇಶಕರ ಹೆಸರು ...ಯು ಬಂದಿದೆ. ನಂತರ ಇತರೆಯವರ ಹೆಸರು ಬರುತ್ತದೆ-ಲೇ)

...ಳನಾಯಕ: ಬೋಪಯ್ಯ

...ಡೀ ಚಿತ್ರದ ಜೀವಾಳವೇ ಈತ. ಆದುದರಿಂದ ಅವರು ನಾಯಕನಿಗಿಂತ ...ಲೇ ಬರುತ್ತಾರೆ-ಲೇ)

...ಷಕ: ರೇಣುಕಾಚಾರ್ಯ, ಸೋಮಣ್ಣ.

...ದರಲ್ಲಿ ಬಿ.ಪಿ. ಹರೀಶ್ ಹೆಸರು ಇರಲೇಬೇಕಿತ್ತು, ಅಲ್ಲದೆ ಸನ್ಮಾನ್ಯ ...ಕಾಚಾರ್ಯರು ಪಾತ್ರಕ್ಕಿಂತಲೂ ವಿದೂಷಕನ ಪಾತ್ರವನ್ನು ಸಮರ್ಪಕವಾಗಿ ...ಂಸುವ ಕಲೆ ಮೈಗೂಡಿಸಿಕೊಂಡಿದ್ದಾರೆ. ಅದನ್ನೇ ಶ್ರೀಯುತರಿಗೆ ನೀಡಿದ್ದರೆ ...ೀಹಾರಿಯಾಗಿರುತ್ತಿತ್ತು. ಲೋಕೋಭಿನ್ನರುಚಿಃ ಏನು ಮಾಡುವುದು ...)

...ಹಿತ್ಯ, ಚಿತ್ರಕತೆ, ಸಂಗೀತ: ಯಡಿಯೂರಪ್ಪ

...ತಿಥಿ ನಟ: ನಿತಿನ್ ಗಡ್ಕರಿ

...ನಾಯಕ ನಟ ಹೆಸರಿಗೆ ಮಾತ್ರ. ನಿಜವಾದ ಪಾತ್ರಧಾರಿ ಇವರೇ-ಲೇ)


...ಾಯಕ ನಟ: ಈಶ್ವರಪ್ಪ

...ಾಯಕಿ: ....

...ಶ್ರೀಯುತರು ಇದನ್ನು ಬಹಿರಂಗಗೊಳಿಸಿಲ್ಲ. ಇಡೀ ದೇಶಕ್ಕೆ ತಿಳಿದಿದೆ ... ಮುಗುಂ ಆಗಿ ಹೇಳಿದ್ದಾರೆ. ಬಹಳಷ್ಟು ಸಲ ಚಿತ್ರದ ಯಶಸ್ಸು ... ಮೈಮಾಟ, ಹಾವಭಾವದ ಮೇಲೇ ನಿಂತಿರುತ್ತದೆ. ಅದನ್ನು ಸ್ಪಷ್ಟಗೊಳಿಸಿ ...ಾಥ್ ಅವರೆ. ಕರಾವಳಿ ಕನ್ಯೆ ಇರಬಹುದೆ?-ಲೇ)

...ಾಷ್ಟೆಲ್ಲ ಖುಲ್ಲಂಖುಲ್ಲಾ ಹೇಳಿದ ಮೇಲೆ 'ಲೊಕೇಷನ್' ಎಲ್ಲಿ ಅಂತಲೂ ...ಬಹುದಿತ್ತು. ಅದೂ ಸಹ ನಾಯಕಿ ಯಾರು ಎಂಬುದು ಜನತೆಗೆ ... ಅರಿವಿದೆ ಎಂದು ಹಾರಿಕೆ ಮಾತು ಹೇಳಿದಂತೆ ...ದೂ ಸಹ ಎಲ್ಲರಿಗೂ ಅಂಗೈ ಹುಣ್ಣಿನಷ್ಟೇ ಸ್ಪಷ್ಟವಾಗಿರುವ ಸಂಗತಿ ... ಬಿಟ್ಟಿರಬಹುದೇನೋ. ಸನ್ಮಾನ್ಯ ಸಂಸತ್ ಸದಸ್ಯರೇ ಹೇಳಿ. ಇದು ...ತ್ತೂರು ಮಠವೆ? ಸಿದ್ಧಗಂಗಾಮಠವೆ? ಅಥವಾ ಕೇಶವಕೃಪ ಇರಬಹುದೆ? ... ಎಲ್ಲ ಸರಿ. ಶಾಸಕರ ದಂಡೇಕೆ ರೆಸಾರ್ಟ್‌ಗೆ ಬಂದಿದೆ? ಅದೂ ಒಂದು ...ೇಶನ್ ಸ್ಪಾಟಾ? ಅಲ್ಲ ಕಣ್ರಿ. ಇಲ್ಲಿ ಎಲ್ಲರನ್ನು ಕಲೆ ಹಾಕಿ ಅಲ್ಲಿಂದ ...ೆ ಅಟ್ಟಿಕೊಂಡು ಹೋಗ್ತಾರೆ.....!

ಷೆ



ಮರೆಯಲು ಆಗದ ಸೌಂದರ್ಯ

ಸೌಂದರ್ಯ ಎಂಬ ದುಂಡುಮುಖದ ಬೊಗಸೆ ಕಣ್ಣುಗಳ ನಾಯಕಿ ನಮ್ಮನ್ನಗಲಿ ಸುಮಾರು ಎಂಟು ವರ್ಷಗಳೇ ಸಂದುಹೋದವು. ಸೌಂದರ್ಯ ರಘು ಎಂಬ ತನ್ನ ಸಂಬಂಧಿಯನ್ನು ಮದುವೆಯಾಗಿ ಮೊದಲ ವೆಡ್ಡಿಂಗ್ ಆನಿವರ್ಸರಿಯನ್ನು ಆಚರಿಸಿಕೊಳ್ಳುವ ಮುನ್ನವೇ 2004ರ ಏಪ್ರಿಲ್ 17ರಂದು ವಿಮಾನ ಅಪಘಾತದಲ್ಲಿ ನಿಧನ ಹೊಂದಿದರು. ಆ ಅಪಘಾತದಲ್ಲಿ ಸೌಂದರ್ಯಳ ಜೊತೆಗೆ ಆಕೆಯ ಸಹೋದರ ಮತ್ತು ಗಾಡ್‌ಫಾದರ್ ತರಹ ಇದ್ದ ಅಮರ್ ಕೂಡ ನಿಧನ ಹೊಂದಿದ್ದರಿಂದ ಅವರ ಕುಟುಂಬದವರ ಪಾಲಿಗೆ ಅದೊಂದು ಸಹಿಸಲಾರದ ದುರಂತವಾಗಿತ್ತು.

ಈ ಆಘಾತದಿಂದ ಸೌಂದರ್ಯಳ ಪತಿ ರಘು ಹೊರಬರಲು ಸುಮಾರು ವರ್ಷಗಳನ್ನೇ ತೆಗೆದುಕೊಂಡರು. ಕೊನೆಗೆ ತಮ್ಮ ಸಂಬಂಧಿಕರ ಒತ್ತಾಯದ ಮೇರೆಗೆ ಎರಡು ವರ್ಷಗಳ ಹಿಂದೆ ಡಾ. ಅರ್ಪಿತ ಎಂಬುವವರನ್ನು ಮದುವೆಯಾದರು. ರಘು ಅವರ ಈ ಎರಡನೆಯ ಮದುವೆ ಹೆಚ್ಚು ಪ್ರಚಾರ ಪಡೆಯಲಿಲ್ಲ, ಹಾಗಂತ ಅದೇನು ಗುಟ್ಟಾಗಿ ನಡೆದ ಮದುವೆ ಆಗಿರಲಿಲ್ಲ.

ಮೊನ್ನೆ ಮಾತಿಗೆ ಸಿಕ್ಕಾಗ ಸ್ವತಃ ರಘು ಅವರೇ ತಮ್ಮ ಎರಡನೆ ಮದುವೆಯ ಬಗ್ಗೆ ಹೇಳಿದರು. ಅಷ್ಟರಮಟ್ಟಿಗೆ ಈ ರಘು ನೇರ ನಡೆ-ನುಡಿಯ ಮನುಷ್ಯ.

"ಸೌಂದರ್ಯ ಇಲ್ಲದ ನಿಮ್ಮ ಬದುಕು ಹೇಗಿತ್ತು?" ಎಂಬ ಪ್ರಶ್ನೆಗೆ ರಘು ಅವರ ಮಾತಿಗಿಂತ ಅವರ ಕಣ್ಣಂಚಿನಲ್ಲಿ ಕಾಣಿಸಿಕೊಂಡ ಕಂಬನಿಯೇ ಉತ್ತರ ಹೇಳಿದಂತಿತ್ತು. "ಆಕೆಯ ನೆನಪಿನಲ್ಲಿ ಕೋಲಾರದ ಬಳಿ ಒಂದು ಸರ್ಕಾರಿ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡುತ್ತಿದ್ದೇನೆ. ಹಾಗೆಯೇ ಮನೆಯಲ್ಲಿ ಸೌಂದರ್ಯಳ ಹೆಸರಿನಲ್ಲೇ ಸಂಗೀತ ಕ್ಲಾಸ್ ನಡೆಸುತ್ತಿದ್ದೇನೆ. ಇದರ ಹೊರತಾಗಿ ಈಗ 'ರಘು ಸೌಂದರ್ಯ ಕ್ರಿಯೇಟರ್ಸ್' ಹೆಸರಿನಲ್ಲಿ ಝೀ ಟಿ.ವಿ.ಗಾಗಿ 'ಸೊಸೆ' ಎಂಬ ಧಾರಾವಾಹಿಯನ್ನು ನಿರ್ಮಿಸುತ್ತಿದ್ದೇನೆ" ಎಂದರು.

"ಸೌಂದರ್ಯ ಸಂಪಾದಿಸಿದ್ದ ಹಣವೆಲ್ಲ ನಿಮ್ಮ ಬಳಿಯಿದೆಯಂತೆ? ಅದರಿಂದಾಗಿಯೇ ನೀವು ಐಷಾರಾಮದ ಜೀವನ ನಡೆಸುತ್ತಿದ್ದೀರಿ ಎಂದು ಉದ್ಯಮದವರು ಹೇಳುವುದು ನಿಜವೇ?" ಎಂಬ ಪ್ರಶ್ನೆಗೆ ರಘು ಒಂದಿಷ್ಟೂ ವಿಚಲಿತರಾಗಲಿಲ್ಲ. "ನಾನು ಸೌಂದರ್ಯಳನ್ನು ಮದುವೆಯಾಗಿ ಒಂದು ವರ್ಷ ಆಗುವಷ್ಟರಲ್ಲೇ ಈ ದುರಂತ ನಡೆದುಹೋಯಿತು ಎಂಬುದನ್ನು ಅವರೆಲ್ಲ ಮರೆತಿರಬೇಕು. ಇಷ್ಟಾಗಿಯೂ ನಾವು ಹತ್ತಿರದ ಸಂಬಂಧಿಗಳು. ನನ್ನನ್ನು ಅವರ ಕುಟುಂಬದವರು ಬಾಲ್ಯದಿಂದಲೂ ಅರಿತಿದ್ದಾರೆ. ಉದ್ಯಮದ ಅನೇಕರು ಸೌಂದರ್ಯಳಿಗೆ ಸಂಭಾವನೆಯಲ್ಲಿ ಬಾಕಿ ಹಣವನ್ನು ಕೊಡಬೇಕಿತ್ತು. ಆಕೆ ಐದು ಭಾಷೆಯಲ್ಲಿ ನಟಿಸಿದ ಮಹಾನ್ ತಾರೆ. ಕನ್ನಡ ಸಮೇತ ಯಾವುದೇ ಭಾಷೆಯ ನಿರ್ಮಾಪಕರಲ್ಲಿ ಯಾರೂ ಕೂಡ ತಾವಾಗಿ ಬಂದು ಈತನಕ ಈ ಬಾಕಿ ಹಣವನ್ನು ನನಗಾಗಲಿ, ಸೌಂದರ್ಯಳ ತಾಯಿಗಾಗಲಿ ನೀಡಿಲ್ಲ. ಉದ್ಯಮದ ಜನ ನನ್ನ ಬಗ್ಗೆ ಇಂತಹ ಇಲ್ಲಸಲ್ಲದ ಆರೋಪ ಮಾಡುವ ಬದಲು ಅವರವರ ಜವಾಬ್ದಾರಿಯನ್ನು ನೋಡಿಕೊಂಡರೆ ಚೆನ್ನಾಗಿರುತ್ತದೆ" ಎಂದು ಉತ್ತರಿಸಿದರು.

ನಿಜ, ಸೌಂದರ್ಯ ಅಸುನೀಗಿದ ನಂತರ ಆಕೆಯನ್ನು ನೆನಪಿಸಿಕೊಳ್ಳುವ ಒಂದೇ ಒಂದು ಕಾರ್ಯಕ್ರಮವನ್ನೂ ಉದ್ಯಮದವರು ಹಮ್ಮಿಕೊಳ್ಳಲಿಲ್ಲ. ಅಷ್ಟೇ ಏಕೆ, ಭಾರತೀಯ ಜನತಾ ಪಕ್ಷದ ತನ್ನ ಚುನಾವಣಾ ಪ್ರಚಾರಕ್ಕೆಂದು ಸೌಂದರ್ಯಳನ್ನು ಒಂದು ಲಡ್ಡಾಸ್ ವಿಮಾನಕ್ಕೇರಿಸುವ ಮೂಲಕ ಆಕೆಯ ಸಾವಿಗೆ ಪರೋಕ್ಷವಾಗಿ ಕಾರಣವಾದ ಬಿಜೆಪಿಯವರೂ ಆಕೆಯನ್ನು ಇವತ್ತು ನೆನಪಿಸಿಕೊಳ್ಳುತ್ತಿಲ್ಲ.

ಒಬ್ಬ ಜನಪ್ರಿಯ ತಾರೆ ನಿಧನ ಹೊಂದಿದ ನಂತರ ಹೇಗೆ ಜನಮಾನಸದಿಂದ ಮತ್ತು ಉದ್ಯಮದ ಜನರಿಂದ ಮರೆಯಾಗುತ್ತಾರೆ ಎಂಬುದಕ್ಕೆ ಸೌಂದರ್ಯ ಒಂದು ಉದಾಹರಣೆ. ಅದೇನೇ ಇರಲಿ, ಸೌಂದರ್ಯಳ ನಿಧನಾ ನಂತರ ಆ ದುಃಖದಿಂದ ಹೊರಬಂದ ಅವರ ಪತಿ ರಘು ಈಗ ಎರಡನೇ ಮದುವೆಯಾಗಿರುವುದೂ, ಜೊತೆಗೆ ಸೌಂದರ್ಯಳನ್ನು ನೆನಪಿನಲ್ಲಿ ಕ್ರಿಯಾಶೀಲರಾಗಿರುವುದೂ, ಎರಡೂ ಸ್ತುತ್ಯಾರ್ಹ.

– ಶೇಸ್ರೈ

...ಂ ವಿತಂಡ ವಾದಗಳಲ್ಲಿ ಇಲ್ಲಿನ ಚಡ್ಡಿ ಬುದ್ಧಿವಂತರು ...ಾ ನಿಸ್ಸೀಮರು. ಚಡ್ಡಿಗಳೀಗ ಕರಾವಳಿಯನ್ನು ಬ್ರಹ್ಮ ಕಳಶ ...ವ ಮತ್ತು ಸಾಬರ ಮೇಲಿನ ದಾಳಿಗಳ ಪ್ರಯೋಗಾಲಯ ... ಪರಿವರ್ತಿಸಿವೆ. ಬರುವ ಅಸೆಂಬ್ಲಿ ಚುನಾವಣೆಯಲ್ಲಿ ...ವಳಿಯ ಸಾಮಾನ್ಯ ಜನತೆ ವಿಕೃತ ಕಲ್ಲಡ್ಕ ಭಟ್ಟನ ಕಚ್ಚೆ ...ಕು ವಿಟರನ್ನೇ ಗೆಲ್ಲಿಸಿದರೆ ಅದಕ್ಕಿಂತ ದುರಂತ ಇನ್ನೊಂದಿಲ್ಲ.

ಕರ್ನಾಟಕದ ಓರ್ವ ಪ್ರಜೆ, ಹಾಸನ

...ಫೆಬ್ರವರಿ 29ರ ಸಂಚಿಕೆಯಲ್ಲಿ ಲಕ್ಷ್ಮಣ ಸವದಿಗೆ ಚಪ್ಪಲಿ ... ಹಾಕಿದ್ದೀರಿ. ತುಂಬಾ ಥ್ಯಾಂಕ್ಸ್.

- ನಿತೇಶ್, ಆಲಮಟ್ಟಿ ಡ್ಯಾಮ್, ಬಿಜಾಪುರ

...ಮೌಢ್ಯವೆಂಬುದು ಜನರನ್ನು ಕತ್ತಲಲ್ಲಿಡುವ ಒಂದು ಹುನ್ನಾರ. ...ರಿಂದ ವೈಯಕ್ತಿಕ ತೀಟೆ ಅಥವಾ ಸ್ವಾರ್ಥವನ್ನು ಸಾಧಿಸುವ ...ಪ್ಪಿತ ಪಿತೂರಿಯೇ ಅದರ ಹಿಂದಿನ ರಹಸ್ಯ. ಶಿವನಿಲ್ಲದ ...ಯನ್ನು ಸಾಮಾನ್ಯ ಜನವರ್ಗ ಸ್ವೀಕರಿಸಲು ಬದ್ಧರಿರುವಾಗ, ...ಳುವ ವರ್ಗವೇ ಇದರ ಹಿಂದಿನ ದೊಡ್ಡ ಶಕ್ತಿಯಾಗಿ ...ತಿರುವುದು ದುರದೃಷ್ಟದ ಸಂಗತಿ.

... 'ಗಂಗಾಜಲ' ಪವಿತ್ರವೇ-ಅಪವಿತ್ರವೇ ...ನ್ನುವುದಕ್ಕಿಂತ ಜಲವನ್ನು ವಿತರಿಸಿ ...ಪಿ ಪವಿತ್ರನಾದೆ ಎಂಬ ಭ್ರಮೆ ಮಾಜಿ ...ಜರಾಯಿ ಮಂತ್ರಿ ಕೃಷ್ಣಯ್ಯ ಶೆಟ್ಟಿಗೆ. ...ದ ಮೂಲಭೂತ ಸಮಸ್ಯೆಗಳನ್ನರಿಯದ ...ತಹ ನಾಯಕಮಣಿಗಳು ಮೌಢ್ಯವನ್ನೇ ...ಡವಾಳ ಮಾಡಿಕೊಂಡು ವಿಜೃಂಭಿಸುತ್ತಿರು...ದು ವಿಚಿತ್ರವೇ ಸರಿ.

... ಈ ದೇಶದ ಕೊನೆಯ ವ್ಯಕ್ತಿಗೆ ಈಗ ...ಕಾಗಿರುವುದು ಅನ್ನ, ನೀರು, ಸೂರು ಮೊದ...ದ ಮೂಲಭೂತ ಸೌಲಭ್ಯಗಳು. ಹೀಗಿರು...ಗ ದಿನನಿತ್ಯವೂ ರೋಜಾವನ್ನೇ ಆಚರಿಸುತ್ತಿರುವ ...ಸುಸಂಪನ್ನ ಬಂಧುಗಳು ಇರುವ ಕಡೆ ...ಬದುಕಿಲ್ಲದ" ಕೃಷ್ಣಯ್ಯ ಶೆಟ್ಟಿ ಗಂಗಾಜಲ ...ತರಿಸುತ್ತಿರುವುದು ಯಾರಿಗೆ? ಇದರಿಂದ ...ಭವಾಗುವುದು ಯಾರಿಗೆ? ಈ ಗಂಗಾಜಲವನ್ನು ...ಕ್ಕೆ ಮಾಡಿಕೊಂಡ ತಕ್ಷಣ ಬದುಕು ಪವಿತ್ರವಾಗುವುದೇ? ...ಗಾಜಲ ಪವಿತ್ರ ಎನ್ನುವುದರ ಅರ್ಥವೇನು?



ನಮ್ಮೂರಿನ ನದಿ, ಬಾವಿಯಲ್ಲಿರುವ ನೀರಿಗೂ ಗಂಗಾಜಲಕ್ಕೂ ಏನಾದರೂ ವ್ಯತ್ಯಾಸವಿದೆಯೇ? ಎಂಬುದನ್ನು ಗಂಭೀರವಾಗಿ ಪ್ರಜ್ಞಾವಂತ ಸಮುದಾಯ ಚಿಂತಿಸಬೇಕಾಗಿದೆ. ಕಳೆದ ವರ್ಷವೂ ಗಂಗಾಜಲವನ್ನು ಈ ಕೃಷ್ಣಯ್ಯ ಶೆಟ್ಟಿ ವಿತರಿಸಿದ್ದರೂ ಆತ ಜೈಲಿಗೆ ಹೋಗಿ ಜಾಮೀನಿನ ಮೇಲೆ ಹೊರಬಂದದ್ದಾಯಿತು. ಗಂಗಾ ಜಲದಿಂದ 'ಅದೃಷ್ಟ' ಎನ್ನುವುದು ಇದ್ದಿದ್ದರೆ ಅದು ಯಾಕೆ ಆತನಿಗೇ ಕೈಕೊಟ್ಟಿತು?!

ರಾಜಕೀಯದ ಅಸ್ಥಿರತೆ, ನೀಲಿ ಚಿತ್ರದ ಕಪ್ಪುಚುಕ್ಕೆ, ಇಂತಹ ಪರಿಸ್ಥಿತಿಯಲ್ಲಿರುವ ಬಿಜೆಪಿ ಈಗ ಗಂಗಾಜಲವನ್ನು ಹಂಚುವ ಮೂಲಕ ಪವಿತ್ರವಾಗಲು ಪ್ರಯತ್ನಿಸುತ್ತಿರುವಂತಿದೆ.

ಮಲೆನಾಡು ಭಾಗದಲ್ಲಿ ಇಂದಿಗೂ ಶಿವರಾತ್ರಿ ಮತ್ತು ಗಣೇಶ ಚತುರ್ಥಿಯಂತಹ ಹಬ್ಬಗಳಲ್ಲಿ ಮಾಂಸಾಹಾರವೇ ಮುಖ್ಯವಾದ ಆಹಾರ. ದೇಸಿ ಸಂಸ್ಕೃತಿಯಲ್ಲಿ ಇನ್ನೂ ಶಿವ, ಗಣೇಶ ಮಾಂಸಾಹಾರಿಗಳಾಗಿರುವುದು ವಿಶೇಷ. ವಿಭಿನ್ನ ಧರ್ಮಗಳನ್ನು ಹೊಂದಿರುವ ಈ ನಾಡಿನಲ್ಲಿ, ಸರ್ವಧರ್ಮ ಸಮನ್ವಯತೆಯನ್ನು ಸಾರಬೇಕಾದ ತುರ್ತಿರುವ ಸಂದರ್ಭದಲ್ಲಿ ಹಿಂದೂ ಧರ್ಮದ ನೇತಾರರಾಗಿ, ಮೌಢ್ಯದ ಬೀಜ ಬಿತ್ತುವ ಪ್ರತಿನಿಧಿಯಾಗಿ, ಮತ್ತೊಮ್ಮೆ ಮೂಲಭೂತವಾದವನ್ನು ಪ್ರತಿಷ್ಠಾಪಿಸುವ ಮತ್ತು ಬಲಪಡಿಸುವ ಈ ಕೃತ್ಯ ಅತ್ಯಂತ ಹೇಯವಾದುದು.

ಭ್ರಷ್ಟರ ಹೆಸರಿನಲ್ಲಿ ಪೂಜೆ ನಡೆಯಬೇಕು ಎಂದ ಮಂತ್ರಿ, ಈಗ ಗಂಗಾಜಲದ ಪವಿತ್ರ ಎಂಬ ಮೌಢ್ಯ ಬಿತ್ತುತ್ತಿರುವುದು ಪ್ರಜಾ ಪ್ರಭುತ್ವದ ವ್ಯವಸ್ಥೆಗೆ ಮಾರಕ. ಹೀಗಾಗಿ ಮಡೆಸ್ನಾನಕ್ಕೂ, ಗಂಗಾಜಲ ವಿತರಣೆಗೂ ಯಾವ ವ್ಯತ್ಯಾಸವೂ ಇಲ್ಲ. ಆದ್ದರಿಂದ ಆಳುವ ವರ್ಗದ, ಮೂಲಭೂತವಾದಿ ಚಿಂತಕರ, 'ಓಟ್‌ಬ್ಯಾಂಕ್' ರಾಜಕಾರಣದಿಂದ ಹೊರಬಂದು ಜನರು ಎಚ್ಚೆತ್ತುಕೊಳ್ಳಬೇಕಾಗಿದೆ ಮತ್ತು "ನೂರು ದೇವರನ್ನೆಲ್ಲ ನೂಕಾಚೆದೂರ" ಎನ್ನುವ ಮನೋಸ್ಥಿತಿ ಪ್ರಜ್ಞಾವಂತ ಜನ ಸಮುದಾಯದ್ದಾಗಬೇಕಾಗಿದೆ.

- ಪೊನ್ನಪ್ಪ, ಮೂಡಿಗೆರೆ

ಜುಜುಬಿ ವಿಡಿಯೋ ನೋಡಿದ್ರೂ ತಪ್ಪೇನೂ ಇಲ್ಲ!

ಹಿಂದೂತ್ವವಾದಿಗಳು ರಸಿಕತೆ ತೋರದಿದ್ದರೆ ಅದು ಹಿಂದೂ ಪುರಾಣಗಳಿಗೆ ಅಪಚಾರ ಮಾಡಿದಂತೆ. ಕಾರಣ ಆರ್ಯ-ಹಿಂದೂ ಪುರಾಣಗಳ ಕೇಂದ್ರ ಬಿಂದುವೇ ರಸಿಕತೆ ಹಾಗೂ ವಿಷಯಾಸಕ್ತಿ.

ನಿರಾಕಾರ-ನಿರ್ವಿಕಾರ ದೇವರಿಗೆ ಮಾನವ ಆಕಾರ ಕೊಟ್ಟು, ಹೆಣ್ಣು- ಗಂಡೆಂದು ವಿಂಗಡಿಸಿ, ಆ ದೇವರಲ್ಲೂ ಅರಿಷಡ್ವರ್ಗ-ವಿಕಾರಗಳನ್ನು ತುಂಬಿ, ದೇವರ ಮದುವೆಗಳನ್ನು ಮಾಡುವುದರ ಹಿಂದಿರುವ ಮೂಲ ಮನೋಧರ್ಮವೇ ರಸಿಕತೆ. ಕೆಲವು ದೇವರಿಗೆ ಎರಡು-ಮೂರು ಹೆಂಡತಿಯರನ್ನು ಕಲ್ಪಿಸಲು ಕಾರಣ ಹಿಂದೂ ಪುರಾಣಕರ್ತರ ವಿಷಯಾಸಕ್ತಿ, ಸರ್ವಸಂಗ ಪರಿತ್ಯಾಗಿ ಅರಣ್ಯವಾಸಿ ಋಷಿ ಮುನಿಗಳಿಗೂ ಎರಡು-ಮೂರು ಹೆಂಡತಿಯರನ್ನು ಕಥೆಗಾರರು ಕಲ್ಪಿಸಿದ್ದು ಅವರ ರಸಿಕತೆಗೆ ಸಾಕ್ಷಿ. ಭಾರತೀಯ ಪೌರಾಣಿಕ ಕಥೆಗಳನ್ನು ವಿಶ್ಲೇಷಿಸಿದಾಗ ಇದು ಅರ್ಥವಾಗುತ್ತದೆ. ಕೃಷ್ಣ-ರಾಧೆ, ಕೃಷ್ಣ-ರುಕ್ಮಿಣಿ, ಕೃಷ್ಣ-ತುಳಸಿ, ಶ್ರೀನಿವಾಸ ಕಲ್ಯಾಣ, ಭಸ್ಮಾಸುರ-ಮೋಹಿನಿ ಕಥೆ, ಮಣಿಕಂಠ ಜನನ, ವಿಶ್ವಾಮಿತ್ರ-ಮೇನಕೆ, ದೇವೇಂದ್ರನ ಕಚ್ಚೆಹರುಕತನ, ದೇವಲೋಕದಲ್ಲಿ ರಂಭೆ, ಊರ್ವಶಿ, ಮೇನಕೆಯರಂತಹ ಅಪ್ಸರೆ(ವೇಶ್ಯೆ)ಯರ ಕಲ್ಪನೆ, ಸೊಂಟದ ಮೇಲೆ ಬಟ್ಟೆಯೇ ಇಲ್ಲದ ದೇವ-ದೇವಿಯರ ಕಲ್ಪನೆ, ದೇವಸ್ಥಾನಗಳ ಗೋಡೆಯ ಮೇಲೆ ನಗ್ನ ಶಿಲಾಬಾಲಿಕೆಯರು, ಖಜೂರಾಹೊ ಮಿಥುನ ಶಿಲ್ಪಗಳು - ಇವೆಲ್ಲಾ ನಮ್ಮ ಪೂಜ್ಯ ಪೂರ್ವಜರ (ಆರ್ಯಣ್ಣರ) ರಸಿಕತೆ-ವಿಷಯಾಸಕ್ತಿಗಳಿಗೆ ಸಾಕ್ಷಿ. ಜಗತ್ತಿನ ಬೇರೆಡೆ ಭಕ್ತರು 'ದೇವರೇ ನನ್ನ ತಂದೆ' ಎಂದರೆ ಭಾರತದಲ್ಲಿ ಮೀರಾ, ಅಂಡಾಳ್‌ಗಳಂತಹ ಮಹಾನ್ ಭಕ್ತೆಯರು 'ದೇವರೇ ನನ್ನ ಗಂಡ' ಎಂದದ್ದೂ ರಸಿಕಪೂರ್ಣ-ಭಕ್ತಿ ಎನ್ನುತ್ತಾರೆ ಕೆಲವರು.

ಮಹಾಭಾರತದ ಕತೆಯು ಮಹಾ-ವ್ಯಭಿಚಾರದ ಕಥೆ ಎಂಬ ಖ್ಯಾತಿ ಹೊಂದಿದ್ದು ಪುರಾತನ ಈಜಿಪ್ಟ್, ಗ್ರೀಕ್ ಪುರಾಣಗಳಂತೆ ವ್ಯಭಿಚಾರದ ವೈಭವೀಕರಣ ಹೊಂದಿದೆ. ಮಹಾಭಾರತ ಮಹಾಕಾವ್ಯ ಬರೆದ ವೇದವ್ಯಾಸರು ಸ್ವತಃ ಅದರಲ್ಲಿ ಪಾಲ್ಗೊಂಡಂತೆ ಚಿತ್ರಿಸಲಾಗಿದೆ. ಮಕ್ಕಳಿಲ್ಲದೇ ಸತ್ತ ವಿಚಿತ್ರವೀರ್ಯನ ವಿಧವೆಯರಾದ ಅಂಬೆ-ಅಂಬಾಲಿಕೆ ಇಬ್ಬರಿಗೂ ನಂತರ ತಾನೇ ಗರ್ಭದಾನ ಮಾಡಿ ಧೃತರಾಷ್ಟ್ರ ಹಾಗೂ ಪಾಂಡುವಿನ ಹುಟ್ಟಿಗೆ ಕಾರಣ ಎಂಬಂತೆ ಈ ಪುರಾಣಕರ್ತರು ತನ್ನನ್ನು ತಾನೇ ವ್ಯಭಿಚಾರಿಯಂತೆ ಚಿತ್ರಿಸಿಕೊಂಡಿದ್ದಾರೆ. ಕಾಮಸೂತ್ರ ಬರೆದ ವಾತ್ಸ್ಯಾಯನನು ಭಾರತೀಯನಾಗಿದ್ದುದರಲ್ಲಿ ಆಶ್ಚರ್ಯವಿಲ್ಲ. ತುಂಬಿದ ರಾಜಸಭೆಯಲ್ಲಿ ದ್ರೌಪದಿಯ 'ಲೈವ್' ವಸ್ತ್ರಾಪಹರಣ ನೋಡಿ ಹಿರಿಯ ಭೀಷ್ಮಾಚಾರ್ಯರೇ ಸುಮ್ಮನಿದ್ದಾಗ, ಸದನದಲ್ಲಿ ಬ್ಲೂ ಬಾಯ್ಸ್ ಯಃಕಶ್ಚಿತ್ ಮೊಬೈಲ್‌ನಲ್ಲಿ ಜುಜುಬಿ ವಿಡಿಯೋ ನೋಡಿದ್ದು ಅಂತಹ ತಪ್ಪೇನೂ ಅಲ್ಲ ಬಿಡಿ.

- ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು

Registered No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 14/- 14-03-2012 RNI No. KARKAN2005/14


ರವಿಯ ಕ್ರೇಜಿ ಸಮಯ

ಮುಂಬರುವ ದಿನಗಳಲ್ಲಿ ರವಿಚಂದ್ರನ್ ಚಿತ್ರಗಳ ಮೆರವಣಿಗೆಯೇ ನಡೆಯಲಿದೆ. ಕಳೆದ ವರ್ಷ ರವಿಚಂದ್ರನ್ ಅವರು ನಟಿಸಿರುವ ಚಿತ್ರಗಳಿಗೆ ಒಂದು ರೀತಿಯ ಬರವಿತ್ತು, ಆದರೆ ಈ ವರ್ಷದ ಆರಂಭದಲ್ಲೇ ಅವರು ನಟಿಸಿರುವ ಮೂರ್‍ನಾಲ್ಕು ಚಿತ್ರಗಳು ಬಿಡುಗಡೆಯಾಗಲು ತಯಾರಾಗಿವೆ.

ತನ್ನ ಹುಟ್ಟುಹಬ್ಬವಾದ ಮೇ 30 ರಂದು ರವಿಚಂದ್ರ ಅವರು ತಮ್ಮ ಸ್ವಂತ ನಿರ್ಮಾಣದ 'ಮಂಜಿನ ಹನಿ' ಚಿತ್ರವನ್ನು ಬಿಡುಗಡೆ ಮಾಡಲಿದ್ದಾರೆಂಬ ಸುದ್ದಿ ಕೇಳಿಬರುತ್ತಿದೆ. ಈ ಮಹತ್ವಾಕಾಂಕ್ಷೆಯ ಚಿತ್ರವನ್ನು ರವಿಚಂದ್ರನ್ ಕಳೆದ ಮೂರು ವರ್ಷಗಳಿಂದ ಚಿತ್ರೀಕರಿಸುತ್ತಲೇ ಇದ್ದಾರೆ. ಈ ಚಿತ್ರ ಒಂದು ರೀತಿಯಲ್ಲಿ ರವಿಚಂದ್ರನ್ ಪಾಲಿಗೆ 'ಮಾಡು ಇಲ್ಲವೇ ಮಡಿ' ಚಿತ್ರವಾಗಲಿದೆ ಎಂಬುದು ಉದ್ಯಮದವರ ಲೆಕ್ಕಾಚಾರ. ಅದು ಬಾಕ್ಸ್ ಆಫೀಸ್‌ನಲ್ಲಿ ಗೆದ್ದರೆ ಕ್ರೇಜಿ ಸ್ಟಾರ್‌ಗೆ ಮತ್ತೊಮ್ಮೆ ತಾರಾಮೌಲ್ಯ ಮತ್ತು ಪುನರ್ಜನ್ಮ ಸಿಗುತ್ತದೆ. ಆದರೆ ಹೆಚ್ಚುಕಮ್ಮಿಯಾಗಿ ರವಿಚಂದ್ರ ಅವರ ಈ ಹಿಂದಿನ ಮಹತ್ವಾಕಾಂಕ್ಷೆಯ ಚಿತ್ರವಾಗಿದ್ದ 'ಏಕಾಂಗಿ' ತರಹ 'ಮಂಜಿನ ಹನಿ' ಚಿತ್ರವೂ ಮುಗ್ಗರಿಸಿದರೆ ಗಾಂಧಿನಗರದ ಮಟ್ಟಿಗೆ ಅವರು ಫಿನಿಷ್ ಆದಂತೆ ಎಂಬ ಮಾತು ಕೇಳಿಬರುತ್ತಿದೆ.

ಈ ಚಿತ್ರದ ಹೊರತಾಗಿ ರವಿಚಂದ್ರನ್ ನಟಿಸಿರುವ ಇನ್ನು ಮೂರು ಚಿತ್ರಗಳು ಈಗ ಬಿಡುಗಡೆಗೆ ತಯಾರಾಗಿವೆ. ಇದರಲ್ಲಿ ಮುಖ್ಯವಾಗಿ ಕವಿತಾ ಲಂಕೇಶ್ ನಿರ್ದೇಶನದ 'ಕ್ರೇಜಿ ಲೋಕ', ಕೆ.ಸಿ.ಎನ್. ಕುಮಾರ್ ನಿರ್ಮಾಣದ 'ನರಸಿಂಹ' ಮತ್ತು ಸೂರಪ್ಪಬಾಬು ನಿರ್ಮಾಣದ 'ದಶಮುಖ' ಚಿತ್ರಗಳಿವೆ. ಜೊತೆಗೆ ಅಣಜಿ ನಾಗರಾಜ್ ನಿರ್ಮಾಣದ 'ಪರಮಶಿವ' ಕೂಡ ಈಗ ಚಿತ್ರೀಕರಣ ಮುಗಿಸಿದೆ. ಈ ನಾಲ್ಕು ಚಿತ್ರಗಳ ನಿರ್ಮಾಪಕರ ನಡುವೆ ಈಗ ತಮ್ಮ ಚಿತ್ರವನ್ನು ಬಿಡುಗಡೆ ಮಾಡುವ ಪೈಪೋಟಿ ನಡೆಯುತ್ತಿದೆ.

ವಿಶೇಷವೆಂದರೆ ಈ ಐದೂ ಚಿತ್ರಗಳು ಅದ್ದೂರಿಯಾಗಿ ನಿರ್ಮಾಣಗೊಂಡಿವೆ. ಇವು ಸಾಲುಸಾಲಾಗಿ ಬಿಡುಗಡೆಗೊಂಡರೆ ಕೆಲ ನಿರ್ಮಾಪಕರು ನಷ್ಟ ಹೊಂದುವ ಅಪಾಯಗಳಿವೆ. ಅದೇನೇ ಇರಲಿ, ಈ ವಯಸ್ಸಿನಲ್ಲೂ ರವಿಚಂದ್ರನ್ ಅವರು ನಟಿಸಿರುವ ಚಿತ್ರಗಳು ಪರಸ್ಪರ ಪೈಪೋಟಿ ನೀಡಲು ಸಜ್ಜಾಗಿರುವುದು ಮಜವಾಗಿದೆ...





ಗ್ಯಾಂಗ್ ಸ್ಟಾರ್‌ಗಳು!

ಸುದೀಪ್ ಸ್ನೇಹಿತರ ಬಳಗದಲ್ಲಿ ಭಾರೀ ಬದಲಾವಣೆಗಳಾಗಿವೆ. ಸುದೀಪ್‌ನ ವೃತ್ತಿಜೀವನದ ಆರಂಭದಿಂದಲೂ ಆತನ ಸಾಂಪ್ರದಾಯಿಕ ವೈರಿಯಂತಿದ್ದ ದರ್ಶನ್ ಜೊತೆ ಈಗ ಸುದೀಪ್ ಆಪ್ತಮಿತ್ರನಂತೆ ಎಲ್ಲೆಡೆಗೆ ಹೋಗುತ್ತಿರುವುದು ಎಲ್ಲರಿಗೂ ತಿಳಿದಿರುವ ವಿಷಯ.

ಅದಕ್ಕಿಂತಲೂ ಮುಖ್ಯವಾದ ಬದಲಾವಣೆ ಯಾವುದೆಂದರೆ ಸುದೀಪ್‌ನ ಆಪ್ತಸ್ನೇಹಿತ ಮತ್ತು ಬಲಗೈ ಬಂಟನಂತಿದ್ದ ನಿರ್ಮಾಪಕ ಶಂಕ್ರೇಗೌಡರ ಸ್ಥಾನವನ್ನು ಈಗ ದ್ವಾರಕೀಶ್‌ರ ಪುತ್ರ ಯೋಗೀಶ್ ಆಕ್ರಮಿಸಿಕೊಂಡಿರುವುದು. ಸೆಲೆಬ್ರಿಟಿ ಕ್ರಿಕೆಟ್ ಪಂದ್ಯಾವಳಿಯ ಆರಂಭದ ದಿನಗಳಲ್ಲಿ ಸುದೀಪ್ ಜೊತೆ ಕ್ರಿಕೆಟ್ ಪ್ರಾಕ್ಟೀಸ್ ಮಾಡುತ್ತಿದ್ದ ಶಂಕ್ರೇಗೌಡ ಮೊದಲ ಟೂರ್ನಮೆಂಟ್‌ನಲ್ಲಿ ತಂಡದಲ್ಲೂ ಸ್ಥಾನವನ್ನು ಗಳಿಸಿಕೊಂಡಿದ್ದರು. ಉತ್ತಮವಾಗಿ ಬ್ಯಾಟಿಂಗ್ ಮತ್ತು ಬೌಲಿಂಗ್ ಮಾಡಿ ಶಂಕ್ರೇಗೌಡ ಒಂದು ರೀತಿಯಲ್ಲಿ ಹೀರೋ ಎನಿಸಿಕೊಂಡಿದ್ದರು. ಆದರೆ ಈ ಭಾರಿ ಶಂಕ್ರೇಗೌಡ ಅವರಿಗೆ ಕೊಕ್ ನೀಡಲಾಯಿತು. ಕನಿಷ್ಠ 12ನೇ ಆಟಗಾರನಾಗಿಯೂ ಆತನಿಗೆ ತಂಡದಲ್ಲಿ ಸ್ಥಾನ ಸಿಕ್ಕಲಿಲ್ಲ.

ಈ ಮಧ್ಯೆ ಸುದೀಪ್ ಅವರ 'ಚಿಂತಕರ ಛಾವಡಿ'ಯಲ್ಲಿ ದ್ವಾರಕೀಶ್‌ರವರ ಮಗ ಯೋಗೀಶ್ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಈ ಹಿಂದೆ ಶಂಕ್ರೇಗೌಡ ಹೇಗೆ ಸುದೀಪ್‌ರವರ ಹಿಂದೆಮುಂದೆ ಸುತ್ತಾಡುತ್ತಿದ್ದರೋ ಅದೇ ರೀತಿ ಈಗ ಸುದೀಪ್ ಹೋದಲ್ಲಿ, ಬಂದಲ್ಲಿ ಯೋಗೀಶ್ ಪ್ರತ್ಯಕ್ಷರಾಗುತ್ತಿದ್ದಾರೆ.



ಮತ್ತೆ ಜೊತೆಯಾದ ರಮ್ಯಾ-ಪ್ರೇಮ್ ಜೋಡಿ

'ಜೊತೆಜೊತೆಯಲಿ' ಚಿತ್ರದ ಜೋಡಿ ರಮ್ಯಾ ಮತ್ತು ಪ್ರೇಮ್ ಸುಮಾರು ಆರು ವರ್ಷಗಳ ಹಿಂದೆ ಪ್ರೇಕ್ಷಕರನ್ನು ಮೋಡಿ ಮಾಡಿತ್ತು, ಎರಡು ವರ್ಷಗಳ ಹಿಂದೆ ಅದೇ ಜೋಡಿ 'ಜೊತೆಗಾರ' ಎಂಬ ಚಿತ್ರದಲ್ಲಿ ಕಾಣಿಸಿಕೊಂಡರೂ ಪ್ರೇಕ್ಷಕರು ಅಷ್ಟೇನೂ ಉತ್ಸಾಹದಿಂದ ಸ್ಪಂದಿಸಿರಲಿಲ್ಲ, ಈಗ ಮತ್ತೆ 'ಚಂದ್ರ' ಎಂಬ ಚಿತ್ರದಲ್ಲಿ ಈ ಜೋಡಿ ಒಂದಾಗಿದೆ.

ಇವರನ್ನು ಮತ್ತೆ ಒಂದು ಮಾಡುತ್ತಿರುವುದು 'ಮುಖಪುಟ' ಚಿತ್ರದ ನಿರ್ದೇಶಕಿ ರೂಪಾ ಅಯ್ಯರ್. ಈ ಚಿತ್ರದಲ್ಲಿ ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ ಶ್ರೀಶಾಂತ್ ಕೂಡ ಒಂದು ಪ್ರಮುಖ ಪಾತ್ರ ನಿರ್ವಹಿಸಲಿದ್ದಾರಂತೆ.

'ಮುಖಪುಟ' ಚಿತ್ರದ ನಂತರ ರೂಪಾ ಅಯ್ಯರ್ ಲಂಡನ್‌ನಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನಕ್ಕೆ ಅತಿಥಿಗಳನ್ನು ಬೆಂಗಳೂರಿನಿಂದ ಕರೆದುಕೊಂಡು ಹೋಗುವಲ್ಲಿ ಸಿಕ್ಕಾಪಟ್ಟೆ ಬಿಸಿಯಾಗಿದ್ದರು. ಆ ಸಮ್ಮೇಳನಕ್ಕೆ ಬೆರಳೆಣಿಕೆಯಷ್ಟು ಕಲಾವಿದರು ಹಾಜರಿಗಿದ್ದು ಅವರಲ್ಲಿ ಪ್ರಮುಖರು ಅಂಬರೀಷ್ ಮತ್ತು ರಮ್ಯಾ.

ಆ ಸಮ್ಮೇಳನದ ಸಂದರ್ಭದಲ್ಲಿ ರಮ್ಯಾಳ ಸ್ನೇಹ ಸಂಪಾದಿಸಿದ ರೂಪಾ ಈಗ ರಮ್ಯಾಳನ್ನು ಹಾಕಿಕೊಂಡು ಸಿನಿಮಾ ಮಾಡುತ್ತಿದ್ದಾರೆ. ಅಂದಹಾಗೆ, ಈಗ ಗಾಂಧಿನಗರದಲ್ಲಿ ನತದೃಷ್ಟ ಎಂಬ ಹಣೆಪಟ್ಟಿಗೆ ಒಳಗಾಗಿರುವ ಪ್ರೇಮ್‌ನ ಅದೃಷ್ಟ ಈ ಚಿತ್ರದ ಮುಖಾಂತರವಾದರೂ ಖುಲಾಯಿಸುತ್ತದೆಯೇ ಎಂಬುದನ್ನು ಕಾದು ನೋಡಬೇಕು.

ಕಿಚ್ಚನ ಬಚ್ಚನ್ ಚಿತ್ರ!



ಇದೊಂದು ಗಾಳಿ ಸುದ್ದಿ

ಅದೇನೆಂದರೆ ಸುದೀಪ್ ನಾಯಕನಾಗಿ ನಟಿಸಿ, ಶಶಾಂಕ್ ನಿರ್ದೇಶಿಸಲಿರುವ ಹೊಸ ಚಿತ್ರಕ್ಕೆ 'ಬಚ್ಚನ್' ಎಂದು ಹೆಸರಿಡಲಾಗಿದೆಯಂತೆ. ಈ ಚಿತ್ರದ ಮುಖಾಂತರ ಶಶಾಂಕ್ ಫುಲ್ ಲೆನ್ತ್ ಕಮರ್ಷಿಯಲ್ ನಿರ್ದೇಶಕ ಆಗುವ ತನ್ನ ಕನಸನ್ನು ನನಸು ಮಾಡಲು ಹೊರಟಂತಿದೆ. ಈ ಹಿಂದೆ ಶಶಾಂಕ್ ನಿರ್ದೇಶಿಸಿದ್ದ 'ಜರಾಸಂಧ' ಸಿನಿಮಾ "ಭಾರತೀಯ ಚಿತ್ರರಂಗದ ಇತಿಹಾಸದಲ್ಲೇ ಬಹಳ ದೊಡ್ಡ ಹೆಸರು ಮಾಡುತ್ತದೆ" ಎಂದು ಸ್ವತಃ ಆತನೇ ತುತ್ತೂರಿ ಊದಿದ್ದರು. ಆದರೆ ಅವರ ದುರಾದೃಷ್ಟಕ್ಕೋ ಏನೋ ವಿಜಯ್ ನಾಯಕನಾಗಿದ್ದ 'ಜರಾಸಂಧ' ಮಾರುಕಟ್ಟೆಯಲ್ಲಿ ಸಂಪೂರ್ಣವಾಗಿ ಮುಗ್ಗರಿಸಿತ್ತು.

"ವಿಜಯ್‌ಗಿಂತ ಹೆಚ್ಚು ತಾರಾಮೌಲ್ಯ ಹೊಂದಿರುವ ಸುದೀಪ್‌ನನ್ನು ಹಾಕಿಕೊಂಡು ನನ್ನ ಹೊಸ ಚಿತ್ರವನ್ನು ಪಕ್ಕಾ ಕಮರ್ಷಿಯಲ್ ಮಾದರಿಯಲ್ಲೇ ಮಾಡಿ, ಅದು 'ಬಿ' ಮತ್ತು 'ಸಿ' ಕೇಂದ್ರಗಳಿಗೂ ತಲುಪುವಂತೆ ಮಾಡುತ್ತೇನೆ" ಎಂದು ಶಶಾಂಕ್ ತನ್ನ ಆತ್ಮೀಯರಲ್ಲಿ ಹೇಳಿಕೊಂಡಿದ್ದಾರಂತೆ. ಅಂದರೆ 'ಬಚ್ಚನ್' ಚಿತ್ರದಲ್ಲಿ ಕನಿಷ್ಠ ಏಳೆಂಟು ಫೈಟ್‌ಗಳು ಇದ್ದೇಇರುತ್ತವೆ. ಜೊತೆಗೆ ಖಳನಾಯಕನನ್ನು ಹೀರೋ ತದುಕಿಹಾಕುವುದು, ಅಬ್ಬರದಿಂದ ಡೈಲಾಗ್‌ಗಳನ್ನು ಹೇಳುವುದೆ ಎಲ್ಲಾ ಇದ್ದೇ ಇರುತ್ತವೆ ಎಂದು ಪ್ರೇಕ್ಷಕ ಮಹಾಪ್ರಭು ಮೊದಲೇ ನಿರ್ಧರಿಸಬಹುದು.

ಶಶಾಂಕ್ ತಮ್ಮ ಆರಂಭದ ಚಿತ್ರಗಳಲ್ಲಿ ನವಿರಾದ ನಿರೂಪಣೆ ಮತ್ತು ಸೂಕ್ಷ್ಮ ಸಂವೇದನೆಯಿಂದ ಎಲ್ಲರ ಮನಸ್ಸನ್ನು ಗೆದ್ದವರು. ಆದರೆ ಈಗ ಪಕ್ಕಾ ಕಮರ್ಷಿಯಲ್ ಚಿತ್ರ ಮಾಡುವ ಆಸೆಯ ಬೆನ್ನೇರಿ ಆತ ತನ್ನ ಸೂಕ್ಷ್ಮತೆಯನ್ನು ಕಳೆದುಕೊಳ್ಳುತ್ತಿರುವುದು ಬೇಸರದ ವಿಷಯ.

ಚಾರ್‌ಮಿನಾರ್ ಚಂದ್ರು!



'ತಾಜ್‌ಮಹಲ್' ಖ್ಯಾತಿಯ ನಿರ್ದೇಶಕ ಚಂದ್ರು ಇದೀಗ 'ಚಾರ್‌ಮಿನಾರ್' ಎಂಬ ಹೊಸ ಚಿತ್ರವನ್ನು ತೆಗೆಯಲು ಹೊರಟಿದ್ದಾರಂತೆ.

'ತಾಜ್‌ಮಹಲ್' ನಂತರ ಚಂದ್ರು ನಿರ್ದೇಶಿಸಿದ್ದ 'ಮೈಲಾರಿ' ಬಾಕ್ಸ್ ಆಫೀಸ್‌ನಲ್ಲಿ ಸಾಕಷ್ಟು ಹಣ ಮಾಡಿ ಆತನಿಗೆ ಒಂದಿಷ್ಟು ಇಮೇಜ್ ತಂದುಕೊಟ್ಟಿತ್ತು, ಆದರೆ ಅದಾದನಂತರ ಅವರು ನಿರ್ದೇಶಿಸಿದ 'ಖೋ.. ಖೋ' ಎಂಬ ಅದ್ದೂರಿಯ ಚಿತ್ರ ಬಾಕ್ಸ್ ಆಫೀಸ್‌ನಲ್ಲಿ ಮುಗ್ಗರಿಸಿತ್ತು. ಇವತ್ತಿಗೂ ಗಾಂಧಿನಗರದ ಜನ ಈತನನ್ನು 'ತಾಜ್‌ಮಹಲ್ ಚಂದ್ರು' ಎಂದೇ ಕರೆಯುವುದರಿಂದ ಆತನಿಗೆ ಈ ತನಕ ಹೆಸರು, ಕೀರ್ತಿ ಮತ್ತು ತಾರಾಮೌಲ್ಯ ತಂದುಕೊಟ್ಟಿರುವುದು ಆ ಚಿತ್ರ ಮಾತ್ರ ಎಂದು ಗೊತ್ತಾಗುತ್ತದೆ.

ಈಗ 'ತಾಜ್‌ಮಹಲ್' ಮಾದರಿಯಲ್ಲೇ 'ಚಾರ್‌ಮಿನಾರ್' ಎಂಬ ಕಥೆಯನ್ನು ಚಂದ್ರು ಹೆಣೆದಿದ್ದಾರಂತೆ. ಅಂದರೆ ಅದೇ ಮಾದರಿಯ ಪ್ರೇಮಕಥಾ ವಸ್ತುವಿನ ಚಿತ್ರ ತೆಗೆಯುವ ಯೋಜನೆ ಅವರದು. 'ತಾಜ್‌ಮಹಲ್' ಚಿತ್ರದ ಹೆಸರಿಗೂ, ಕಥಾವಸ್ತುವಿಗೂ ಒಂದಿಷ್ಟಾದರೂ ಸಂಬಂಧವಿತ್ತು; ಯಾಕೆಂದರೆ ತಾಜ್‌ಮಹಲ್ ಎಂದಾಕ್ಷಣ ನಮ್ಮ ಕಣ್ಣೆದುರಿಗೆ ಆ ಪ್ರೇಮಸೌಧ ಬರುತ್ತದೆ. ಆದರೆ ಹೈದರಾಬಾದಿನಲ್ಲಿರುವ ಚಾರ್‌ಮಿನಾರ್‌ಗೆ ಅಂತಹ ಪ್ರೇಮಕತೆಯ ಹಿನ್ನೆಲೆ ಇಲ್ಲ, ಆದ್ದರಿಂದ ಚಂದ್ರು ಚಾರ್‌ಮಿನಾರ್ ಮುಖಾಂತರ ಒಂದು ಲವ್ ಸ್ಟೋರಿ ಹೇಳಲು ಹೊರಟಿರುವುದು ಹಾಸ್ಯಾಸ್ಪದವಾಗಿ ಕಾಣಿಸುತ್ತದೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com